ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 15 ಶುಕ್ರವಾರ 2023

₹4

ಸಂಪುಟ: 44 | ಸಂಚಿಕೆ: 238 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರು ಮಿತ್ರ

ಶುಕ್ರವಾರ 15 ಡಿಸೆಂಬರ್ 2023

ಹಿರಿಯ ಪತ್ರಕರ್ತ ಗೌರಿಸತ್ಯ, ರಘು ಕೌಟಿಲ್ಯ, ಡಾ.ಅಹಲ್ಯ ಸೇರಿ 18 ಸಾಧಕರಿಗೆ ಹೊಯ್ಸಳ ಪ್ರಶಸ್ತಿ



ಮೈಸೂರು,ಡಿ.14–ಮೈಸೂರಿನ ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗವು ಈ ಸಾಲಿನ ರಾಜ್ಯ ಮಟ್ಟದ ಹೊಯ್ಸಳ ಪ್ರಶಸ್ತಿಗೆ 18 ಮಂದಿ ವಿವಿಧ ಕ್ಷೇತ್ರಗಳ ಸಾಧಕರನ್ನು ಆಯ್ಕೆ ಮಾಡಿದೆ.

ಡಾ.ಡಿ.ಕೆ.ರಾಜೇಂದ್ರ (ಜನಪದ ಮತ್ತು ಸಾಹಿತ್ಯ), ಜೆ.ಸತ್ಯನಾರಾಯಣಗೌಡ (ಪತ್ರಿಕೋದ್ಯಮ), ಮೈಸೂರು ಕುಮಾರ್ (ಆಧ್ಯಾತ್ಮ ಮತ್ತು ಜ್ಯೋತಿಷ್ಯ), ರಘು ಕೌಟಿಲ್ಯ (ಶಿಕ್ಷಣ ಮತ್ತು ಆಡಳಿತ), ಡಾ.ಅಣ್ಣಯ್ಯ ಕುಲಾಲ್ (ವೈದ್ಯಕೀಯ, ಸಾಹಿತ್ಯ ಮತ್ತು ಸಂಘಟನೆ), ಡಾ.ಸಿ.ಜೆ.ಪ್ರಹ್ಲಾದರಾವ್ (ವೈದ್ಯಕೀಯ), ಶಿವಬಸಪ್ಪ ಹೊರೆಯಾಲ (ಆಡಳಿತ, ಸಾಹಿತ್ಯ ಮತ್ತು ರಂಗಭೂಮಿ), ಕುವೆಂಪು ಪ್ರಕಾಶ್ (ಸಂಘಟನೆ ಮತ್ತು ಗಾಯನ), ಅಶೋಕಕುಮಾರ್ ಮೆಹಂದಳೆ (ಸಣ್ಣ ಕಥೆ, ಕಾದಂಬರಿ), ಡಾ.ಪ್ರಶಾಂತ್ (ಛಾಯಾಗ್ರಹಣ ಮತ್ತು ಸಂಶೋಧನೆ), ಪ್ರೊ ಲಕ್ಷ್ಮೀದೇವಿ ನಾರಾಯಣ್ (ಶಿಕ್ಷಣ ಮತ್ತು ಸಾಹಿತ್ಯ), ಡಾ.ಅಹಲ್ಯ (ವೈದ್ಯಕೀಯ ಮತ್ತು ಆಡಳಿತ), ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ (ರೋಟರಿ ಸೇವೆ ಮತ್ತು ಸಂಘಟನೆ), ಡಾ.ಎಂ.ಎಸ್. ವಿಜಯಾ ಹರನ್ (ಆಕಾಶವಾಣಿ ಮತ್ತು ಸಾಹಿತ್ಯ), ಡಾ.ಜೆ.ವಿ.ಗಾಯತ್ರಿ (ಇತಿಹಾಸ ಮತ್ತು ಪತ್ರಾಗಾರ), ಡಾ.ಪ್ರತಿಭಾ ಪೇರೇರಾ (ವೈದ್ಯಕೀಯ), ವಿದುಷಿ ಅನಿತಾ (ಭರತ ನಾಟ್ಯ), ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರ ಸಂಘ (ಸಹಕಾರ). ಪ್ರಶಸ್ತಿ ಪ್ರದಾನ ಸಮಾರಂಭವು ಡಿ.24ರಂದು ಬೆಳಗ್ಗೆ 10.30ಕ್ಕೆ ನಗರದ ಗಾನಭಾರತಿ ವೀಣೆ ಶೇಷಣ್ಣ ಭವನದಲ್ಲಿ ನಡೆಯಲಿದೆ ಎಂದು ಪ್ರಧಾನ ಕಾರ್ಯದರ್ಶಿ ರಂಗನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನುವಾದಗಳ ಮೂಲಕ ಭಾರತೀಯ ಭಾಷಾ ಸಾಹಿತ್ಯ ಶ್ರೀಮಂತಗೊಳಿಸಬೇಕು

ಕುವೆಂಪು ಭಾಷಾ ಭಾರತಿಯ ಮಾಜಿ ಅಧ್ಯಕ್ಷ ಪ್ರೊ. ಪ್ರಧಾನ ಗುರುದತ್ತ ಅಭಿಮತ



ಮೈಸೂರು,ಡಿ.14–ಭಾರತೀಯ ಭಾಷೆಗಳನ್ನು ಕಲಿಯಬೇಕು. ಕನ್ನಡ ಭಾಷೆಯ ಶ್ರೇಷ್ಠ ಕೃತಿಗಳನ್ನು ಇತರ ಭಾರತೀಯ ಭಾಷೆಗಳಿಗೆ ಅನುವಾದ ಮಾಡಬೇಕು. ಕನ್ನಡ ಭಾಷೆಯ ಅಸ್ತಿತ್ವ ಪ್ರಾಚೀನವಾದದ್ದು, ಕನ್ನಡದ ಪ್ರಾಚೀನ ಕೃತಿಗಳನ್ನು ಬೇರೆ ಬೇರೆ ಭಾಷೆಗಳಿಗೆ ಅನುವಾದಿಸುವಲ್ಲಿ ಕುವೆಂಪು ಭಾಷಾ ಭಾರತಿ, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಮತ್ತು ಕರ್ನಾಟಕದಲ್ಲಿರುವ ವಿವಿಧ ವಿಶ್ವವಿದ್ಯಾಲಯಗಳು ಶ್ರಮಿಸುತ್ತಿವೆ. ಇವುಗಳಿಗೆ ಇನ್ನೂ ಪ್ರೋತ್ಸಾಹ ಸಿಗಬೇಕು ಎಂದು ವಿಶ್ರಾಂತ ಪ್ರಾಧ್ಯಾಪಕರು ಮತ್ತು ಕುವೆಂಪು ಭಾಷಾ ಭಾರತಿಯ ಮಾಜಿ ಅಧ್ಯಕ್ಷ ಪ್ರೊ. ಪ್ರಧಾನ ಗುರುದತ್ತ ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಭಾರತೀಯ ಭಾಷಾ ಸಂಸ್ಥಾನ ಸಹಯೋಗದೊಂದಿಗೆ ಏರ್ಪಡಿಸಿದ್ದ 'ಭಾರತೀಯ ಭಾಷಾ ಉತ್ಸವ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಭಾರತೀಯ ಭಾಷೆಗಳು ಎಷ್ಟು ವೈವಿಧ್ಯಮಯವಾಗಿವೆಯೋ ಅಷ್ಟೇ ವೈವಿಧ್ಯತೆ ಭಾರತೀಯ ಸಾಹಿತ್ಯದಲ್ಲಿ ಇದೆ. ಭಾರತೀಯ ಭಾಷೆಗಳಲ್ಲಿರುವ ಅತ್ಯುತ್ತಮ ಕೃತಿಗಳನ್ನು ಅನುವಾದಿಸಬೇಕು. ಕನ್ನಡ ಭಾಷೆಯಲ್ಲಿರುವ ಅತ್ಯುತ್ತಮ ಕೃತಿಗಳು ಭಾರತೀಯ ಇತರ ಭಾಷೆಗಳಿಗೆ ಅನುವಾದಗೊಂಡಂತೆ ಇತರ ಭಾರತೀಯ ಭಾಷೆಯ ಸಾಹಿತ್ಯ ಕನ್ನಡಕ್ಕೆ ಅನುವಾದವಾಗಬೇಕು. ಅನುವಾದಗಳ ಮೂಲಕ ಭಾರತೀಯ ಭಾಷೆಯ ವೈಶಿಷ್ಟ್ಯವನ್ನು ಪರಿಚಯಿಸಬೇಕು ಮತ್ತು ಶ್ರೀಮಂತಗೊಳಿಸಬೇಕು ಎಂದು ಗುರುದತ್ತ ಹೇಳಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ. ಎನ್.ಎಂ. ತಳವಾರ, ಪ್ರಪಂಚ ಇಂದು ವಿಜ್ಞಾನ ಮತ್ತು ತಂತ್ರಜ್ಞಾನದ ಬೆನ್ನು ಹತ್ತಿದೆ. ಇದು ತಪ್ಪೇನಲ್ಲ. ಆದರೆ ಇವಕ್ಕೂ ಮೂಲ ಭಾಷೆಯೇ ಎಂಬುದನ್ನು ಭಾರತೀಯ ಭಾಷಾ ಉತ್ಸವ ಮನವರಿಕೆ ಮಾಡಿಕೊಡುವಂತಿದೆ. ಭಾರತೀಯ ಭಾಷೆಗಳು ಹಲವಾದರೂ ಅಲ್ಲಿಯ ಭಾವ ಒಂದಿದೆ. ಐಕ್ಯತೆ ಅವುಗಳ ಮೂಲ ಮಂತ್ರ. ವಿಶ್ವ ಭಾವೈಕ್ಯದ ವಿಷಯದಲ್ಲಿ ಕನ್ನಡಿಗರದ್ದು ಹೆಮ್ಮೆಯ ಸಾಧನೆ. ಇದಕ್ಕೆ ಉದಾಹರಣೆ ರಾಷ್ಟ್ರಕವಿ ಕುವೆಂಪು ಅವರ ವಿಶ್ವಮಾನವ ಸಂದೇಶ ಎಂದು ಹೇಳಿದರು.

ಅಧ್ಯಕ್ಷೀಯ ನುಡಿಗಳನ್ನಾಡಿದ ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಕವಿ, ಭಾರತೀಯ ಸ್ವಾತಂತ್ರ್ಯ ಹೋರಾಟಗಾರ, ಸಮಾಜ ಸುಧಾರಕ ಮತ್ತು ಬಹುಭಾಷಾ ಕಾರರಾದ ಸುಬ್ರಹ್ಮಣ್ಯ ಭಾರತೀ ಅವರ ಜನ್ಮದಿನೋತ್ಸವವನ್ನು ಆಚರಿಸಲಾಗುತ್ತಿದೆ. ಅವರು 'ಭಾರತೀ–ಭಾರತೀಯಾರ್', 'ಮಹಾಕವಿ ಭಾರತೀ' ಹೆಸರಿನಿಂದ ಜನಪ್ರಿಯರಾಗಿದ್ದಾರೆ. ಭಾಷೆ ಹಲವು ಭಾವ ಒಂದು ಎಂಬುದು ಈ ಉತ್ಸವದ ಪ್ರಮುಖ ಸಂದೇಶವಾಗಿದೆ ಎಂದರು.

ಪ್ರೊ.ಲಕ್ಷ್ಮೀನಾರಾಯಣ ಅರೋರ ಭಾರತೀಯ ಭಾಷೆ–ಸಾಹಿತ್ಯಗಳು ಮತ್ತು ಐಕ್ಯತೆ' ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು. ಸಮಾರೋಪ ಸಮಾರಂಭದಲ್ಲಿ ಭಾರತೀಯ ಭಾಷಾ ಉತ್ಸವದ ಅಂಗವಾಗಿ ಏರ್ಪಡಿಸಿದ್ದ ರಾಜ್ಯಮಟ್ಟದ ಭಾಷಣ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗದು ಬಹುಮಾನ ಮತ್ತು ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

ಜೆಎಸ್‌ಎಸ್ ಕಾಲೇಜಿನ ಆರ್.ವಿ. ಅನನ್ಯ (ಪ್ರಥಮ), ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದ ಎನ್. ಲಕ್ಷ್ಮಿ (ದ್ವಿತೀಯ), ಜೆಎಸ್‌ಎಸ್ ಕಾಲೇಜಿನ ಆರ್. ಕುಸುಮಾಬಾಯಿ (ತೃತೀಯ), ಮಹಾರಾಣಿ ಮಹಿಳಾ ಕಾಲೇಜಿನ ಬಿ.ಜಿ. ಮೋನಿಕಾ ಸಮಾಧಾನಕರ ಬಹುಮಾನ ಪಡೆದರು. ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಪ್ರಾಂಶುಪಾಲರಾದ ಡಾ.ಎಸ್.ಪ್ರತಿಭಾ, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಬಿ. ಪ್ರಭುಸ್ವಾಮಿ, ಕನ್ನಡ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥ ಡಾ.ಬಿ.ಎಸ್. ಸುದೀಪ್ ಇನ್ನಿತರರು ಉಪಸ್ಥಿತರಿದ್ದರು.

ಸಿರಿಧಾನ್ಯ ಬೆಳೆಯಲ್ಲಿ ರಾಜ್ಯಕ್ಕೆ ದೇಶದಲ್ಲಿ ನಾಲ್ಕನೇ ಸ್ಥಾನ

ಮೊದಲ ಸ್ಥಾನಕ್ಕೆ ಬರುವ ಉದ್ದೇಶ: ಸಿಎಂ ಸಿದ್ದರಾಮಯ್ಯ



ಬೆಂಗಳೂರು, ಡಿ.14(ಕೆಎಂಶಿ)– ಸಿರಿಧಾನ್ಯ ಬೆಳೆಯಲ್ಲಿ ಕರ್ನಾಟಕ ದೇಶದಲ್ಲಿ 4ನೇ ಸ್ಥಾನದಲ್ಲಿದೆ. ಇದು ಸಾಲದು, ದೇಶದಲ್ಲಿಯೇ ಅತಿಹೆಚ್ಚು ಸಿರಿಧಾನ್ಯ ಬೆಳೆಯುವ ರಾಜ್ಯವಾಗಬೇಕು ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.



ಸಿರಿಧಾನ್ಯ ಮತ್ತು ಸಾವಯವ ಅಂತಾರಾಷ್ಟ್ರೀಯ ದಿನ–2023 ಮತ್ತು ಮೇಳದ ಪೂರ್ವಭಾವಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಿರಿಧಾನ್ಯಗಳ ಬಳಕೆ, ಲಾಭಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಇಂತಹ ಮೇಳಗಳು ಸಹಕಾರಿಯಾಗಿವೆ ಎಂದರು.

ಸಾವಯವ ಕೃಷಿಯತ್ತ ರೈತರು ಮುಖ ಮಾಡಿದ್ದು, ಸಾವಯವ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿದೆ, ಇಂದು ವಿಶ್ವದಲ್ಲಿ ಸಿರಿಧಾನ್ಯ ದಿನವನ್ನು ಆಚರಿಸಲಾಗುತ್ತಿದೆ, ಜನರಲ್ಲಿ ಹಾಗೂ ರೈತರಲ್ಲಿ ಸಿರಿಧಾನ್ಯಗಳ ಬಗ್ಗೆ ಜಾಗೃತಿ ಮೂಡಿಸಬೇಕು ಹಾಗೂ ಇವುಗಳಿಗೆ ಮಾರುಕಟ್ಟೆ ಒದಗಿಸಬೇಕು. ಸಾವಯವ ಕೃಷಿ ಪದ್ಧತಿ, ಸಿರಿಧಾನ್ಯಗಳ ಬಗ್ಗೆ ಜಾಗೃತಿ ಮೂಡಿಸಲು ಬೆಂಗಳೂರಿನಲ್ಲಿ ಜನವರಿ 5, 6, 7ರಂದು ಸಿರಿಧಾನ್ಯ ಮೇಳ ಏರ್ಪಡಿಸಲಾಗಿದೆ ಎಂದರು. ಮೊದಲು ರಾಗಿ, ಜೋಳ, ನವಣೆ, ಸಾಮೆ, ಆರ್ಕವನ್ನು ಬೆಳೆಯುತ್ತಿದ್ದೆವು, ಮಳೆ ಕಡಿಮೆಯಾಗುವ ಪ್ರದೇಶಗಳಲ್ಲಿ ಸಿರಿಧಾನ್ಯಗಳನ್ನು ಬೆಳೆಯಲಾಗುತ್ತದೆ.

ಸಿರಿಧಾನ್ಯಗಳು ಆರೋಗ್ಯಕ್ಕೆ ಒಳ್ಳೆಯದೆಂದು ಅರಿತಿರುವ ಜನ ಹೆಚ್ಚೆಚ್ಚು ಬಳಕೆ ಮಾಡುತ್ತಿದ್ದಾರೆ, ಇದರಲ್ಲಿ ಕಾರ್ಬೋಹೈಡ್ರೇಟ್ಸ್ ಕಡಿಮೆಯಿದ್ದು, ಲವಣಾಂಶ ಮತ್ತು ನಾರಿನಂಶ ಹೇರಳವಾಗಿದ್ದು, ಆರೋಗ್ಯಕ್ಕೆ ಉತ್ತಮವಾಗಿದೆ ಎಂದರು.

ಹಿಟ್ ಅಂಡ್ ರನ್: ಬೈಕ್ ಡಿಕ್ಕಿಯಾಗಿ ಕಾಂಗ್ರೆಸ್ ಎಂಎಲ್‌ಸಿ ತಾಯಿ ಸಾವು

ಕಲಬುರಗಿ: ಕಲಬುರಗಿಯ ಸೇಡಂ ರಿಂಗ್ ರಸ್ತೆಯಲ್ಲಿ ಹಿಟ್ ಅಂಡ್ ರನ್ ಪ್ರಕರಣಕ್ಕೆ ಕಾಂಗ್ರೆಸ್ ವಿಧಾನಪರಿಷತ್ ಸದಸ್ಯ ಅರವಿಂದ ಕುಮಾರ್ ಅರಳಿ ಅವರ ತಾಯಿ ಬಲಿಯಾಗಿದ್ದಾರೆ.

ಗುರುವಾರ ಸೇಡಂ ರಿಂಗ್ ರಸ್ತೆಯಲ್ಲಿರುವ ಟೊಯೋಟಾ ಶೋರೂಂ ಬಳಿ ಈ ಅಪಘಾತ ಸಂಭವಿಸಿದ್ದು, ಅರವಿಂದ ಅರಳಿ ಅವರ ತಾಯಿ ಸುಮಿತ್ರಾ ಬಾಯಿ ಅವರು ರಸ್ತೆ ದಾಟುತ್ತಿದ್ದ ವೇಳೆ ವೇಗವಾಗಿ ಬಂದ ಬೈಕ್ ಡಿಕ್ಕಿ ಹೊಡೆದಿದೆ.



ಸುಮಿತ್ರಾ ಬಾಯಿ

ಬೈಕ್ ಗುದ್ದಿದ ರಭಸಕ್ಕೆ ಸುಮಿತ್ರಾ ಬಾಯಿ (75) ಅವರು ಸ್ಥಳದಲ್ಲೇ ಕುಸಿದುಬಿದ್ದಿದ್ದು, ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಸುಮಿತ್ರಾಬಾಯಿ ಅವರು ಬೀದರ್‌ನಿಂದ ಕಲಬುರಗಿಯ ಬಿದ್ದಾಪುರ ಕಾಲೋನಿಯಲ್ಲಿರುವ ಅಳಿಯನ ಮನೆಗೆ ಆಗಮಿಸಿದ್ದ ವೇಳೆ ಅಪಘಾತ ನಡೆದಿದೆ. ಈ ಸಂಬಂಧ ಕಲಬುರಗಿಯ ಸಂಚಾರಿ ಪೊಲೀಸ್ ಠಾಣೆಯಲ್ಲಿ ಹಿಟ್ ಅಂಡ್ ರನ್ ಪ್ರಕರಣ ದಾಖಲಾಗಿದೆ.

ಮಾಜಿ ಪಾಲಿಕೆ ಸದಸ್ಯೆ ಭಾಗ್ಯ ಅವರಿಂದ ಸಿದ್ದಪ್ಪಾಜಿಗೆ ಬೆಳ್ಳಿ ದೀಪದ ಕಂಬ ಸಮರ್ಪಣೆ



ಮೈಸೂರು,ಡಿ.14–ಮೈಸೂರು ಮಹಾನಗರಪಾಲಿಕೆ ವಾರ್ಡ್ ನಂ.19ರ ನಿಕಟಪೂರ್ವ ಸದಸ್ಯೆ ಶ್ರೀಮತಿ ಭಾಗ್ಯ ಸಿ.ಮಹದೇಶ್ ಅವರು ಮೈಸೂರಿನ ಅಶೋಕಪುರಂನ ವಿಷ್ಣುವರ್ಧನ್ ರಸ್ತೆ, 7ನೇ ಕ್ರಾಸ್‌ನಲ್ಲಿರುವ ಶ್ರೀ ಸಿದ್ದಪ್ಪಾಜಿ ದೇವಾಲಯಕ್ಕೆ ಒಂದು ಜೊತೆ ಬೆಳ್ಳಿ ದೀಪದ ಕಂಬವನ್ನು ಇತ್ತೀಚೆಗೆ ಸಮರ್ಪಣೆ ಮಾಡಿದರು.

ಇದೇ ವೇಳೆ ದೇವಸ್ಥಾನದ ಧರ್ಮದರ್ಶಿಗಳು, ಶ್ರೀಮತಿ ಭಾಗ್ಯ–ಸಿ.ಮಹದೇಶ್ ದಂಪತಿಯನ್ನು ಅಭಿನಂದಿಸಿದರು.

ಶ್ರೀಮತಿ ನಳಿನಿ ಮಂಜು, ಮದನ್ ಮಹದೇಶ್, ನಂದನ್ ಮಹದೇಶ್, ಅಶೋಕಪುರಂ ಗ್ರಾಮಸ್ಥರಾದ ನಾಗರಾಜು, ಆ.ಪಿಲ್ಲಯ್ಯ, ಗುರುರಾಜ್, ಪ್ರಸಾದ್, ರಮೇಶ್, ಮಹದೇವಸ್ವಾಮಿ, ಚೆಲುವರಾಜು, ಪ್ರದೀಪ್, ಸತೀಶ್, ಸಣ್ಣಪ್ಪ, ಆ.ಗುಂಡಪ್ಪ, ಸರ್ವೋದಯ ಸಂಘದ ಯುವಕರು, ಶ್ರೀ ಸಿದ್ದಪ್ಪಾಜಿ ದೇವಾಲಯದ ಭಕ್ತಾದಿಗಳು ಉಪಸ್ಥಿತರಿದ್ದರು.

ಪಾಸ್‌ಪೋರ್ಟ್ ಕೇಂದ್ರ ಕಚೇರಿ ಕಟ್ಟಡ ಸೇವೆಗೆ ಸಮರ್ಪಿಸದಿದ್ದಲ್ಲಿ ಇದನ್ನು ನಿರ್ಮಿಸಿದ ಸಾರ್ಥಕತೆಯಾದರೂ ಏನು?

ಮಾಜಿ ಮೇಯರ್ ಸಂದೇಶ್ ಸ್ವಾಮಿ ಪ್ರಶ್ನೆ



ಮೈಸೂರು,ಡಿ.14–ಮೈಸೂರಿನ ಮೃಗಾಲಯ ರಸ್ತೆಯಲ್ಲಿ ನೂತನವಾಗಿ ಪಾಸ್‌ಪೋರ್ಟ್ ಕೇಂದ್ರ ಕಚೇರಿ ಕಟ್ಟಡ ನಿರ್ಮಿಸಿ ಎರಡು ವರ್ಷವಾದರೂ, ಅದನ್ನು ಉದ್ಘಾಟಿಸದ ಕಾರಣ ಕಟ್ಟಡ ಪಾಳು ಬೀಳುತ್ತಿದೆ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ದೂರಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಮೃಗಾಲಯ ರಸ್ತೆಯ ಆಕ್ವ ವರ್ಲ್ಡ್ ಎದುರು ಮುಡಾದಿಂದ ಕೋಟ್ಯಾಂತರ ರೂ ವೆಚ್ಚ ಮಾಡಿ, ಈ ಕಟ್ಟಡ ನಿರ್ಮಿಸಲಾಯಿತು. ಪಾಸ್‌ಪೋರ್ಟ್ ಕೇಂದ್ರ ಈ ಕಟ್ಟಡದಲ್ಲಿ ಇನ್ನೂ ಉದ್ಘಾಟನೆಯಾಗದ ಹಿನ್ನೆಲೆಯಲ್ಲಿ ಇದನ್ನು ಬೇರೆ ಯಾವುದಾದರೂ ಉದ್ದೇಶಕ್ಕೆ ಬಳಸುವ ಸಲುವಾಗಿ ವಿಳಂಬ ಧೋರಣೆ ಅನುಸರಿಸಲಾಗುತ್ತಿದೆಯೇ ಎಂಬ ಅನುಮಾನ ಕಾಡುತ್ತಿದೆ ಎಂದಿದ್ದಾರೆ.

ಈ ಹಿಂದೆ ಮೈಸೂರು ಸುತ್ತಮುತ್ತಲಿನ ನಾಗರಿಕರು ಬೆಂಗಳೂರಿಗೆ ಅಲೆಯುತ್ತಿದ್ದರು. ಇದನ್ನು ಮನಗಂಡ ಸಂಸದ ಪ್ರತಾಪ್ ಸಿಂಹ ಅವರು ಮೈಸೂರಿಗೆ ಪಾಸ್‌ಪೋರ್ಟ್ ಕೇಂದ್ರ ಕಚೇರಿ ಮಂಜೂರು ಮಾಡಿಸಿದ್ದು, ಈ ಕಚೇರಿ ಹಾಲಿ ಮೇಟಗಳ್ಳಿ ಅಂಚೆ ಕಚೇರಿಯಲ್ಲಿ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುತ್ತಿದೆ. ಪ್ರತಿನಿತ್ಯ ನೂರಾರು ಮಂದಿ ಈ ಕಚೇರಿಗೆ ಭೇಟಿ ನೀಡುತ್ತಿರುವುದರಿಂದ ಸೂಕ್ತ ಸ್ಥಳಾವಕಾಶ ಹಾಗೂ ಸೌಲಭ್ಯಗಳಿಲ್ಲದೆ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ.



ನೂತನವಾಗಿ ನಿರ್ಮಿಸಿರುವ ಪಾಸ್‌ಪೋರ್ಟ್ ಕಚೇರಿ ವಿಶಾಲವಾಗಿದ್ದು, ಉತ್ತಮ ಪಾರ್ಕಿಂಗ್ ಸೌಲಭ್ಯವನ್ನೂ ಹೊಂದಿದೆ. ಅಲ್ಲದೇ ಈ ಕಚೇರಿ ನಗರದ ಹೃದಯ ಭಾಗದಲ್ಲಿರುವುದರಿಂದ ಸಾರ್ವಜನಿಕರಿಗೆ ಅನುಕೂಲಕರವಾಗಿದೆ ಎಂದಿರುವ ಅವರು, ಜನರ ತೆರಿಗೆ ಹಣದಿಂದ ಕೋಟ್ಯಾಂತರ ರೂ. ವೆಚ್ಚ ಮಾಡಿ ನಿರ್ಮಿಸಿರುವ ಕಟ್ಟಡ ಪಾಳು ಬೀಳುವ ಮುನ್ನ ಅದನ್ನು ಉದ್ಘಾಟಿಸಿ ಸಾರ್ವಜನಿಕರ ಸೇವೆಗೆ ಉಪಯೋಗವಾಗುವಂತೆ ಮಾಡಬೇಕು ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಒತ್ತಾಯಿಸಿದ್ದಾರೆ.

ಹೊರ ರಾಜ್ಯಗಳಿಗೆ ಮೇವು ಸಾಗಾಣಿಕೆ ಮಾಡದಂತೆ ಆದೇಶ



ಮೈಸೂರು,ಡಿ.14– 2023ನೇ ಸಾಲಿನ ಮುಂಗಾರು ಹಂಗಾಮಿನ ಕೊರತೆಯಿಂದ ಬರ ಪರಿಸ್ಥಿತಿ ಉಂಟಾಗಿದ್ದು ಮೈಸೂರು ಜಿಲ್ಲೆಯ 9 ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಈಗಾಗಲೇ ಘೋಷಿಸಲಾಗಿದೆ. ಜಿಲ್ಲೆಯಲ್ಲಿ ಜಾನುವಾರುಗಳಿಗೆ ಮೇವಿನ ಸಮಸ್ಯೆ ಉಂಟಾಗುವ ಸಂಭವ ಇರುವುದರಿಂದ ಜಿಲ್ಲೆಯಿಂದ ಹೊರ ರಾಜ್ಯಗಳಿಗೆ ಮೇವು ಸಾಗಾಣಿಕೆ ಮಾಡುವುದನ್ನು ಜಿಲ್ಲಾಧಿಕಾರಿಗಳು ನಿರ್ಬಂಧಿಸಿ, ಆದೇಶಿಸಿದ್ದಾರೆ.


ಮುಂದುವರೆದ ಕಾವೇರಿ ಕ್ರಿಯಾ ಸಮಿತಿ ಧರಣಿ




ಮೈಸೂರು,ಡಿ.14(ಪಿಎಂ)– ತಮಿಳುನಾಡಿಗೆ ಕಾವೇರಿ ನೀರು ಹರಿಸದಂತೆ ಒತ್ತಾಯಿಸಿ ಪ್ರತಿದಿನ ನಡೆಸುತ್ತಿರುವ ಪ್ರತಿಭಟನಾ ಧರಣಿ ಗುರುವಾರವೂ ನಡೆಯಿತು. ಮೈಸೂರಿನ ಪುರಭವನದ ಎದುರು ನಡೆಯುತ್ತಿರುವ ಧರಣಿಯಲ್ಲಿ ಇಂದು ಹಲವು ಮುಖಂಡರು ಪಾಲ್ಗೊಂಡು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ವಾರದಿಂದ ಬೆಳಗಾವಿ ಸುವರ್ಣ ಸೌಧದಲ್ಲಿ ನಡೆಯುತ್ತಿರುವ ಕಲಾಪದಲ್ಲಿ ಶಾಸಕರು ತಮಿಳುನಾಡಿಗೆ ಕಾವೇರಿ ನೀರು ಹರಿಸದಂತೆ ಒತ್ತಾಯಿಸಬೇಕು ಎಂದು ಆಗ್ರಹಿಸಿದರು. ಸಮಿತಿ ಅಧ್ಯಕ್ಷ ಜಯಪ್ರಕಾಶ್ (ಜೆಪಿ), ಉಪಾಧ್ಯಕ್ಷ ಎಂ.ಜೆ.ಸುರೇಶ್ ಗೌಡ, ಮುಖಂಡರಾದ ಮೂಗೂರು ನಂಜುಂಡಸ್ವಾಮಿ, ತೇಜೇಶ್ ಲೋಕೇಶ್ ಗೌಡ, ಮೆಲ್ಲಹಳ್ಳಿ ಮಹದೇವಸ್ವಾಮಿ, ಪ್ರಣತಿ ಪ್ರಕಾಶ್, ನಿಶಾ, ಸಾಗರಿ, ಪುಟ್ಟಣ್ಣ, ನಾಗರಾಜ್, ಶ್ರೀನಿವಾಸ್, ಶುಭಶ್ರೀ, ಆಟೋ ಮಹಾದೇವಸ್ವಾಮಿ, ಪುಷ್ಪವತಿ, ಮಲ್ಲೇಶ್, ಯುವರಾಜ್, ಸಿ.ಹೆಚ್.ಕೃಷ್ಣಯ್ಯ, ಮಂಜುಳಾ, ಡಿ.ಮಹೇಶ್‌ಕುಮಾರ್, ರವೀಶ್, ನರಸಿಂಹಮೂರ್ತಿ, ಹನುಮಂತಯ್ಯ, ಪ್ರದೀಪ್ ಕುಮಾರ್ ಮತ್ತಿತರರು ಪಾಲ್ಗೊಂಡಿದ್ದರು.

7 ಮಂದಿಗೆ ನಾಳೆ ಕನಕ ಮಾರ್ಗ ಪ್ರಶಸ್ತಿ ಪ್ರದಾನ





ಮೈಸೂರು, ಡಿ. 14– ಅಖಿಲ ಕರ್ನಾಟಕ ಕನಕ ಮತ್ತು ರಾಯಣ್ಣ ಸಾಂಸ್ಕೃತಿಕ ಟ್ರಸ್ಟ್, ಅಖಿಲ ಕರ್ನಾಟಕ ಕನಕ ಮತ್ತು ರಾಯಣ್ಣ ನೌಕರರ ಒಕ್ಕೂಟ ಹಾಗೂ ಮಹಾದಾಸ ಶ್ರೀ ಭಕ್ತ ಕನಕದಾಸ ಸೇವಾ ಸಮಿತಿಯು ಕನಕ ಜಯಂತಿ ಪ್ರಯುಕ್ತ ಕನಕ ಮಾರ್ಗ ಪ್ರಶಸ್ತಿ ಪ್ರದಾನ ಸಮಾರಂಭವನ್ನು ತೊಣಚಿಕೊಪ್ಪಲಿನ ಗಣೇಶ ಭಂಡಾರ್ ವೃತ್ತದಲ್ಲಿ ಡಿಸೆಂಬರ್ 16ರಂದು ಸಂಜೆ 5.30ಕ್ಕೆ ಏರ್ಪಡಿಸಿದೆ.

ಮಾಧ್ಯಮ ಕ್ಷೇತ್ರದ ಅಂಶಿ ಪ್ರಸನ್ನಕುಮಾರ್, ಕಲಾಕ್ಷೇತ್ರದ ಮಿಮಿಕ್ರಿ ಗೋಪಾಲ್, ವೈದ್ಯಕೀಯ ಕ್ಷೇತ್ರದ ಡಾ. ಅಬ್ದುಲ್ ಖಾದರ್, ಸಾಹಿತ್ಯ ಕ್ಷೇತ್ರದ ಡಾ.ಲಿಂಗದಳ್ಳಿ ಹಾಲಪ್ಪ, ಡಾ.ಡಿ.ರವಿ, ಡಾ.ಕೆ.ಇ. ಗೋವಿಂದೇಗೌಡ, ಸಮಾಜ ಸೇವಕ ಆರ್.ಮಹದೇವ ಅವರಿಗೆ ಮಾಜಿ ಸಚಿವ ಎಚ್.ಎಂ. ರೇವಣ್ಣ ಪ್ರಶಸ್ತಿ ಪ್ರದಾನ ಮಾಡುವರು. ನಂತರ ಮಿಮಿಕ್ರಿ ಗೋಪಿ ಹಾಸ್ಯಸಂಜೆ ನಡೆಸಿಕೊಡುವರು. ಟ್ರಸ್ಟ್‌ನ ರಾಜ್ಯಾಧ್ಯಕ್ಷ ಡಾ.ಮಹೇಶ ಚಿಕ್ಕಲ್ಲೂರು ಕಾರ್ಯಕ್ರಮ ನಿರ್ವಹಿಸುವರು. ಎಂ.ಶಿವಕುಮಾರ್, ಮಹೇಂದ್ರ ಕಾಗಿನೆಲೆ ಪಾಲ್ಗೊಳ್ಳುವರು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.


ನಿಧನ

ಗ್ರೇಸಿ ಡಿ. ಆಲ್ಮೇದಾ



ಮೈಸೂರು, ಡಿ. 14–ಸೇಂಟ್ ಫಿಲೋಮಿನಾ ಚರ್ಚ್ ಪ್ಯಾರಿಸ್ ಪ್ರೀಸ್ಟ್ ಮತ್ತು ಹೆಚ್.ಡಿ.ಕೋಟೆ ನಿವಾಸಿ ಸ್ಟ್ಯಾನಿ ಡಿ ಆಲ್ಮೇದಾ ಅವರ ತಾಯಿ ಗ್ರೇಸಿ ಡಿ. ಆಲ್ಮೇದಾ (76) ನಗರದ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು. ಮೃತರು ಆರು ಮಂದಿ ಮಕ್ಕಳು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ನಾಗನಹಳ್ಳಿಯಲ್ಲಿರುವ ಸೇಕ್ರೆಡ್ ಹಾರ್ಟ್ ಚರ್ಚ್‌ನಲ್ಲಿ ಗುರುವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.12.2023 ಶುಕ್ರವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2023 ರಿಂದ 15.12.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಪೂಷಾ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕಣ್ಣಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಅಸೆಂಡೆನ್ಸ್ :** ಆರ್. ಚೇತನ್ ಅವರಿಂದ ವಾಟರ್‌ಕಲರ್ ಸೋಲೋ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10 ರಿಂದ.

■ **ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಗಾಂಧಿ ಅಧ್ಯಯನ ಕೇಂದ್ರ, ಗಾಂಧಿ ಭವನ, ಮಾನಸ ಗಂಗೋತ್ರಿ, ಮೈಸೂರು:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸ, ವಿದ್ಯಾವರ್ಧಕ ಕಾನೂನು ಕಾಲೇಜು ಸಹಾಯಕ ಪ್ರಾಧ್ಯಾಪಕ ಡಾ.ಕೆ.ಎಲ್.ಚಂದ್ರಶೇಖರ್ ಅವರಿಂದ ಭಾರತದ ಸಂವಿಧಾನ ಮತ್ತು ಅಂಬೇಡ್ಕರ್ ಕಟ್ಟಬಯಸಿದ ಭಾರತ ಕುರಿತು ಉಪನ್ಯಾಸ, ಅಧ್ಯಕ್ಷತೆ: ಡಿ.ದೇವರಾಜ್ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಪ್ರೊ.ಆರ್.ಕವಿತಾ, ಸ್ಥಳ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ :** ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿ ಸಂಘದ ಉದ್ಘಾಟನೆ, ಉದ್ಘಾಟನೆ: ಮೈಸೂರು ವಿವಿ ಹಣಕಾಸು ಅಧಿಕಾರಿ ಕೆ.ಎಸ್.ರೇಖಾ, ಮೈಸೂರು ವಿವಿ ನಿವೃತ್ತ ಗ್ರಂಥಪಾಲಕ ಡಾ.ಸಿ.ಪಿ. ರಾಮಶೇಷ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಚಂದ್ರಶೇಖರ, ಸ್ಥಳ: ಡಾ. ಎಸ್.ಆರ್.ರಂಗನಾಥನ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮಾಲಿನಿ ನೃತ್ಯಶಾಲೆ ಮತ್ತು ಸಾಂಸ್ಕೃತಿಕ ಕೇಂದ್ರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ :** ನಾಟ್ಯ ಮಯೂರಿ, ಸರ್ವಶ್ರೀ, ನಾಟ್ಯರಾಣಿ ಶಾಂತಲೆ ಪುರಸ್ಕೃತರಾದ ಮಾಲಿನಿ ನೃತ್ಯಶಾಲೆಯಿಂದ ಭರತನಾಟ್ಯ ಕಾರ್ಯಕ್ರಮ, ಸ್ಥಳ: ಶ್ರೀ ಲಕ್ಷ್ಮಿವೆಂಕಟೇಶ್ವರ ದೇವಸ್ಥಾನದ ಸಭಾಂಗಣ, ಒಂಟಿಕೊಪ್ಪಲು, ಸಂಜೆ 6ಕ್ಕೆ.

■ **ಸ್ನೇಹ ಕಿರಣ್ ಸ್ಪಾಸ್ಟಿಕ್ ಸೊಸೈಟಿ :** ಕ್ರಿಸ್‌ಮಸ್ ಆಚರಣೆ, ಅಧ್ಯಕ್ಷತೆ : ಬಿಷಪ್ ಡಾ. ಥಾಮಸ್ ಆಂತೋಣಿ ವಾಜಪಿಳ್ಳೈ, ಮುಖ್ಯ ಅತಿಥಿಗಳು : ಜೆರಾಲ್ಡ್ ಕ್ಯಾಸ್ಟೆಲಿನೋ, ರೆ.ಫಾ. ಪೀಟರ್, ಸ್ಥಳ: ಸ್ನೇಹ ಕಿರಣ್ ಸ್ಪಾಸ್ಟಿಕ್ ಸೊಸೈಟಿ ಸಭಾಂಗಣ, ಬೋಗಾದಿ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ, ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು:** ಕಾಗ್ನಿಟಿವ್ ಕಂಪ್ಯೂಟಿಂಗ್ ಅಂಡ್ ಇನ್‌ಫಾರ್ಮೇಷನ್ ಪ್ರೊಸೆಸಿಂಗ್ ಕುರಿತು ಅಂತರಾಷ್ಟ್ರೀಯ ಸಮ್ಮೇಳನ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು: ಸ್ಕೂಲ್ ಆಫ್ ಇನ್‌ಫಾರ್ಮೇಷನ್ ಟೆಕ್ನಾಲಜಿ ಡೀನ್ ಪ್ರೊ.ಪಿ.ಸೆಲ್ಲಪ್ಪನ್ ಪಳನಿಯಪ್ಪನ್, ಗೌರವ ಅತಿಥಿಗಳು: ಪ್ರೊ.ಎಂ.ಹೆಚ್.ಧನಂಜಯ, ಡಾ.ಬಿ.ಸುರೇಶ್, ಅಧ್ಯಕ್ಷತೆ: ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಕುಲಪತಿ ಡಾ.ಎ.ಎನ್.ಸಂತೋಷ್‌ಕುಮಾರ್, ಉಪಸ್ಥಿತರು : ಪ್ರಿನ್ಸಿಪಾಲ್ ಡಾ.ಸಿ.ನಟರಾಜು, ಕುಲಸಚಿವ ಪ್ರೊ.ಎಸ್.ಎ.ಧನರಾಜ್, ಸ್ಥಳ: ಸೆಮಿನಾರ್ ಹಾಲ್, ಗೋಲ್ಡನ್ ಜ್ಯೂಬಿಲಿ ಭವನ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಮಹಿಳೆಯರಿಗೆ ಉದ್ಯೋಗ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯ ಸಂಬಂಧ ಜಾಗೃತಿ ಮೂಡಿಸುವ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು : ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಎನ್. ನಂದಿನಿ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಡಾ. ಎನ್. ಪ್ರಭಾ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಾಧ್ಯಾಪಕರಾದ ಪ್ರೊ. ಲೋಲಾಕ್ಷಿ, ಕರಾಮುವಿವಿ ಕುಲಸಚಿವ ಪ್ರೊ. ಕೆ.ಎಲ್.ಎನ್. ಮೂರ್ತಿ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 10.30ಕ್ಕೆ.

■ **ಪ್ರಮತಿ ಎಜುಕೇಷನಲ್ ಇನ್ಸ್‌ಟಿಟ್ಯೂಷನ್ಸ್ :** ಪ್ರಮತಿ ಉತ್ಸವ, ಉಪಸ್ಥಿತರು : ಪ್ರಮತಿ ಅಲ್ಯೂಮನಿಗಳಾದ ಹಂಸಿನಿ ಎಸ್. ಕುಮಾರ್, ಎನಾಶ್ ಓಲಿವೇರಾ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಎಹೆಚ್‌ಎಆರ್ ಕುಲಪತಿ ಡಾ. ಸುರೀಂದರ್ ಸಿಂಗ್, ಸ್ಥಳ: ಕಲಾಮಂದಿರ, ಸಂಜೆ 4.30ಕ್ಕೆ.

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು:** ಕುವೆಂಪು ವಿರಚಿತ ನಾಟಕ ಜಲಗಾರ ಕುವೆಂಪು ನಮನ ಕಾರ್ಯಕ್ರಮ, ಉಪಸ್ಥಿತರು : ಉಪನ್ಯಾಸಕ ಡಾ.ಟಿ.ವಿ.ಸೋಮಶೇಖರ್, ಶ್ರೀಮತಿ ಎಸ್.ಬಿ.ಅನಿತಾ, ರಂಗಕರ್ಮಿ ಕಾ.ರ. ಗೋಪಾಲಕೃಷ್ಣ, ವಕೀಲ ಎಂ.ಶಿವಪ್ರಸಾದ್, ಸಾಹಿತಿ ಮಲ್ಕುಂಡಿ ಮಹದೇವಸ್ವಾಮಿ, ಗೌತಮ ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು, ಸ್ಥಳ: ಕಿರುರಂಗ ಮಂದಿರ, ಸಂಜೆ 6ಕ್ಕೆ.

■ **ಗೃಹಶೋಭೆ :** ಗೃಹಶೋಭೆ ಜೀವನ ಶೈಲಿಯ ಪ್ರದರ್ಶನ, ಉದ್ಘಾಟನೆ : ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಸ್ಥಳ: ಮಹಾರಾಜ ಕಾಲೇಜು ಮೈದಾನ, ಸಂಜೆ 6ಕ್ಕೆ.

■ **ಜಿಲ್ಲಾ ಮತ್ತು ತಾಲೂಕು ಶರಣ ಸಾಹಿತ್ಯ ಪರಿಷತ್ತು, ಎಸ್.ಎಸ್. ಫೌಂಡೇಷನ್ಸ್:** ಡಾ.ಎಸ್.ಪುಟ್ಟಪ್ಪ ಮುಡಿಗುಂಡರವರ 'ಮಹದೇಶ್ವರ ಗೀತಾಮೃತ' ಕೃತಿ ಬಿಡುಗಡೆ ಹಾಗೂ ವಚನ ಗಾಯನ, ಸಾನ್ನಿಧ್ಯ: ಕುದೇರು ಮಠದ ಶ್ರೀ ಗುರುಶಾಂತಸ್ವಾಮಿ, ಸಮ್ಮುಖ: ಬಸವ ಕೇಂದ್ರದ ಶ್ರೀ ಬಸವಯೋಗಿ ಪ್ರಭುಸ್ವಾಮಿ, ಶ್ರೀ ಬಸವೇಶ್ವರ ಮಠದ ಶ್ರೀ ಶಿವಪ್ರಭುಸ್ವಾಮಿ, ಕೃತಿ ಬಿಡುಗಡೆ: ಹಿರಿಯ ಜನಪದ ವಿದ್ವಾಂಸ ಡಾ.ಪಿ.ಕೆ. ರಾಜಶೇಖರ್, ಕೃತಿ ಕುರಿತು ಮಾತನಾಡುವವರು: ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಅಧ್ಯಕ್ಷತೆ: ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ ಉಪಸ್ಥಿತರು: ಲೇಖಕ ಡಾ.ಎಸ್.ಪುಟ್ಟಪ್ಪ ಮುಡಿಗುಂಡ, ಸ್ಥಳ: ಶರಣ ಭವನ, ಶ್ರೀ ಬಸವೇಶ್ವರ ಮಠ, ರಾಘವೇಂದ್ರನಗರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ– ಡಾ.ಎಸ್.ವಿ.ನರಸಿಂಹನ್, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಪದಸಂಸ್ಕೃತಿ, ಪ್ರಸ್ತುತಿ ಡಾ.ಹೆಚ್.ವಿ.ನಾಗರಾಜರಾವ್, 6.50 ರೈತರಿಗೆ ಸಲಹೆ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಅಕ್ಕರೆ ಸುಬ್ಬಲಕ್ಷ್ಮಿ–ಹಾಡುಗಾರಿಕೆ ಮತ್ತು ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಚಿತ್ತೂರು ಸುಬ್ರಹ್ಮಣ್ಯ ಪಿಳ್ಳೈ–ಹಾಡುಗಾರಿಕೆ, 4.00 ಮಹಿಳಾ ರಂಗ–ಸಖೀಪದ, ಪ್ರಸ್ತುತಿ–ಕೆ.ಬಿ.ಮೀನಾ, 4.30ವೃತ್ತಿ ಮಾರ್ಗದರ್ಶನ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಪ್ರೊ. ಶರಣಪ್ಪ ವೈಜನಾಥ ಹಲಸೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ– ದಿವಾಕರ ಹೆಗಡೆ, 6.50 ಕೃಷಿರಂಗ–ಕೃಷಿ ವಾರ್ತೆ ವಿಷಯ–ಕೃಷಿ ಆಯುಕ್ತಾಲಯ ಪ್ರಾಯೋಜಿತ ಕಾರ್ಯಕ್ರಮ, 8.00 ವಿದ್ವಾನ್ ವೆಂಕಟರಮಣ ಭಟ್ ಮತ್ತು ಸಂಗಡಿಗರಿಂದ ಕಾರ್ಯಕ್ರಮ ವೈವಿಧ್ಯ, 9.30 ಪಶು ಸಂಪತ್ತು ಮಾಲಿಕೆಯಲ್ಲಿ ಕಥಾ ನಾಟಕ "ಅಜ್ಞಾತವಾಸ", ಸಣ್ಣ ಕಥೆ– ಡಾ. ಬಸವರಾಜ ಕಟ್ಟೀಮನಿ ಬಾನುಲಿ ರೂಪ– ಡಾ. ವಿಜಯಾ, ನಿರ್ದೇಶನ– ಹೆಚ್.ಎಸ್. ಸರಸ್ವತಿ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 15 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 238 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

4 ಲಕ್ಷ ಅಕ್ರಮ ಕೃಷಿ ಪಂಪ್‌ಸೆಟ್ ಸಕ್ರಮ

● ವಿದ್ಯುತ್ ಕಂಬದಿಂದ 500 ಮೀಟರ್ ಅಂತರದಲ್ಲಿರುವ ಪಂಪ್‌ಸೆಟ್‌ಗೆ ಮಾತ್ರ ಇದು ಅನ್ವಯ ● ಸೌರಶಕ್ತಿ ಪಂಪ್‌ಸೆಟ್‌ಗೆ ಶೇ.80ರಷ್ಟು ಸಬ್ಸಿಡಿ ● ಕೃಷಿಗೆ 7 ಗಂಟೆ ವಿದ್ಯುತ್ ಪೂರೈಕೆ ● ಇಂಧನ ಸಚಿವ ಕೆ.ಜೆ.ಜಾರ್ಜ್ ಮಾಹಿತಿ





ಬೆಂಗಳೂರು, ಡಿ.14 (ಕೆಎಂಶಿ)– ರಾಜ್ಯದ ನಾಲ್ಕು ಲಕ್ಷ ಅಕ್ರಮ ಕೃಷಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿ ಮೂಲ ಸೌಕರ್ಯ ಕಲ್ಪಿಸುವುದಾಗಿ ಇಂಧನ ಸಚಿವ ಕೆ.ಜೆ.ಜಾರ್ಜ್ ವಿಧಾನ ಸಭೆ ಯಲ್ಲಿಂದು ಪ್ರಕಟಿಸಿರುವುದಲ್ಲದೆ, ನಮಗೆ ವಿದ್ಯುತ್ ಅಭಾವವಿಲ್ಲ, ಬೇಡಿಕೆ ಗಿಂತ ಹೆಚ್ಚಿದೆ ಎಂದಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಪಕ್ಷಾತೀತ ವಾಗಿ ಸದಸ್ಯರುಗಳು ಮಾಡಿದ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ವಿದ್ಯುತ್ ಕಂಬ ದಿಂದ 500 ಮೀಟರ್ ವ್ಯಾಪ್ತಿಯಲ್ಲಿನ ಅಕ್ರಮ ಪಂಪ್‌ಸೆಟ್ ಹಾಗೂ ಸಕ್ರಮಕ್ಕೆ ನೋಂದಾಯಿಸಲ್ಪಟ್ಟ ರೈತರಿಗೆ ಇದರ ಲಾಭ ದೊರೆಯಲಿದೆ ಎಂದರು. ಅಕ್ರಮ ಪಂಪ್‌ಸೆಟ್‌ಗಳಿಗೆ ರೈತರೇ ಮೂಲಸೌಕರ್ಯ ಕಲ್ಪಿಸಿಕೊಂಡು ಸಕ್ರಮಗೊಳಿಸಿಕೊಳ್ಳಬೇಕು ಎಂಬ ಹಿಂದಿನ ಇಲಾಖಾ ಆದೇಶದ ರದ್ದಿಗೆ ಮುಂದಿನ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದು.

ತದನಂತರ 500 ಮೀಟರ್ ಒಳಗಿನ ಪಂಪ್‌ಸೆಟ್‌ಗಳಿಗೆ ಮೂಲಸೌಕರ್ಯ ಕಲ್ಪಿಸಿ ನಂತರ ಉಳಿದ ರೈತರು ಸೌರಶಕ್ತಿ ಪಂಪ್‌ಸೆಟ್ ಅಳವಡಿಸಿಕೊಳ್ಳಲು ಕೇಂದ್ರದ ಸಹ ಭಾಗಿತ್ವದಡಿ ಸರ್ಕಾರ ಶೇಕಡ 80ರಷ್ಟು ಸಬ್ಸಿಡಿ ನೀಡುವುದಾಗಿ ಪ್ರಕಟಿಸಿದರು.

ಕೇಂದ್ರ ಸರ್ಕಾರ ಶೇ.30ರಷ್ಟು ನೀಡುತ್ತಿದ್ದು, ರಾಜ್ಯ ಸರ್ಕಾರ ಶೇಕಡ 50ರಷ್ಟು ಸಬ್ಸಿಡಿ ನೀಡಲಿದ್ದು, ಇದನ್ನು ರೈತರು ಸದ್ಬಳಕೆ ಮಾಡಿಕೊಳ್ಳಬೇಕೆಂದು ಮನವಿ ಮಾಡಿದರು.

ಕೃಷಿಗೆ ಏಳು ಗಂಟೆ ವಿದ್ಯುತ್ ನೀಡಲಾಗುತ್ತಿದೆ, ಪ್ರಸಕ್ತ ವರ್ಷದಲ್ಲಿ ಮಳೆ ಕೊರತೆಯಿಂದಾಗಿ ಜಲಮೂಲದಿಂದ ಉತ್ಪತ್ತಿಯಾಗುತ್ತಿದ್ದ ವಿದ್ಯುತ್ ಪ್ರಮಾಣ ಕಡಿಮೆಯಾಗಿದೆ, ಇದರೊಂದಿಗೆ ರಾಜ್ಯದ ವಿದ್ಯುತ್ ಬೇಡಿಕೆ 8,000 ಮೆಗಾ ವ್ಯಾಟ್‌ನಿಂದ 16,000 ಮೆಗಾವ್ಯಾಟ್‌ಗೆ ಏರಿಕೆಯಾಗಿದ್ದು, ಇದರಿಂದ ನಮಗೆ ವಿದ್ಯುತ್ ಅಭಾವ ಉಂಟಾಯಿತು. ಅಭಾವ ನೀಗಿಸಲು ನಮ್ಮ ಆಂತರಿಕ ವಿದ್ಯುತ್ ಉತ್ಪಾದನಾ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ ಬೇರೆ ರಾಜ್ಯಗಳಿಂದ ಖರೀದಿ ಮಾಡುತ್ತಿದ್ದು, ಇದರಿಂದ ಬೇಡಿಕೆಗಿಂತ ಉತ್ಪಾದನೆ ಹೆಚ್ಚಿದೆ ಎಂದರು.

ಬೇಸಿಗೆಯಲ್ಲಿ ರೈತರು ಮತ್ತು ನಮ್ಮ ಗ್ರಾಹಕರು ಆತಂಕಪಡುವ ಅಗತ್ಯವಿಲ್ಲ, ಬೇಡಿಕೆಯನ್ನು ಈಡೇರಿಸುತ್ತೇವೆ ಎಂದರು.

2004ರಲ್ಲಿ ಹೆಚ್.ಡಿ.ರೇವಣ್ಣ ಅವರು ಇಂಧನ ಸಚಿವರಿದ್ದಾಗ 60 ಸಾವಿರ ಹಾಗೂ 2008ರಲ್ಲಿ ● 9ನೇ ಪುಟಕ್ಕೆ

ಐದನೇ ಗ್ಯಾರಂಟಿ 'ಯುವ ನಿಧಿ' ಜ.1ರಿಂದ ಜಾರಿ



ಬೆಂಗಳೂರು: ಪದವೀಧರರಿಗೆ 3 ಸಾವಿರ ರೂಪಾಯಿ ಮತ್ತು ಡಿಪ್ಲೊಮಾ ಮಾಡಿದ ನಿರುದ್ಯೋಗಿ ಯುವಕರಿಗೆ ಪ್ರತಿ ತಿಂಗಳು 1500 ಭತ್ಯೆ ನೀಡುವ ರಾಜ್ಯ ಕಾಂಗ್ರೆಸ್ ಸರ್ಕಾರದ ಐದನೇ ಗ್ಯಾರಂಟಿ 'ಯುವ ನಿಧಿ' ಯೋಜನೆ ಹೊಸ ವರ್ಷದಿಂದಲೇ ಜಾರಿಗೆ ಬರಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಘೋಷಿಸಿದ್ದಾರೆ.



ಈ ಮುಂಚೆ ಡಿ.26ರಿಂದ 'ಯುವ ನಿಧಿ' ನೋಂದಣಿ ಪ್ರಾರಂಭವಾಗಲಿದೆ ಎಂದು ಕೌಶಲ್ಯಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಹೇಳಿದ್ದರು. ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ಯೋಜನೆಯು ಜನವರಿ 1, 2024ರಿಂದ ಜಾರಿಗೆ ಬರಲಿದೆ ಮತ್ತು ಅರ್ಜಿದಾರರು 'ಸೇವಾ ಸಿಂಧು' ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬಹುದು.

ಸಂಸತ್ ಭದ್ರತಾ ಲೋಪ ಪ್ರಕರಣ: ಮನೋರಂಜನ್, ಸಾಗರ್ ಶರ್ಮಾ ಸೇರಿ ನಾಲ್ವರು ಆರೋಪಿಗಳ ಮೇಲೆ

ಭಯೋತ್ಪಾದನಾ ನಿಗ್ರಹ ಕಾಯ್ದೆಯಡಿ ಕೇಸ್

● ಈ ನಾಲ್ವರು 7 ದಿನ ಪೊಲೀಸರ ವಶಕ್ಕೆ ● ಪ್ರಕರಣ ವಿಶೇಷ ತನಿಖಾ ತಂಡಕ್ಕೆ ● ಆರೋಪಿಗಳಿಗೆಲ್ಲಾ ಸಾಮಾಜಿಕ ಜಾಲತಾಣದ ನಂಟು ● ಮನೋರಂಜನ್ ಮನೆಗೆ 2 ಬಾರಿ ಬಂದಿದ್ದ ಸಾಗರ್ ಶರ್ಮಾ

ನವದೆಹಲಿ, ಡಿ.14– ಲೋಕಸಭೆ ಕಲಾಪ ನಡೆಯುತ್ತಿದ್ದ ವೇಳೆ ಸದನಕ್ಕೆ ನುಗ್ಗಿ, ಕಲರ್ ಗ್ಯಾಸ್ ಸಿಡಿಸಿ ಅಲ್ಲೋಲ ಕಲ್ಲೋಲ ಉಂಟು ಮಾಡಿದ ಪ್ರಕರಣದಲ್ಲಿ ಬಂಧಿತರಾಗಿರುವ ನಾಲ್ವರ ವಿರುದ್ಧ ದೆಹಲಿಯ ಪಾರ್ಲಿಮೆಂಟ್ ಸ್ಟ್ರೀಟ್ ಪೊಲೀಸರು ಭಯೋತ್ಪಾದನಾ ನಿಗ್ರಹ ಕಾಯ್ದೆ ಸೆಕ್ಷನ್ 16 ಮತ್ತು 18, ಭಾರತೀಯ ದಂಡ ಸಂಹಿತೆ 120 ಬಿ, 452, 153, 186, 353ರಡಿ ಪ್ರಕರಣ ದಾಖಲಿಸಿದ್ದಾರೆ.

ಬಂಧಿತರಾಗಿರುವ ಮೈಸೂರಿನ ಮನೋರಂಜನ್, ಉತ್ತರ ಪ್ರದೇಶದ ಸಾಗರ್ ಶರ್ಮಾ, ಮಹಾರಾಷ್ಟ್ರದ ಲಾತೂರ್‌ನ ಅಮೋಲ್ ಶಿಂಧೆ ● 9ನೇ ಪುಟಕ್ಕೆ



ಮನೋರಂಜನ್ ಸಾಗರ್ ಶರ್ಮಾ ನೀಲಂ ಅಮೋಲ್ ಶಿಂಧೆ

ಲಲಿತ್ ಝಾ ಮಾಸ್ಟರ್ ಮೈಂಡ್

ಆರೋಪಿಗಳೆಲ್ಲರೂ ಸಾಮಾಜಿಕ ಜಾಲತಾಣದ ಮೂಲಕವೇ ಪರಸ್ಪರ ಸಂಪರ್ಕ ಸಾಧಿಸುತ್ತಿದ್ದ ವಿಷಯ ಗೊತ್ತಾಗುತ್ತಿದ್ದಂತೆಯೇ ಸೈಬರ್ ಕ್ರೈಂ ವಿಭಾಗದ ಪೊಲೀಸರು ಇವರ ಸಾಮಾಜಿಕ ಜಾಲತಾಣ ಸಂಪರ್ಕಗಳನ್ನು ಜಾಲಾಡಿದಾಗ ಲಲಿತ್ ಝಾ ಎಂಬಾತ ಇವರೊಂದಿಗೆ ಸತತವಾಗಿ ಸಂಪರ್ಕದಲ್ಲಿದ್ದ. ಸುಮಾರು 3 ತಿಂಗಳಿಂದಲೂ ಈತ ಸಂಸತ್ ಭವನದ ಭದ್ರತಾ ವ್ಯವಸ್ಥೆ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದ. ಅಲ್ಲದೇ ಭದ್ರತಾ ವ್ಯವಸ್ಥೆಯ ವಿಡೀಯೋ ಚಿತ್ರೀಕರಣ ಮಾಡಿದ್ದ ಎಂಬುದು ಗೊತ್ತಾಗಿದ್ದು, ಈತನಿಗಾಗಿ ವಿಶೇಷ ತನಿಖಾ ದಳದ ಪೊಲೀಸರು ಹುಡುಕಾಟ ನಡೆಸಿದ್ದಾರೆ. ಲಲಿತ್ ಝಾ ರಾಜಸ್ಥಾನದ ನಿಮ್ರಾನ ಎಂಬಲ್ಲಿ ಇದ್ದಾನೆ ಎಂಬುದರ ಬಗ್ಗೆ ಪೊಲೀಸರಿಗೆ ಮಾಹಿತಿ ದೊರೆತಿದೆ. ಈತನ ಸಾಮಾಜಿಕ ಜಾಲತಾಣ ಸಂಪರ್ಕಗಳನ್ನು ಪರಿಶೀಲಿಸಿದ ವೇಳೆ ಈತ ಪಶ್ಚಿಮ ಬಂಗಾಳದ ಪುರೂಲಿಯಾ ಜಿಲ್ಲೆಯ ಬುಡಕಟ್ಟು ಶಿಕ್ಷಣದ ಸಂಬಂಧ ಕಾರ್ಯ ನಿರ್ವಹಿಸುತ್ತಿರುವ ಎನ್‌ಜಿಓ ನಡೆಸುತ್ತಿರುವ ನೀಲಾಕ್ಷ ಐಚ್ ಎಂಬುವರಿಗೆ ಸಂಸತ್ತಿನ ಭದ್ರತಾ ವ್ಯವಸ್ಥೆಯ ವಿಡಿಯೋ ಕ್ಲಿಪ್ಪಿಂಗ್ ಅನ್ನು ರವಾನಿಸಿದ್ದ ಎಂಬುದು ಬೆಳಕಿಗೆ ಬಂದಿದೆ. ಲಲಿತ್ ಝಾ ನಮ್ಮ ಸಂಘಟನೆಯ ಸದಸ್ಯನಾಗಿದ್ದ ಎಂದು ನೀಲಾಕ್ಷ ಐಚ್ ತಿಳಿಸಿದ್ದಾರೆಯಾದರೂ ಈತ ಸದರಿ ಎನ್‌ಜಿಓನ ಪ್ರಧಾನ ಕಾರ್ಯದರ್ಶಿಯಾಗಿದ್ದ ಎಂಬುದು ತನಿಖಾ ತಂಡಕ್ಕೆ ತಿಳಿದು ಬಂದಿದೆ.

ಭದ್ರತಾ ಲೋಪಕ್ಕೆ 8 ಮಂದಿ ಸಿಬ್ಬಂದಿ ಅಮಾನತು

ನವದೆಹಲಿ, ಡಿ.14– ಲೋಕಸಭೆ ಕಲಾಪ ನಡೆಯುತ್ತಿದ್ದ ವೇಳೆಯೇ ಬುಧವಾರ ಸಂಸತ್ ಭವನದಲ್ಲಿ ಭದ್ರತಾ ಲೋಪ ಉಂಟಾದ ಪ್ರಕರಣಕ್ಕೆ ಸಂಬಂಧಿಸಿದಂತೆ 8 ಮಂದಿ ಸಿಬ್ಬಂದಿಯನ್ನು ಅಮಾನತುಗೊಳಿಸಿರುವುದಲ್ಲದೇ, ಸಂಸತ್ ಭವನದ ಭದ್ರತೆಯನ್ನು ಹೆಚ್ಚಿಸಲಾಗಿದೆ. ಬುಧವಾರ ಮಧ್ಯಾಹ್ನ ಭದ್ರತಾ ಕಾರ್ಯದಲ್ಲಿ ನಿರತರಾಗಿದ್ದ ರಾಂಪಾಲ್, ಅರವಿಂದ್, ವೀರ್‌ದಾಸ್, ಗಣೇಶ್, ಅನಿಲ್, ಪ್ರದೀಪ್, ವಿಮಿತ್ ಮತ್ತು ನರೇಂದ್ರ ಎಂಬುವರನ್ನು ಲೋಕಸಭಾ ಸಚಿವಾಲಯ ವಿಚಾರಣೆ ಕಾಯ್ದಿರಿಸಿ ಅಮಾನತುಗೊಳಿಸಿದೆ. ಭದ್ರತಾ ಉಲ್ಲಂಘನೆ ಘಟನೆ ನಂತರ ಸಂಸತ್ ಭವನದ ಭದ್ರತೆಯನ್ನು ಹೆಚ್ಚಿಸಲಾಗಿದೆ.

ಕಲಾಪಕ್ಕೆ ಅಡ್ಡಿ: 15 ಸಂಸದರು ಅಮಾನತು



ನವದೆಹಲಿ: ಸಂಸತ್ ಕಲಾಪಕ್ಕೆ ಅಡ್ಡಿ ಪಡಿಸಿದ ಆರೋಪದ ಮೇಲೆ ಲೋಕಸಭೆಯಿಂದ ಒಟ್ಟು 15 ಸಂಸದರನ್ನು ಅಮಾನತುಗೊಳಿಸಲಾಗಿದೆ. ಚಳಿಗಾಲದ ಅಧಿವೇಶನ ಮುಕ್ತಾಯಗೊಳ್ಳುವವರೆಗೆ 15 ಸಂಸದರನ್ನು ಅಮಾನತುಗೊಳಿಸಲಾಗಿದೆ. ಲೋಕಸಭೆಯ 14 ಸಂಸದರು ರಾಜ್ಯ ಸಭೆಯ ಓರ್ವ ಸಂಸದನನ್ನು ಅಮಾನತುಗೊಳಿಸಲಾಗಿದೆ. ಸಂಸತ್‌ನ ಭದ್ರತಾ ಉಲ್ಲಂಘನೆ ವಿಷಯವಾಗಿ ಈ ಸಂಸದರು ಕೋಲಾಹಲ ಉಂಟುಮಾಡಿ ಸುಗಮ ಕಲಾಪಕ್ಕೆ ಅಡ್ಡಿ ಉಂಟುಮಾಡಿದ್ದರು. ಅಶಿಸ್ತಿನ ನಡವಳಿಕೆಯ ಕಾರಣ ನೀಡಿ ಈ ಸಂಸದರನ್ನು ಸಸ್ಪೆಂಡ್ ಮಾಡಲಾಗಿದೆ. ಕನಿಮೋಳಿ, ಮಾಣಿಕಂ ಟ್ಯಾಗೋರ್, ಪಿಆರ್ ನಟ ರಾಜನ್, ವಿಕೆ ಶ್ರೀಕಂಠಂ, ● 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : "ನೋಡಿ, ನಿಮ್ಮ ಹೆಂಡತಿಗೆ ಮದುವೆಗೆ ಮುಂಚಿನಿಂದಲೂ ಹಲ್ಲಿನ ತೊಂದರೆ ಇತ್ತು. ಈಗ ಹಲ್ಲು ಕಿತ್ತಿದ್ದೇನೆ. 600 ರೂ.ಬಿಲ್ ಕೊಡಿ"

ಪತಿ : "ಓಹೋ, ಇದು ಮದುವೆಗೆ ಮುಂಚಿನ ತೊಂದರೆ. ನಮ್ಮ ಮಾವ ಬಿಲ್ ಕೊಡ್ತಾರೆ."

ಮೈಸೂರು ಮಿತ್ರ

ಶುಕ್ರವಾರ, 15 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ತಾನು ಇತರರಿಗಿಂತ ಬುದ್ಧಿಶಾಲಿಯೆಂದು ಭಾವಿಸುವುದು
ತಾನೇ ವಂಚಿಸಿಕೊಳ್ಳಲು ಸುಲಭ ಮಾರ್ಗ – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಡಾಯಿ ಹಾಲಿಗೆ ಕಡಾಯಿಯಷ್ಟೇ ಹೆಪ್ಪು ಹಾಕ್ತಾರಾ?

ನಿಮ್ಮ ಪತ್ರಗಳು

ದತ್ತನಗರದ ರಸ್ತೆ ಡಾಂಬರೀಕರಣಗೊಳಿಸಿ

ಮಾನ್ಯರೆ,

ಮೈಸೂರು ನಗರ ರಾಜ ಮಹಾರಾಜರ ಕಾಲದಿಂದಲೂ ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕವಾಗಿ ಪ್ರಗತಿ ಹೊಂದಿ ದೇಶದಲ್ಲಿಯೇ ಹೆಸರುವಾಸಿಯಾದ ನಗರವಾಗಿದೆ. ನಗರವು ರಸ್ತೆ, ಸ್ವಚ್ಛತೆ, ಉತ್ತಮ ವಾತಾವರಣದಿಂದಾಗಿ ಇತರೆ ನಗರಗಳಿಗೆ ಮಾದರಿಯಾಗಿದೆ ಎನ್ನಬಹುದು. ಈ ಹಿನ್ನೆಲೆಯಲ್ಲಿ ನಂಜನಗೂಡು ರಸ್ತೆಯ ಗಣಪತಿ ಸಚ್ಚಿದಾನಂದ ಆಶ್ರಮದ ಎದುರುಗಡೆ ಇರುವ ದತ್ತನಗರ 54ನೇ ವಾರ್ಡ್‌ಗೆ ಸೇರಿದ್ದು, ಅಲ್ಲಿರುವ ಕೃಷ್ಣ ಬೇಕರಿ ಬಳಿ ರಸ್ತೆಯು ತುಂಬಾ ಹಾಳಾಗಿದೆ. ಗುಂಡಿಗಳಾಗಿ ತಿರುಗಾಡಲು ಆಗುತ್ತಿಲ್ಲ. ಅಲ್ಲದೆ ಅಲ್ಲಿನ ಚೇಂಬರ್‌ಗಳು ಕಸ ತುಂಬಿವೆ. ವಾಹನ ಸವಾರರು ಮತ್ತು ವೃದ್ಧರು, ಮಕ್ಕಳು ಈ ರಸ್ತೆಯಲ್ಲಿ ನಡೆದಾಡಲು ತುಂಬಾ ಕಷ್ಟಪಡುತ್ತಿದ್ದಾರೆ. ಸಂಬಂಧಪಟ್ಟ ಮಹಾನಗರ ಪಾಲಿಕೆ ಸದಸ್ಯರು, ಶಾಸಕರು ಗಮನಹರಿಸಿ ರಸ್ತೆಗೆ ಡಾಂಬರೀಕರಣ ಮಾಡಿಸಿಕೊಡಬೇಕೆಂದು ಮನವಿ.

–ದತ್ತ ನಗರ ನಿವಾಸಿಗಳು, ನಂಜನಗೂಡು ರಸ್ತೆ.

ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಸೀಟು ಮೀಸಲಿಡಿ

ಮಾನ್ಯರೆ,

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದು ಜಾರಿ ಮಾಡಿದ ಮಹಿಳೆಯರಿಗಾಗಿ ತಂದಿರುವ ಶಕ್ತಿ ಯೋಜನೆಯಡಿಯಲ್ಲಿ ರಾಜ್ಯದಾದ್ಯಂತ ಉಚಿತವಾಗಿ ರಾಜ್ಯದ ಸರ್ಕಾರಿ ಬಸ್ಸುಗಳಲ್ಲಿ ಪ್ರಯಾಣ ಮಾಡಲು ಅನುಮತಿ ನೀಡಿದೆ. ಉಚಿತ ಆದ ನಂತರ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಪ್ರಯಾಣ ಆರಂಭಿಸಿದ ಹಿನ್ನೆಲೆಯಲ್ಲಿ ಪುರುಷ ಪ್ರಯಾಣಿಕರಿಗೂ ಮತ್ತು ಶಾಲಾ ಕಾಲೇಜಿನ ಮಕ್ಕಳಿಗೂ ಸಹ ಬಸ್ಸುಗಳಲ್ಲಿ ಸೀಟುಗಳು ಸಿಗದೆ ತೊಂದರೆ ಅನುಭವಿಸುವಂತಾಗಿದೆ. ಕೂಡಲೇ ಇದಕ್ಕೆ ಸಂಬಂಧಪಟ್ಟ ರಾಜ್ಯ ಸರ್ಕಾರವು ಸರ್ಕಾರಿ ಬಸ್ಸುಗಳಲ್ಲಿ ಶಕ್ತಿ ಯೋಜನೆಯಡಿಯಲ್ಲಿ ಮಹಿಳೆಯರು ಪ್ರಯಾಣ ಮಾಡಲು ಮೀಸಲಿರಿಸಿ ಇತರ ಪ್ರಯಾಣಿಕರಿಗೂ ಅನುಕೂಲ ಮಾಡಿಕೊಡುವಂತೆ ನಿಯಮಗಳನ್ನು ಜಾರಿ ಮಾಡಬೇಕು.

– ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಹೊಸ ಎಟಿಎಂ ಯಂತ್ರ ಅಳವಡಿಸಿ



ಮಾನ್ಯರೆ,

ಮೈಸೂರಿನ ಕುವೆಂಪುನಗರ 'ಎಂ' ಬ್ಲಾಕ್‌ನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಎರಡು ಎಟಿಎಂ ಮೆಷಿನ್‌ಗಳಲ್ಲಿ ಒಂದು ಎಟಿಎಂ ಮೆಷಿನ್ ಕೆಟ್ಟು ಹೋಗಿ ಸುಮಾರು ಒಂದು ವರ್ಷವಾದರೂ ಇದನ್ನು ರಿಪೇರಿ ಮಾಡುವುದಾಗಲಿ, ಹೊಸದೊಂದು ಎಟಿಎಂ ಮೆಷಿನ್ ಅಳವಡಿಸುವುದಾಗಲಿ ಆಗಿಲ್ಲ. ಇದರಿಂದಾಗಿ ಬ್ಯಾಂಕ್ ಗ್ರಾಹಕರಿಗೆ ತೀವ್ರ ತೊಂದರೆಯಾಗಿದ್ದು, ಎಟಿಎಂನಿಂದ ಹಣ ತೆಗೆಯಲು ಗಂಟೆಗಟ್ಟಲೇ ಕಾಯಬೇಕಾಗುತ್ತದೆ. ಈ ಕೂಡಲೇ ಹೊಸ ಎಟಿಎಂ ಯಂತ್ರವನ್ನು ಅಳವಡಿಸಿ ಗ್ರಾಹಕರಿಗೆ ಅನುಕೂಲ ಮಾಡಿಕೊಡುವಂತೆ ಮನವಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ತಲಕಾಡು ಕಾವೇರಿ ನದಿಯಲ್ಲಿ ಸ್ವಚ್ಛತೆ ಕಾಪಾಡಿ

ಮಾನ್ಯರೆ,

ತಲಕಾಡು ಮೈಸೂರು ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಒಂದಾಗಿದೆ. ಇದು ಐತಿಹಾಸಿಕ ಹಾಗೂ ಧಾರ್ಮಿಕ ಯಾತ್ರಾಸ್ಥಳವಾಗಿದೆ. ಇಲ್ಲಿರುವ ಕಾವೇರಿ ನದಿಗೆ ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಾರೆ. ಆದರೆ ಕಾವೇರಿ ನದಿಯನ್ನು ಸ್ವಚ್ಛವಾಗಿಡದೆ ಪ್ಲಾಸ್ಟಿಕ್, ಇತರ ಜಲಮಾಲಿನ್ಯ ಆಗುವ ವಸ್ತುಗಳನ್ನು ನದಿ ಹಾಗೂ ನದಿ ತೀರದಲ್ಲಿ ಬಿಸಾಡುವುದರಿಂದ ನೈಸರ್ಗಿಕವಾಗಿರುವ ಸುಂದರ ತಾಣ ಹದಗೆಡುತ್ತಿದೆ. ಆದ್ದರಿಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸ್ವಚ್ಛತೆ ಕಾಪಾಡಲು ಕೆಲವು ಕಠಿಣ ಕ್ರಮಗಳನ್ನು ಜಾರಿಗೊಳಿಸಿ, ಬರುವ ಪ್ರವಾಸಿಗರಿಗೂ ಪರಿಸರಕ್ಕೆ ಹಾನಿಯಾಗದಂತೆ ಜಾಗೃತಿ ಮೂಡಿಸಬೇಕು.

–ಕುಮಾರ ಎಸ್ ಮಾವಿನಹಳ್ಳಿ, ಮೈಸೂರು.

ಕರ್ನಾಟಕದಲ್ಲೊಂದು ಮಣಿಪುರ

ಮಾನ್ಯರೆ,

ಕಳೆದ ಐದಾರು ತಿಂಗಳ ಹಿಂದೆ ದೇಶದ ಉದ್ದಗಲಕ್ಕೂ ನಮ್ಮ ನಾಗರಿಕ ಸಮಾಜವು ತಲೆತಗ್ಗಿಸುವಂತಹ ಹೇಯ ಕೃತ್ಯಕ್ಕೆ ಸಾಕ್ಷಿಯಾಗಿದ್ದ ಮಣಿಪುರದ ಕೂಕಿ ಬುಡಕಟ್ಟು ಸಮುದಾಯದ ಇಬ್ಬರು ಮಹಿಳೆಯರ ಬೆತ್ತಲೆ ಮೆರವಣಿಗೆ ಹಾಗೂ ಅತ್ಯಾಚಾರದಂತಹ ಕ್ರೂರ ಅಮಾನವೀಯ ಘಟನೆಯು ಮಾಸದಿರುವಾಗಲೇ ಇಂತಹ ಸ್ವರೂಪವನ್ನು ಪ್ರತಿಬಿಂಬಿಸುವ ಮತ್ತೊಂದು ಘಟನೆ ನಮ್ಮ ಕರ್ನಾಟಕದ ಬೆಳಗಾವಿಯಲ್ಲಿ ಘಟಿಸಿರುವುದು ಮಾನವ ಕುಲಕ್ಕೆ ದೊಡ್ಡ ಅವಮಾನ. ಹೊಸ ವಂಟಮುರಿ ಎಂಬ ಗ್ರಾಮದ ಒಂದೇ ಸಮುದಾಯಕ್ಕೆ ಸೇರಿದ ಯುವಕ – ಯುವತಿಯ ಪ್ರೀತಿಯನ್ನು ಒಪ್ಪಂದ ಯುವತಿಯ ಕುಟುಂಬಸ್ಥರು ಮೃಗಗಳಂತೆ ಯುವಕನ ಮನೆಯನ್ನು ಧ್ವಂಸ ಮಾಡಿರುವುದಲ್ಲದೇ, ಯುವಕನ ತಾಯಿಯನ್ನು ಬಹಿರಂಗವಾಗಿ ಬೆತ್ತಲೆಗೊಳಿಸಿ ಊರಿನ ಸುತ್ತ ಮೆರವಣಿಗೆ ಮಾಡಿ ಕಂಬಕ್ಕೆ ಕಟ್ಟಿ ಗಂಭೀರವಾಗಿ ದೈಹಿಕ ಹಲ್ಲೆ ಮಾಡಿರುವುದು ನಿಜಕ್ಕೂ ಬೇಸರದ ಸಂಗತಿಯಾಗಿದೆ. ಈ ಕೃತ್ಯವನ್ನು ಎಸಗಿದ ಈ ಪಾಪಿಗಳಿಗೆ ಆದಷ್ಟು ಬೇಗ ಕಠಿಣ ಶಿಕ್ಷೆ ವಿಧಿಸಿ, ಸಮಾಜದಲ್ಲಿ ಇಂತಹ ಘಟನೆಗಳು ಮತ್ತೆ ಮರುಕಳಿಸದಂತೆ ಕಾನೂನಿನ ಅರಿವು ಮತ್ತು ಜಾಗೃತಿಯನ್ನು ಮೂಡಿಸಬೇಕಾಗಿದೆ.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾ. ನಗರ.

ವಿಹಾರ

ಮಾನ್ಯರೆ,

ಇತ್ತೀಚೆಗೆ ನಗರದಲ್ಲಿ ಚೆಲುವಾಂಬ ಪಾರ್ಕ್ ವಾಯುವಿಹಾರಿಗಳ ಕ್ಷೇಮಾಭಿವೃದ್ಧಿ ಸಂಘ ಒಂದು ಕಡೆ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಇನ್ನೊಂದು ಕಡೆ ಕನ್ನಡ ರಾಜ್ಯೋತ್ಸವವನ್ನು ಆಚರಿಸಿದ್ದು ಅತ್ಯಂತ ಶ್ಲಾಘ್ಯ.

"ಎಲ್ಲಾದರೂ ಇರು, ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ಕರೆಯಂತೆ, ಕನ್ನಡದ 'ವಿಹಾರ' ಸರ್ವತ್ರ ನಡೆಯಬೇಕು. (ವಿಶಾಲಾರ್ಥದಲ್ಲಿ 'ಕಾವ್ಯವಿಹಾರ' ಕೂಡ!)

ವಿನಯ : ಅಹಂಕಾರ ಎಲ್ಲೆಡೆ ವಿಜೃಂಭಿಸುತ್ತಿರುವ ಈ ದಿನಗಳಲ್ಲಿ ದಾಸವಾಣಿ ಸ್ಮರಣೀಯ : "ಬಿಲ್ಲಾಗಿ ಇರಬೇಕು (ಬಲ್ಲವರ ಒಳಗೆ)" ಎಂದರೆ ಬಿಲ್ಲಿನಂತೆ ವಿನಯದಿಂದ ಬಾಗಿರಬೇಕು. ಸ್ವಾರಸ್ಯವೆಂದರೆ, ಇಂಥದೇ ಹೇಳಿಕೆ ಖಲೀಲ್ ಗಿಬ್ರಾನ್‌ದು : "ಬಿಲ್ಲು ಬಾಗಿದಷ್ಟೂ ಬಾಣ ದೂರ ಹೋಗುತ್ತದೆ!" (ವಿನಯದ ಪರಿಣಾಮ).

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.

ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧ ಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆ ಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದವರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತ ನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ಕೆಲವರ ಸೇವೆಯನ್ನಾದರೂ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳುತ್ತಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ನನಗೆ ಬರೆದ ತೃಪ್ತಿ.

2. ಎಂ. ಎ. ರಾಮಾನುಜೈಯ್ಯಂಗಾರ್





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ: 8762788685

ಕನ್ನಡ ಭಾಷೆ ಕಡೆಗಣಿಸಲ್ಪಟ್ಟಿದ್ದಾಗ ಅದರ ಪುನರುತ್ಥಾನಕ್ಕೆ ಅದ್ವಿತೀಯ ಕೊಡುಗೆ ನೀಡಿದ ಮೂವರು ಮಹಾನುಭಾವರಲ್ಲಿ ಎಂ.ಎ.ರಾಮಾನುಜೈಯ್ಯಂಗಾರ್ ಒಬ್ಬರು (1864–1937). ಇವರ ಕೊಡುಗೆ ಅಪೂರ್ವ ಮತ್ತು ಕನ್ನಡ ಭಾಷೆಗೆ ಅದ್ವಿತೀಯ. ಅವರಿಗೆ ಜೊತೆಯಾಗಿ ನಿಂತ ಇನ್ನಿಬ್ಬರೆಂದರೆ ಪ್ರಾತಃಸ್ಮರಣೀಯರಾದ ಆರ್.ನರಸಿಂಹಾಚಾರ್ಯರು ಮತ್ತು ಎಸ್.ಜಿ.ನರಸಿಂಹಾಚಾರ್ಯರು. ಬಂಧುಗಳಾದ ಈ ತ್ರಿಮೂರ್ತಿಗಳು ಸುಮಾರು ಅರ್ಧ ಶತಮಾನ ಕಾಲ ಜೊತೆ ಜೊತೆಯಲ್ಲಿ ಕೆಲಸ ಮಾಡಿ ಕನ್ನಡ ಸಾಹಿತ್ಯ ಕಂಡರಿಯದಿದ್ದ ಸಂಸ್ಕೃತ ಗ್ರಂಥಗಳನ್ನು ಕನ್ನಡಕ್ಕೆ ತಂದು ಶ್ರೇಷ್ಠ ಕಾಣಿಕೆ ನೀಡಿದರು. ಶಾಸನಗಳ ಪ್ರಸ್ತಾಪ ಬಂದಾಗ ಆರ್. ನರಸಿಂಹಾಚಾರ್ಯರನ್ನು ಮರೆಯುವಂತಿಲ್ಲ. ಹಳೆಯ ಕಾವ್ಯ ಗ್ರಂಥಗಳನ್ನು ಕಂಡಾಗ ಎಸ್.ಜಿ. ನರಸಿಂಹಾಚಾರ್ ಹೆಸರು ಮ.ಆ.ರಾಮಾನುಜೈಯ್ಯಂಗಾರ್ ಅವರ ಹೆಸರು ಮುಖಪುಟದಲ್ಲಿ ಇರುವುದನ್ನು ನೋಡಿಯೇ ಮುಂದೆ ಸಾಗಬೇಕಾಗುತ್ತದೆ.

ಮಂಡ್ಯಂ ಎ.ರಾಮಾನುಜೈಯ್ಯಂಗಾರ್ಯರು 1862ರ ಆಗಸ್ಟ್ 18ರಂದು ಮೈಸೂರಿನಲ್ಲಿ ಜನಿಸಿದರು. ಅವರ ಮಾತಾಪಿತೃಗಳು ಶ್ರೀಮತಿ ಶೃಂಗಾರಮ್ಮ ಮತ್ತು ಮಂಡ್ಯಂ ಎ.ವೆಂಕಟಾಚಾರ್ಯರು. ಶ್ರೇಷ್ಠ ಕೃಷ್ಣ ಜಯಂತಿಯಂದು ಜನಿಸಿದ ರಾಮಾನುಜೈಯ್ಯಂಗಾರ್ಯರು ಈ ದಂಪತಿಗೆ ತೃತೀಯ ಪುತ್ರರು. ಮೈಸೂರಿನ ಪೆರಿಯಸ್ವಾಮಿ ತಿರುಮಲಾಚಾರ್ಯರು ಸಂಸ್ಕೃತ ಮತ್ತು ಕನ್ನಡ ಭಾಷೆಗಳನ್ನು ಕಲಿಯಲು ಅವರನ್ನು ಪ್ರೇರೇಪಿಸಿದರು. ಮದ್ರಾಸ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿವೇತನ ಗಳಿಸಿದ ರಾಮಾನುಜೈಯ್ಯಂಗಾರರು ಎಫ್.ಎ. ಶಿಕ್ಷಣವನ್ನು ಪೂರ್ಣಗೊಳಿಸಿದರು. ಅವರ ವಿವಾಹ ಅಣ್ಣಾದೊರೈ ಕುಟುಂಬದ ಶ್ರೀಮತಿ ಯದುಗಿರಿಯಮ್ಮನವರ ಜೊತೆಯಲ್ಲಿ ನೆರವೇರಿತು.

ರಾಮಾನುಜೈಯ್ಯಂಗಾರ್ಯರು ಮೈಸೂರಿನ ಮಿಷನ್ ಸ್ಕೂಲಿನಲ್ಲಿ ಗಣಿತದ ಅಧ್ಯಾಪಕರಾಗಿ ನೇಮಕಗೊಂಡರು. ಸ್ವಲ್ಪ ಕಾಲ ಶಿಕ್ಷಣ ಇಲಾಖೆಯಲ್ಲಿಯೂ ಕೆಲಸ ಮಾಡಿದರು. ಇಂಗ್ಲಿಷ್, ಸಂಸ್ಕೃತ ಮತ್ತು ತಮಿಳು ಭಾಷೆಗಳಲ್ಲಿ ಉತ್ತಮ ಸಾಮರ್ಥ್ಯ ಹೊಂದಿದ್ದರೂ, ಅವರ ನೆಚ್ಚಿನ ಭಾಷೆ ಕನ್ನಡ. ಆ ಭಾಷೆಯೇ ಅವರಿಗೆ ಆದ್ಯತೆಯದ್ದಾಗಿತ್ತು ಅಂದಿಗೆ ಸಂಸ್ಕೃತ ಭಾಷೆಯೇ ಹೆಚ್ಚು ಪ್ರಾಬಲ್ಯವಾಗಿದ್ದು ಕನ್ನಡ ಭಾಷೆ ಗೌಣವಾಗಿತ್ತು. ಕನ್ನಡ ಸಾಹಿತ್ಯ ಸಾಕಷ್ಟು ಹಿಂದೆ ಉಳಿದಿತ್ತು.

ಆದರೆ ಈ ಸಮಯದಲ್ಲಿ ಕ್ರೈಸ್ತ ಮತ ಬೋಧನೆಗಾಗಿ ರೆವರೆಂಡ್ ಕಿಟ್ಟೆಲ್, ರೆವರೆಂಡ್ ರೈಸ್ ಸೇರಿದಂತೆ ಹಲವಾರು ಕ್ರೈಸ್ತ ಮಿಷನರಿಗಳು ಮೈಸೂರಿಗೆ ಬಂದಿದ್ದರು. ಅವರುಗಳು ಕ್ರೈಸ್ತ ಮತ ಪ್ರಚಾರದಲ್ಲಿ ತೊಡಗಿದ್ದರು. ಜನಸಾಮಾನ್ಯರಿಗೆ ಕ್ರೈಸ್ತ ಮತದ ಬಗ್ಗೆ ತಿಳಿಸಬೇಕಾಗಿದ್ದರೆ ಅವರಿಗೆ ಕನ್ನಡವೇ ಮುಖ್ಯವಾಗಿತ್ತು. ಅದಕ್ಕಾಗಿ ಅವರು ಕನ್ನಡ ಭಾಷೆಯನ್ನು ಚೆನ್ನಾಗಿ ಅಧ್ಯಯನ ಮಾಡಿದರು. ಅವರಲ್ಲಿ ಅನೇಕರು ಪ್ರಾವೀಣ್ಯತೆ ಸಾಧಿಸಿದರು. ಇದರಿಂದಾಗಿ ಹಿಂದೆ ಬಿದ್ದಿದ್ದ ಕನ್ನಡದ ಪುನರುತ್ಥಾನ ಸಾಕಷ್ಟು ಜರುಗಿತು. ಈ ದಿಕ್ಕಿನಲ್ಲಿ ಅವರ ಕಾರ್ಯ ಅಗಾಧವಾದದ್ದೆನ್ನಬೇಕು. ಇದರಿಂದಾಗಿ ಕನ್ನಡ ಪ್ರಾಧಾನ್ಯತೆ ಪಡೆಯಲು ಪ್ರಾರಂಭಿಸಿತು.

ಇದು ಆರ್.ನರಸಿಂಹಾಚಾರ್, ಎಸ್.ಜಿ. ನರಸಿಂಹಾಚಾರ್ ಹಾಗೂ ಎಂ.ಎ.ರಾಮಾನುಜೈಯ್ಯಂಗಾರರಿಗೆ ಮಾನದಂಡವಾಯಿತು. ಕನ್ನಡ ಭಾಷೆಯ ಪುರೋಭಿವೃದ್ಧಿಗೆ ತೊಡಗಲು ಪ್ರೇರೇಪಣೆ ನೀಡಿತು. ಈ ದಿಕ್ಕಿನಲ್ಲಿ ಈ ತ್ರಿಮೂರ್ತಿಗಳು 1880ರಿಂದ ಕರ್ತವ್ಯಶೀಲರಾದರು. ಸುಮಾರು ಅರ್ಧ ಶತಮಾನ ಕಾಲ ಒಟ್ಟಿಗೆ ಕೆಲಸ ಮಾಡಿದರು. ಕನ್ನಡ ಸಾಹಿತ್ಯದಲ್ಲಿ ಜನರ ಆಸಕ್ತಿ ಕೆರಳಿಸಿ ಮುಂದೆ ಬರುವಂತಾಗಲು ಈ ತ್ರಿಮೂರ್ತಿಗಳು ಪ್ರಾತಃಸ್ಮರಣೀಯರಾಗಿ ನಿಲ್ಲುತ್ತಾರೆ.

ಆರ್.ನರಸಿಂಹಾಚಾರ್ ಶಾಸನಗಳ ಕ್ಷೇತ್ರದಲ್ಲಿ ಅದ್ವಿತೀಯ ಕೆಲಸ ಮಾಡಿದರು. 'ಶಾಸನಗಳು' ಗ್ರಂಥ ಪ್ರಕಟಿಸಿ ವಿಶೇಷ ಕಾಣಿಕೆ ಸಲ್ಲಿಸಿದರು. ಎರಡು ಸಾವಿರ ವರ್ಷಗಳಿಗೂ ಹಿಂದಿನದೆನ್ನಲಾದ ಪಂಚ ದ್ರಾವಿಡ ಶಬ್ದ ಸಂಪತ್ತೆನ್ನಲಾದ ಕನ್ನಡ ಭಾಷಾ ಇತಿಹಾಸವನ್ನು ಹೊರತಂದರು. ನರಸಿಂಹಾಚಾರ್ಯರು ಶಾಸನ ಕ್ಷೇತ್ರದಲ್ಲಿ ಮಹತ್ತರ ಕೆಲಸ ಮಾಡಿದರೆ, ಎಸ್.ಜಿ. ನರಸಿಂಹಾಚಾರ್ ಮತ್ತು ಆರ್.ನರಸಿಂಹಾಚಾರ್ ಕನ್ನಡ ಕವಿಗಳ ಚರಿತ್ರೆಯ ಬಗ್ಗೆ ಕೆಲಸ ಮಾಡಿದರು. ಕನ್ನಡ ಗದ್ಯ ಕಾವ್ಯಗಳಲ್ಲಿನ ಕವಿಗಳ ಕಾರ್ಯವನ್ನು ಹೊರತಂದು ಕನ್ನಡಿಗರಿಗೆ ಪರಿಚಯ ಮಾಡಿಸಲಾರಂಭಿಸಿದರು. ಇವರಿಬ್ಬರೂ ಈ ದಿಕ್ಕಿನಲ್ಲಿ ಕೆಲಸ ಮಾಡಿದರೆ, ಎಂ.ಎ.ರಾಮಾನುಜೈಯ್ಯಂಗಾರರು ಹಳಗನ್ನಡ ಮತ್ತು ನಡುಗನ್ನಡದ ಕಾವ್ಯಗಳನ್ನು ಪ್ರಕಟಿಸಲಾರಂಭಿಸಿದರು. ಬಿಡುವಿನ ವೇಳೆಯಲ್ಲಿ ಗ್ರಂಥಾಲಯಗಳಿಗೆ ಭೇಟಿ ನೀಡಿ ತಾಳೇಗರಿಗಳಲ್ಲಿದ್ದ ಕನ್ನಡ ಕೃತಿಗಳನ್ನು ಅಭ್ಯಸಿಸಿದರು. ಅವುಗಳನ್ನು ಪ್ರಕಟಣೆಗಾಗಿ ಸಿದ್ಧಗೊಳಿಸಿದರು. ಇದರಿಂದಾಗಿ ಅನೇಕ ಮಹತ್ವದ ಕೃತಿಗಳ ಪರಿಚಯವನ್ನು ಅವರು ಕನ್ನಡಿಗರಿಗೆ ಮಾಡಿಕೊಡಲು ಸಾಧ್ಯವಾಯಿತು. ಅವುಗಳು ಹಾಗೆಯೇ ಉಳಿದಿದ್ದು, ಹೊರ ಜಗತ್ತಿನಿಂದ ದೂರ ಉಳಿದಿದ್ದವು. ಕನ್ನಡ ಸಾಹಿತ್ಯದಲ್ಲಿ ಏನೆಲ್ಲ ಕಾರ್ಯ ಹಿಂದೆ ಜರುಗಿದೆ ಎಂಬುದರ ಅರಿವು ಅಂದು ಇರಲಿಲ್ಲ. ಈ ಕೊರತೆಯನ್ನು ಈ ಮೂವರು ಮಹನೀಯರು ತುಂಬಲಾರಂಭಿಸಿದರು.

ರಾಮಾನುಜೈಯ್ಯಂಗಾರರು ಉದಾರ ಮನೋಭಾವದವರು. ಹಲವಾರು ವಿದ್ಯಾರ್ಥಿಗಳಿಗೆ ಅವರು ತಮ್ಮ ಮನೆಯಲ್ಲಿ ಆಶ್ರಯ ನೀಡಿದ್ದರು. ಯದುಗಿರಿಯಮ್ಮನವರು ಅವರ ಹಸಿವನ್ನು ತಣಿಸುತ್ತಿದ್ದರು. ಆ ವಿದ್ಯಾರ್ಥಿಗಳು ಅವರ ಈ ಸೇವೆಯನ್ನು ಮುಂದೆ ಸ್ಮರಿಸುವಂತಾಯಿತು. ಅವರ ಮನೆಯಾದರೋ ಸಂಸ್ಕೃತ, ತಮಿಳು ಮತ್ತು ಕನ್ನಡ ಸಾಹಿತ್ಯದ ಸಂಗಮವಾಗಿತ್ತು.

ರಾಮಾನುಜೈಯ್ಯಂಗಾರರು ಪ್ರಕಟಿಸಿರುವ ಗ್ರಂಥಗಳಲ್ಲಿ 'ಆರ್ಯ ಮಿತ್ರ ಸಂಜೀವಿನಿ' ಒಂದು. ಅವರು ಮೈಸೂರಿನಲ್ಲಿ ಸದ್ವಿದ್ಯಾ ಮಂದಿರ ಮುದ್ರಣಾಲಯ ನಡೆಸುತ್ತಿದ್ದ ಕೋಮಾರಸ್ವಾಮಿ ತಿರುಮಲಾಚಾರ್ಯರಂತಹ ಸ್ನೇಹಿತರನ್ನು ಪಡೆದಿದ್ದರು. ಅಯ್ಯಂಗಾರರು ಮುದ್ರಣ ಕಲೆಯನ್ನು ಅಭ್ಯಾಸ ಮಾಡಿದರು. 'ಆರ್ಯ ಮತ ಸಂಜೀವಿನಿ' ಎಂಬ ಮಾಸಿಕವನ್ನು ಪ್ರಕಟಿಸಲಾರಂಭಿಸಿದರು. ಅದರ ಉದ್ದಿಶ್ಯವಾದರೋ ಸಂಸ್ಕೃತ ಶ್ಲೋಕಗಳನ್ನು ಕನ್ನಡದಲ್ಲಿ ಪ್ರಕಟಿಸುವುದು. 'ಮುಕುಂದ ಮಾಲೈ', 'ನೀತಿ ಸುಭಾಷಿತ', 'ಭಗವದ್ಗೀತೆ' ಇತ್ಯಾದಿ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದರು. ಮೈಸೂರಿನ ದೊರೆ ಚಿಕ್ಕದೇವರಾಜ ಒಡೆಯರ ವಿಶಿಷ್ಟಾದ್ವೈತ ಸಿದ್ಧಾಂತದ ಮಹತ್ತರವಾದ 'ಚಿಕ್ಕರಾಜ ಬಿನ್ನಪ' ಕಾವ್ಯವನ್ನು ಪ್ರಕಟಿಸಿದರು. ಈ ಕಾವ್ಯದ ಪರಿಷ್ಕರಣ ಕಾರ್ಯವನ್ನು ಎಂ.ಎ.ರಾಮಾನುಜೈಯ್ಯಂಗಾರರು ಕೈಗೊಂಡರು. ಇದೇ ಮಾಸಿಕದಲ್ಲಿ ಎಸ್.ಜಿ. ನರಸಿಂಹಾಚಾರ್ಯರು ಪರಿಷ್ಕರಿಸಿದ ಮಹಾಭಾರತದ 'ಆದಿ ಪುರಾಣ' ಮತ್ತು 'ಸಭಾ ಪರ್ವ'ಗಳು ಗದ್ಯ ರೂಪದಲ್ಲಿ ಪ್ರಕಟವಾದವು. 1890ರಲ್ಲಿ 'ಆರ್ಯ ಮತ ಸಂಜೀವಿನಿ' ಪ್ರಕಟಣೆ ನಿಂತು ಹೋಯಿತು.

ಎಸ್.ಜಿ.ನರಸಿಂಹಾಚಾರ್ಯರಾದರೋ ರಾಜ್ಯದ ಮೂಲೆ ಮೂಲೆಗಳಿಗೆ ತೆರಳಿ ತಾಳೆಗರಿ ಗ್ರಂಥಗಳನ್ನು ಸಂಗ್ರಹಿಸಿದರು. ಬರೀ ಕರ್ನಾಟಕದಲ್ಲಿ ಮಾತ್ರವಲ್ಲದೆ ಅಂದಿನ ಮದ್ರಾಸ್ ಪ್ರಾಂತ, ಮಂಗಳೂರುಗಳಿಗೆ ಹೋಗಿ ಅನೇಕ ತಾಳೆಗರಿ ಗ್ರಂಥಗಳು ಮತ್ತು ಹಾಳಾಗುತ್ತಿದ್ದ ಪುಸ್ತಕಗಳನ್ನು ಸಂಗ್ರಹಿಸುವ ಕಾರ್ಯ ಮಾಡಿದರು. ತಾಳೇಗರಿ ಗ್ರಂಥಗಳಲ್ಲಿದ್ದ ಕಾವ್ಯಗಳನ್ನು ಕನ್ನಡದಲ್ಲಿ ಪ್ರಕಟಿಸಲು 'ಕರ್ನಾಟಕ ಕಾವ್ಯ ಮಂಜರಿ' ಮಾಸಿಕವನ್ನು ಪ್ರಾರಂಭಿಸಿದರು. ಇದರಿಂದಾಗಿ ಹಳೆಗನ್ನಡದ ಸುಮಾರು 25 ಗ್ರಂಥಗಳು ಹೊರಬಂದವು. 'ಕರ್ನಾಟಕ ಕಾವ್ಯ ಮಂಜರಿ'ಯನ್ನು ಕೊಳ್ಳುವಂತೆ ಮಹಾರಾಜರ ಸರ್ಕಾರ ಶಾಲೆಗಳಿಗೆ ಆದೇಶಿಸಿತು. ಮೈಸೂರು ಮಾತ್ರವಲ್ಲದೆ ಮದ್ರಾಸ್ ಮತ್ತು ಮುಂಬಯಿ ವಿಶ್ವವಿದ್ಯಾನಿಲಯಗಳಲ್ಲಿ ಕೆಲವು ಪಠ್ಯಪುಸ್ತಕಗಳಾದವು.

1889ರಲ್ಲಿ ಎಂ.ಎ.ರಾಮಾನುಜೈಯ್ಯಂಗಾರರು ಹಲವು ಅಪರೂಪದ ಕಾವ್ಯಗಳನ್ನು ಹೊರತರಲು ಪ್ರಾರಂಭಿಸಿದ್ದಲ್ಲದೆ 'ಕರ್ನಾಟಕ ಕಾವ್ಯ ಕಲಾನಿಧಿ' ಮಾಸಿಕವನ್ನು ಪ್ರಕಟಿಸಲಾರಂಭಿಸಿದರು. 15 ವರ್ಷ ಕಾಲ ಈ ಕಾರ್ಯ ಅವರಿಂದ ಜರುಗಿತು. ಪ್ರಸಿದ್ಧ ಸಾಹಿತಿ ಡಿ.ವಿ.ಗುಂಡಪ್ಪನವರು (ಡಿ.ವಿ.ಜಿ) ರಾಮಾನುಜೈಯ್ಯಂಗಾರ್ಯರ ಕಾರ್ಯವನ್ನು ಪ್ರಶಂಸಿಸುತ್ತಾ, "ತಮ್ಮ ಒತ್ತಡದ ಕಾರ್ಯಗಳ ನಡುವೆಯೂ ಅವರು ತಾಳೇಗರಿ ಗ್ರಂಥಗಳನ್ನು ಹುಡುಕುತ್ತಾರೆ ಹಾಗೂ ಯಾವುದೇ ಆರ್ಥಿಕ ಪ್ರತಿಫಲಾಪೇಕ್ಷೆ ಇಲ್ಲದೆ ಅವುಗಳ ಪ್ರಕಟಣೆ ಕೂಡ ಮಾಡುತ್ತಾರೆ. ತಾಳೇಗರಿಯ ಪ್ರತಿಯೊಂದು ಹಾಳೆಯನ್ನು ತೆರೆದು, ಅರ್ಥ ಮಾಡಿಕೊಂಡು ಪ್ರಕಟಣೆಗೆ ಅರ್ಹವೇ ಎಂದು ತೀರ್ಮಾನಕ್ಕೆ ಬರಲು ಅರ್ಧ ದಿನ ಬೇಕಾಗುತ್ತದೆ. ಅಂತಹದ್ದರಲ್ಲಿ ಇವರು ಪ್ರಕಟಣಾ ಕೆಲಸವನ್ನೂ ಮಾಡುತ್ತಿದ್ದಾರೆ. ಇದು ಕನ್ನಡ ಭಾಷೆಯ ಬಗ್ಗೆ ಅವರು ಇಟ್ಟಿರುವ ಒಲವು ಮತ್ತು ಸಂಯಮವನ್ನು ತೋರುತ್ತದೆ" ಎಂದಿದ್ದಾರೆ. ಕರ್ನಾಟಕ ಕಾವ್ಯ ಕಲಾನಿಧಿ ಶೀರ್ಷಿಕೆಯಲ್ಲಿ ರಾಮಾನುಜೈಯ್ಯಂಗಾರರು ಸುಮಾರು 75 ಪುಸ್ತಕಗಳನ್ನು ಪ್ರಕಟಿಸಿದರು. ಹಲವಾರು ಹಳೆಗನ್ನಡ ಮತ್ತು ನಡುಗನ್ನಡ ಕೃತಿಗಳು ಹೊರ ಜಗತ್ತಿಗೆ ಲಭ್ಯವಾದವು. ಜಾತಿ ಭೇದಗಳನ್ನು ದೂರ ವಿಟ್ಟು ಅವರು ಜೈನ, ವೀರಶೈವ, ಗೌಡ, ಬ್ರಾಹ್ಮಣ ಮತಗಳ ಪುಸ್ತಕಗಳನ್ನು ಪ್ರಕಟಿಸಿದರು. ಅವುಗಳಲ್ಲಿ ಸಂಸ್ಕೃತ, ತಮಿಳು ಇತ್ಯಾದಿ ಭಾಷೆಗಳ ಪುಸ್ತಕಗಳೂ ಇದ್ದವು. ಅವರು ಪ್ರಕಟಿಸಿದ ಒಂದು ಗ್ರಂಥವೆಂದರೆ ಅರಮನೆಗೆ ವಿಳ್ಳೇದೆಲೆಯನ್ನು ಕೊಡುತ್ತಿದ್ದ ಸಂಚಿಯ ಹೊನ್ನಮ್ಮನ 'ಹದಿಬದೆಯ ಧರ್ಮ'. ಅವರ ಏಕೈಕ ಉದ್ದೇಶವಾದರೋ ಜನ ಸಾಮಾನ್ಯರಲ್ಲಿ ಕನ್ನಡ ಸಾಹಿತ್ಯದ ಬಗ್ಗೆ ಅಭಿರುಚಿ ಬೆಳೆಸುವುದು.

1907ರಲ್ಲಿ ಎಸ್.ಜಿ.ನರಸಿಂಹಯ್ಯಂಗಾರ್ ಅವರು ಕಾಲವಾದರು. ತರುವಾಯ ಹಣಕಾಸಿನ ಸಮಸ್ಯೆಯಿಂದಾಗಿ ವೆಸ್ಲಿಯನ್ ಮಿಷನ್ ಶಾಲೆಯೂ ಮುಚ್ಚಿ ಹೋಯಿತು. ಇದರಿಂದಾಗಿ ಮುದ್ರಣ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಲು ಎಂ.ಎ. ರಾಮಾನುಜೈಯ್ಯಂಗಾರರು ಶ್ರಮ ಪಡಬೇಕಾಯಿತು. ಆ ಸಮಯದಲ್ಲಿ ಶ್ರೀಮತಿ ಯದುಗಿರಿಯಮ್ಮನವರ ಚಿಕ್ಕಪ್ಪ ಎಂ.ಎ.ಶ್ರೀನಿವಾಸಾಚಾರ್ಯ ಅವರು ರಾಮಾನುಜೈಯ್ಯಂಗಾರರ ನೆರವಿಗೆ ನಿಂತರು. ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದ ಶ್ರೀನಿವಾಸಾಚಾರ್ಯ ಅವರು ಅಲೆಕ್ಸಾಂಡರ್ ಡುಮಾವಿನ ಪ್ರಸಿದ್ಧ 'ಕೌಂಟ್ ಆಫ್ ಮಾಂಟೋ ಕ್ರಿಸ್ಟೋ'ವನ್ನು ಕನ್ನಡದಲ್ಲಿ ಪ್ರಕಟಿಸಿದ್ದರು.

ಎಂ.ಎ.ರಾಮಾನುಜೈಯ್ಯಂಗಾರ್ ಅವರ ಕಾರ್ಯವನ್ನು ಮೆಚ್ಚಿದ್ದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಮುಮ್ಮಡಿ ಕೃಷ್ಣರಾಜ ಒಡೆಯರ 'ಸೌಗಂಧಿಕಾ ಪರಿಣಯ', 'ವತ್ಸರಾಜನ ಕಥೆ', 'ಶಾಕುಂತಲ ನವೀನ ಟೀಕೆ' ಹಾಗೂ ಇತರೆ 13 ಪುಸ್ತಕಗಳನ್ನು ಪ್ರಕಟಿಸಲು ಆದೇಶಿಸಿದರು. 'ಕಾವ್ಯ ಕಲಾ ನಿಧಿ'ಯ ಅಡಿಯಲ್ಲಿ ಕೆಲವು ಗ್ರಂಥಗಳನ್ನು ಪ್ರಕಟಿಸಲಾಯಿತು. ನಾಲ್ವಡಿಯವರು ರಾಮಾನುಜೈಯ್ಯಂಗಾರರಿಗೆ ಅರಮನೆಯಲ್ಲಿ ಅಧಿಕೃತ ಕಡತಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಪ್ರಕಟಿಸುವ ಸಲುವಾಗಿ ತರ್ಜುಮೆದಾರನ ಹುದ್ದೆ ನೀಡಿದರು. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ವೆಸ್ಲಿಯನ್ ಮಿಷನ್ ಶಾಲೆಯಲ್ಲಿ ರಾಮಾನುಜೈಯ್ಯಂಗಾರ್ ಅವರ ಶಿಷ್ಯರಾಗಿದ್ದರು. ಬಿ.ಎಂ.ಶ್ರೀಕಂಠಯ್ಯನವರು ರಾಮಾನುಜೈಯ್ಯಂಗಾರ್ ಅವರನ್ನು ಗುರುಗಳ ಸಮಾನವಾಗಿ ನೋಡುತ್ತಿದ್ದರು. ಅವರ ಬಗ್ಗೆ ಡಿ.ವಿ.ಜಿ. ಅವರು ತಮ್ಮ 'ಜ್ಞಾಪಕ ಚಿತ್ರಶಾಲೆ'ಯಲ್ಲಿ ಒಂದು ಪ್ಯಾರಾದಷ್ಟು ಬರೆದಿದ್ದಾರೆ.

ರಾಮಾನುಜೈಯ್ಯಂಗಾರರು ಮಕ್ಕಳಿಗಾಗಿ 'ರಾಬಿನ್ಸನ್ ಕ್ರೂಸೋ', 'ಗಲಿವರನ ಪ್ರವಾಸ', 'ಹಲಸಿನ ಹಣ್ಣಿನ ಮಹಾತ್ಮೆ' ಮತ್ತಿತರ ಪುಸ್ತಕಗಳನ್ನು ಬರೆದಿದ್ದಾರೆ. ಅವರು ಬರೆದಿರುವ 'ಕನ್ನಡ ರೀಡರ್ 4' ಪ್ರೈಮರಿ ಶಾಲೆಯ ಮಕ್ಕಳಿಗೆ ಪಠ್ಯಪುಸ್ತಕವಾಗಿತ್ತು. ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಅವರು ಮಾಡಿದ ಉಪನ್ಯಾಸವನ್ನು 'ಕವಿ ಕಾವ್ಯ ಪ್ರಶಂಸೆ' ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಅಂತೆಯೇ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅವರು ಸಂಸ್ಕೃತದಲ್ಲಿ ಮಾಡಿದ ಉಪನ್ಯಾಸವನ್ನು 'ಪ್ರಮಾಣ ಪ್ರಮೇಯ ವಿವೇಕ' ಹೆಸರಿನಲ್ಲಿ ಪ್ರಕಟಿಸಿದ್ದಾರೆ. ರಾಮಾನುಜೈಯ್ಯಂಗಾರರ ಸಂಶೋಧನಾ ಕೃತಿ 'ಕವಿ ಸಮಯ' ಸಂಶೋಧಕರಿಗೆ ಇಂದಿಗೂ ಒಂದು ಆಕರ ಪುಸ್ತಕವಾಗಿದೆ. 'ಬಾಗಿಲು ಭದ್ರ' ದೇಹ ಮತ್ತು ಆತ್ಮದ ಒಂದು ವಿಶ್ಲೇಷಣೆಯಾಗಿದೆ. ಅವರ 'ಸುವ್ರತ' 'ಜನ್ನನ ಯಶೋಧರ ಚರಿತೆ'ಯ ಗದ್ಯ ರೂಪದ್ದಾಗಿದೆ. 'ಪ್ರಬಂಧಾವಳೀ', 'ಕವಿ ರನ್ನನ ಜೀವನ ಚರಿತ್ರೆ ಮತ್ತು ಕಾವ್ಯ ಮೀಮಾಂಸೆ' ಅವರ ಇತರೆ ಕೃತಿಗಳು.

ಕನ್ನಡದ ಏಳಿಗೆಗಾಗಿ ಶ್ರಮಿಸಿದ್ದ ರಾಮಾನುಜೈಯ್ಯಂಗಾರರು 1937ರ ಜೂನ್ 27ರಂದು ತಮ್ಮ 75ನೇ ವಯಸ್ಸಿನಲ್ಲಿ ನಿಧನರಾದರು. ರಾಜ್ಯದ ಹಲವಾರು ಕಡೆ ಸಂತಾಪ ಸೂಚಕ ಸಭೆಗಳು ನಡೆದು ಅವರಿಗೆ ಗೌರವ ಅರ್ಪಿಸಲಾಯಿತು.

ರೋಹಿಣಿ ಸಿಂಧೂರಿ ವಿರುದ್ಧದ ಪೋಸ್ಟ್ ಡಿಲೀಟ್ ಮಾಡಲು ರೂಪಾಗೆ 24 ಗಂಟೆ ಗಡುವು ನೀಡಿದ ಸುಪ್ರೀಂ

ನವದೆಹಲಿ, ಡಿ.14– ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಬರೆದ ಪೋಸ್ಟ್‌ಗಳನ್ನು 24 ಗಂಟೆಯಲ್ಲಿ ಡಿಲೀಟ್ ಮಾಡಿ ಎಂದು ಐಪಿಎಸ್ ಅಧಿಕಾರಿ ರೂಪಾ ಮೌದ್ಗಿಲ್‌ಗೆ ಸುಪ್ರೀಂಕೋರ್ಟ್ ಸೂಚನೆ ನೀಡಿದೆ.

ಒಂದು ವೇಳೆ ಸಿಂಧೂರಿ ವಿರುದ್ಧ ಬರೆದಿರುವ ಪೋಸ್ಟ್ ಅನ್ನು ಡಿಲೀಟ್ ಮಾಡಲು ಇಷ್ಟವಿಲ್ಲದಿದ್ದರೆ ತಮ್ಮ ಬರಹವನ್ನು ವಾಪಸ್ ಪಡೆದಿರೋದಾಗಿ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಬರೆದು ಹಾಕಬೇಕು ಎಂದು ಸುಪ್ರೀಂಕೋರ್ಟ್ ರೂಪಾ ಅವರಿಗೆ ಸೂಚನೆ ನೀಡಿದೆ.

ಕ್ರಿಮಿನಲ್ ಕೇಸ್‌ಗಳನ್ನು ರದ್ದುಗೊಳಿಸುವಂತೆ ಕೋರಿ ರೂಪಾ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ನ್ಯಾಯಮೂರ್ತಿಗಳಾದ ಅಭಯ್ ಎಸ್ ಓಕಾ ಮತ್ತು ಪಂಕಜ್ ಮಿಥಾಲ್ ಅವರನ್ನೊಳಗೊಂಡ ಪೀಠ ಈ ನಿರ್ಧಾರ ಪ್ರಕಟಿಸಿದೆ. ಈ ವರ್ಷದ ಆರಂಭದಲ್ಲಿ ರೂಪಾ ಅವರು ಸಿಂಧೂರಿ ಅವರ ಬಗೆಗಿನ ವೈಯಕ್ತಿಕ ಚಿತ್ರಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡ ಬಳಿಕ



ಕರ್ನಾಟಕದ ಇಬ್ಬರು ಐಎಎಸ್ ಅಧಿಕಾರಿಗಳು ಸಾರ್ವಜನಿಕ ವೇದಿಕೆಯಲ್ಲಿ ಗಲಾಟೆ ಮಾಡಿಕೊಂಡಿದ್ದರು.

2023ರ ಫೆಬ್ರವರಿ 14 ಹಾಗೂ 16ರಂದು ಐಪಿಎಸ್ ಅಧಿಕಾರಿ ಡಿ.ರೂಪಾ ಮೌದ್ಗಿಲ್ ಅವರು ತಮ್ಮ ಸೋಷಿಯಲ್ ಮೀಡಿಯಾ ಖಾತೆಯಲ್ಲಿ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರ ವಿರುದ್ಧ ಹಲವು ಆರೋಪಗಳನ್ನು ಮಾಡಿದ್ದರು. ಇದರಿಂದ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರು ತನ್ನ ವ್ಯಕ್ತಿತ್ವಕ್ಕೆ ರೂಪಾ ಧಕ್ಕೆ ತಂದಿದ್ದಾರೆ. ಕೆಲವು ಮಾಧ್ಯಮಗಳಲ್ಲಿ ನನ್ನ ಬಗ್ಗೆ ಇಲ್ಲಸಲ್ಲದ ಹೇಳಿಕೆಗಳನ್ನು ಕೂಡ ನೀಡಿದ್ದಾರೆ. ನನ್ನ ವೈಯಕ್ತಿಕ ತೇಜೋವಧೆ ಮಾಡಲಾಗಿದೆ ಎಂದು ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಕ್ರಿಮಿನಲ್ ಮಾನಹಾನಿ ಪ್ರಕರಣ ದಾಖಲು ಮಾಡಿರುವ ರೋಹಿಣಿ ಸಿಂಧೂರಿ, ರೂಪಾ ವಿರುದ್ಧ 1 ಕೋಟಿ ರೂ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ. ನಿನ್ನೆ ಸುಪ್ರೀಂಕೋರ್ಟ್ ಇಬ್ಬರೂ ಅಧಿಕಾರಿಗಳು ತಮ್ಮ ವಿವಾದಗಳನ್ನು ಮಧ್ಯಸ್ಥಿಕೆ ಮೂಲಕ ಬಗೆಹರಿಸಿಕೊಳ್ಳುವಂತೆ ಸೂಚಿಸಿತ್ತು. ಆದರೆ ಇಂದು ಮಧ್ಯಸ್ಥಿಕೆ ವಿಫಲವಾಗಿದೆ ಎಂದು ನ್ಯಾಯಾಲಯಕ್ಕೆ ತಿಳಿಸಲಾಯಿತು. ಇಬ್ಬರೂ ಅಧಿಕಾರಿಗಳು ಖುದ್ದು ನ್ಯಾಯಾಲಯಕ್ಕೆ ಹಾಜರಾಗಿದ್ದರು. ಅಧಿಕಾರಿಗಳು ತಮ್ಮ ವಿವಾದಗಳನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬುದನ್ನು ತಿಳಿದ ಪೀಠ ಬೇಸರ ವ್ಯಕ್ತಪಡಿಸಿತು. ಐಎಎಸ್–ಐಪಿಎಸ್ ಅಧಿಕಾರಿಗಳು ಹೀಗೆ ಜಗಳವಾಡಿದರೆ ಆಡಳಿತ ಹೇಗೆ? ಈ ವಿಷಯವನ್ನು ಈಗ ಅರ್ಹತೆಯ ಮೇಲೆ ವಿಚಾರಣೆ ನಡೆಸಲಾಗುವುದು ಎಂದು ನ್ಯಾಯಮೂರ್ತಿ ಓಕಾ ಹೇಳಿದ್ದಾರೆ.



ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ತಿಳಿಸುವ 'ವಿಕಸಿತ ಭಾರತ ಸಂಕಲ್ಪ ಯಾತ್ರೆ' ಆಯೋಜಿಸಲಾಗಿದ್ದು, ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಇಲವಾಲ ಹೋಬಳಿ, ಆನಂದೂರು ಗ್ರಾಪಂ ಆವರಣದಲ್ಲಿ ಸಾರ್ವಜನಿಕರಿಗೆ ಮಾಹಿತಿ ನೀಡಲಾಯಿತು. ಈ ವೇಳೆ ಕ್ಷೇತ್ರದ ಬಿಜೆಪಿ ಮುಖಂಡ ಕವೀಶ್‌ಗೌಡ, ಕ್ಷೇತ್ರದ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ಪ್ರಧಾನ ಕಾರ್ಯದರ್ಶಿಗಳಾದ ಪೈ.ಟಿ.ರವಿ, ಈರಪ್ಪ, ಉಪಾಧ್ಯಕ್ಷ ಗಣೇಶ್, ಜಿಲ್ಲಾ ಪ್ರಕೋಷ್ಠ ಸಂಚಾಲಕ ಗೋಪಾಲ್, ಇಲವಾಲ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಬಸವರಾಜು, ಮುಖಂಡ ನಾರಾಯಣ್, ಮುಖಂಡ ಪ್ರಭಾಕರ್, ಗ್ರಾಪಂ ಸದಸ್ಯರು, ಅಧಿಕಾರಿಗಳು ಇದ್ದರು.

ಪೊಲೀಸ್ ಇಲಾಖೆಯಲ್ಲಿ ಪತಿ–ಪತ್ನಿ ಅಂತರ್ ಜಿಲ್ಲಾ ವರ್ಗಾವಣೆಗೆ ಅವಕಾಶ

ಬೆಳಗಾವಿ: ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಪತಿ–ಪತ್ನಿ ಅಂತರ್ ಜಿಲ್ಲಾ ವರ್ಗಾವಣೆಗೆ ಅವಕಾಶ ಮಾಡಿಕೊಡಲಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಪ್ರಶ್ನೆಗೆ ಉತ್ತರಿಸಿದ ಕಂದಾಯ ಸಚಿವ ಕೃಷ್ಣಬೈರೇಗೌಡ, ಈಗಾಗಲೇ ಪೊಲೀಸ್ ಇಲಾಖೆಯಲ್ಲಿ ಪತಿ–ಪತ್ನಿ ಅಂತರ್ ಜಿಲ್ಲಾ ವರ್ಗಾವಣೆಗೆ ಅವಕಾಶ ಮಾಡಿಕೊಡಲಾಗಿದೆ, ಪೊಲೀಸ್ ಅಧಿಕಾರಿಗಳ ಕನಿಷ್ಠ ವರ್ಗಾವಣೆಯನ್ನು 2 ವರ್ಷಗಳಿಗೆ ಹೆಚ್ಚಿಸುವ ಕುರಿತು ಸೂಕ್ತ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದರು.

ಪೊಲೀಸ್ ಇಲಾಖೆಯಲ್ಲಿ ವರ್ಗಾವಣೆ ಅವಧಿ ಮೊದಲು ಎರಡು ವರ್ಷವಿತ್ತು. 7 ವರ್ಷದ ಹಿಂದೆ ಅದನ್ನು ಒಂದು ವರ್ಷಕ್ಕೆ ಮಾಡಲಾಗಿದೆ. ಪೊಲೀಸ್ ಅಧಿಕಾರಿಗಳ ಕನಿಷ್ಠ ವರ್ಗಾವಣೆಯನ್ನು ಎರಡು ವರ್ಷಗಳಿಗೆ ಹೆಚ್ಚಿಸುವ ಕುರಿತು ಸೂಕ್ತ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ಅವರು ಹೇಳಿದರು ಕ್ರಿಮಿನಲ್ ಗೂಂಡಾಗಳನ್ನೂ ಮಟ್ಟ ಹಾಕುವ ವೇಳೆಗೆ ಒಂದು ವರ್ಷ ಮುಗಿದು ಹೋಗುತ್ತದೆ. ಅದರಿಂದ ಕ್ರಿಮಿನಲ್ ಪ್ರಕರಣಗಳನ್ನು ಮಟ್ಟಹಾಕಲು ಆಗುತ್ತಿಲ್ಲ. ಆದ್ದರಿಂದ ಕನಿಷ್ಠ ವರ್ಗಾವಣೆ ಅವಧಿಯನ್ನು ಎರಡು ವರ್ಷಕ್ಕೆ ಹೆಚ್ಚಿಸಬೇಕು ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆಗ್ರಹಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸ್ಪಷ್ಟ ಸಿದ್ಧಾಂತದೊಂದಿಗೆ ಶ್ರಮ ವಹಿಸಿದರೆ ಸಾಧನೆ ನಮ್ಮದಾಗುತ್ತದೆ

ಮಹಾರಾಣಿ ಕಲಾ ಕಾಲೇಜಿನಲ್ಲಿ 'ಸಾಹಸ ಕೂಟ' ಉದ್ಘಾಟಿಸಿ ಎಸ್ಪಿ ಸೀಮಾ ಲಾಟ್ಕರ್ ಅಭಿಮತ



ಮೈಸೂರು, ಡಿ.14(ಆರ್‌ಕೆ)–ಸ್ಪಷ್ಟವಾದ ಸಿದ್ಧಾಂತದೊಂದಿಗೆ ಶ್ರಮಪಟ್ಟರೆ ಸಾಧನೆ ನಮ್ಮದಾಗುತ್ತದೆ ಎಂದು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಹಾರಾಣಿ ಸರ್ಕಾರಿ ಕಲಾ ಕಾಲೇಜಿನಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ 'ಸಾಹಸ ಕೂಟ' ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಪ್ರತಿಯೊಬ್ಬರ ಜೀವನದಲ್ಲಿ ಅಡೆ–ತಡೆಗಳು ಬರುತ್ತವೆ. ಅವುಗಳನ್ನು ಧೈರ್ಯ ಹಾಗೂ ಆತ್ಮ ವಿಶ್ವಾಸದಿಂದ ಎದುರಿಸಿದರೆ ಯಾವುದೂ ಅಸಾಧ್ಯವಲ್ಲ ಎಂದು ಹೇಳಿದರು.

ಓದುವ ಸಂದರ್ಭ ಆಸಕ್ತಿ ತೋರಿದರೆ ನಿಗದಿತ ಗುರಿ ತಲುಪಬಹುದು. ಅದಕ್ಕೆ ನಮ್ಮ ಸುತ್ತಲಲ್ಲೇ ಹಲವರು ನಿದರ್ಶನರಾಗುತ್ತಾರೆ. ನಾನೂ ಸಹ ವಿದ್ಯಾರ್ಥಿ ದಿಸೆಯಲ್ಲಿ ಹಾಸ್ಟೆಲ್‌ನಲ್ಲಿದ್ದೇ ವ್ಯಾಸಂಗ ಮಾಡಿದೆ. ನನಗೂ ಸಹ ಹಲವು ತೊಂದರೆಗಳು ಎದುರಾದವು. ಅವುಗಳನ್ನು ಎದುರಿಸಿದ್ದರಿಂದ ನಾನು ಪೊಲೀಸ್ ಅಧಿಕಾರಿಯಾಗಲು ಸಾಧ್ಯವಾಯಿತು ಎಂದರು.

ಸಮಾಜದಲ್ಲಿ ವಿಜ್ಞಾನ–ತಂತ್ರಜ್ಞಾನ ಬೆಳೆದಂತೆ ಹಲವು ಸವಾಲುಗಳೂ ಸೃಷ್ಟಿಯಾಗುತ್ತಿವೆ. ಮಹಿಳೆಯರು, ಮಕ್ಕಳ ಮೇಲಿನ ದೌರ್ಜನ್ಯ, ಅಸಹಾಯಕರ ಮೇಲೆ ದಾಳಿಯಂತಹ ಕೃತ್ಯಗಳು ಸಂಭವಿಸಿದಾಗ ಸ್ವಯಂ ರಕ್ಷಣೆ ಕೌಶಲ್ಯ, ಮನೋ–ಸಬಲತೆ, ದೈಹಿಕ ಸದೃಢತೆ ಬೆಳೆಸಿಕೊಂಡಿದ್ದರೆ ಸುಲಭವಾಗಿ ಅಂತಹ ಸಂಕಷ್ಟಗಳಿಂದ ಪಾರಾಗಬಹುದು ಎಂದ ಸೀಮಾ ಲಾಟ್ಕರ್, ಅದರಿಂದ ಬೇರೆಯವರ ರಕ್ಷಣೆಯನ್ನು ಮಾಡಲು ಸಾಧ್ಯವಾಗುತ್ತದೆ. ಸಾಹಸ ಕೂಟದ ಮೂಲಕ ಸದೃಢ ಮನಸ್ಥಿತಿ ಹೊಂದಿ ಎಂದು ವಿದ್ಯಾರ್ಥಿನಿಯರಿಗೆ ಸಲಹೆ ನೀಡಿದರು. ಕಾಲೇಜು ಪ್ರಾಂಶುಪಾಲ ಡಾ.ಬಿ.ವಿ.ವಸಂತಕುಮಾರ್, ಸಾಹಸ ಕೂಟದ ಸಂಯೋಜಕಿ ಡಾ.ಟಿ.ನಾಗವೇಣಿ, ಡಾ.ಎನ್.ಪ್ರಕಾಶ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಗೃಹರಕ್ಷಕ ದಳದ ಕರ್ತವ್ಯ ಭತ್ಯೆ ಪರಿಷ್ಕರಣೆ ಜರೂರಾಗಿ ಆಗಬೇಕಿದೆ

ಮಾಜಿ ಕಮಾಂಡೆಂಟ್ ಹಾಗೂ ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಪಿ.ಮಾದೇಶ್ ಕಳವಳ



ಮೈಸೂರು, ಡಿ.14(ಎಸ್‌ಬಿಡಿ)– ಶೀಘ್ರ ಗೃಹ ರಕ್ಷಕ (ಹೋಂ ಗಾರ್ಡ್) ದಳ ಸಿಬ್ಬಂದಿಯ ಕರ್ತವ್ಯ ಭತ್ಯೆ ಪರಿಷ್ಕರಣೆ ಆಗಬೇಕಿದೆ ಎಂದು ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಸಚಿವರೂ ಆದ ಗೃಹರಕ್ಷಕ ದಳದ ಮಾಜಿ ಕಮಾಂಡೆಂಟ್ ಪ್ರೊ.ಪಿ.ಮಾದೇಶ್ ಹೇಳಿದರು.

ಗೃಹರಕ್ಷಕ ದಳ ಮೈಸೂರು ಘಟಕದ ವತಿಯಿಂದ ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಮೈದಾನದಲ್ಲಿ ಗುರುವಾರ ನಡೆದ 'ಅಖಿಲ ಭಾರತ ಗೃಹರಕ್ಷಕ ದಳದ ವಾರ್ಷಿಕ ದಿನಾಚರಣೆ' ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸಮಾಜದ ಹಿತಕ್ಕಾಗಿ ಪೊಲೀಸರಿಗೆ ಹೆಗಲು ಕೊಟ್ಟು ಶ್ರಮಿಸುತ್ತಿರುವ ಗೃಹರಕ್ಷಕರ ಕರ್ತವ್ಯ ಭತ್ಯೆ ಪರಿಷ್ಕರಣೆ ಮಾಡುವ ಚಿಂತನೆ ನಡೆದಿದೆ ಎಂದು ಗೃಹ ಸಚಿವರಾದ ಡಾ.ಜಿ.ಪರಮೇಶ್ವರ್ ಅವರು ಬೆಳಗಾವಿ ಅಧಿವೇಶನದಲ್ಲಿ ತಿಳಿಸಿದ್ದು, ಈ ಬಗ್ಗೆ ಚರ್ಚೆ ನಡೆದಿರುವುದು ಸಂತೋಷದ ಸಂಗತಿ. ಪೊಲೀಸ್ ಇಲಾಖೆ ಹಾಗೂ ಇತರೆ ಇಲಾಖೆಗಳಡಿ ಕಾರ್ಯ ನಿರ್ವಹಿಸುವ ಗೃಹರಕ್ಷಕರ ದಿನ ಭತ್ಯೆಯಲ್ಲಿ ವ್ಯತ್ಯಾಸವಿದೆ. ಗೃಹ ಸಚಿವರು ಪ್ರಸ್ತಾಪಿಸಿದಂತೆ ಎಲ್ಲರಿಗೂ ದಿನಕ್ಕೆ 750 ರೂ. ಭತ್ಯೆ ಸಿಗುವಂತೆ ಶೀಘ್ರ ಕ್ರಮ ವಹಿಸಬೇಕಿದೆ ಎಂದರು.

ಹಿಂದೆ ಗೃಹರಕ್ಷಕರನ್ನು ಪ್ರಮುಖ ಹಾಗೂ ತುರ್ತು ಕಾರ್ಯಾಚರಣೆಗಳಲ್ಲಿ ಬಳಸಿಕೊಳ್ಳುತ್ತಿದ್ದರು. ನಂತರದಲ್ಲಿ ಎಲ್ಲಾ ಸಂದರ್ಭದಲ್ಲೂ ನಿಯೋಜಿಸಲಾಯಿತು. ಮೈಸೂರಿನಲ್ಲಿ 1,200ಕ್ಕೂ ಹೆಚ್ಚು ಹೋಂ ಗಾರ್ಡ್‌ಗಳು ಸೇವೆಯಲ್ಲಿದ್ದಾರೆ. ಈ ವೃತ್ತಿಯಲ್ಲಿ ಸಮಸ್ಯೆಗಳು ಸಹಜ. ಆದರೆ ತಂದೆ–ತಾಯಿ ಹಾಗೂ ವೃತ್ತಿ ನೀಡಿದ ಇಲಾಖೆಯನ್ನು ಎಂದೂ ಮರೆಯಬಾರದು. ಎಷ್ಟೇ ಕಷ್ಟವಾದರೂ ನಿಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಿ. ನಮ್ಮ ಬದುಕು ಮಕ್ಕಳ ಮೂಲಕ ಹಸನಾಗಲಿ. ಒಳ್ಳೆಯ ದಿನಗಳು ಬಂದೇ ಬರುತ್ತವೆ. ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸಿ. ಬಡತನ ಮೀರಿ ಛಲದಿಂದ ಬದುಕಬೇಕು ಎಂದು ಸ್ಥೈರ್ಯ ತುಂಬಿದ ಅವರು, ಕೆಲಸದ ವೇಳೆ ಹೆಚ್ಚು ಮೊಬೈಲ್ ಬಳಸಬೇಡಿ ಎಂದು ಕಿವಿಮಾತು ಹೇಳಿದರು.

ಕರ್ನಾಟಕ ಎನ್‌ಸಿಸಿ ಬೆಟಾಲಿಯನ್ (ಎಓ 13 ಕೆಎಆರ್)ನ ಮೇಜರ್ ಮಂಜುನಾಥ್ ಮಾತನಾಡಿ, ಹಣ, ಐಷಾರಾಮಿ ಮನೆ, ಕಾರು ಇರುವವರು ತುಂಬಾ ಜನರಿದ್ದಾರೆ. ಆದರೆ ದಯೆ, ಮಾನವೀಯತೆಗೆ ಕೊರತೆಯಾಗಿದೆ. ರಸ್ತೆಯಲ್ಲಿ ನಿಂತು ಎಲ್ಲರಿಗೂ ಸೆಲ್ಯೂಟ್ ಮಾಡಬೇಕು ಎಂದು ಕೀಳರಿಮೆ ಬೇಡ. ನೀವು ಮಾನವೀಯತೆ, ದಯೆಯಲ್ಲಿ ಶ್ರೀಮಂತರು. ಕೆಲ ವರ್ಷಗಳು ಕಳೆದರೆ ಹಣಕ್ಕಲ್ಲ ಮಾನವೀಯತೆಗೆ ತುಂಬಾ ಬೆಲೆ ಇರುತ್ತದೆ. ಕಷ್ಟ ಎಲ್ಲರಿಗೂ ಇದ್ದೇ ಇರುತ್ತದೆ. ಆದರೆ ನಿಮ್ಮ ಶ್ರಮ ವ್ಯರ್ಥ ಆಗಬಾರದು. ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿ ಎಂದು ಸಲಹೆ ನೀಡಿದರು.

ಸಾಹಿತಿ ಪ್ರೊ.ಎನ್.ಆರ್.ಶಿವರಾಂ ಮಾತನಾಡಿ, ಗೃಹರಕ್ಷಕರ ಸೇವೆಯನ್ನು ಶ್ಲಾಘಿಸಿದರು. ಮೃತಪಟ್ಟ ನಾಲ್ವರು ಹೋಂ ಗಾರ್ಡ್‌ಗಳ ಕುಟುಂಬದವರಿಗೆ ಇದೇ ಸಂದರ್ಭದಲ್ಲಿ ಆರ್ಥಿಕ ನೆರವು ನೀಡಲಾಯಿತು. ನಿವೃತ್ತರಿಗೆ ಅಭಿನಂದಿಸಲಾಯಿತು. ಮೈಸೂರು ಜಿಲ್ಲಾ ಗೃಹರಕ್ಷಕ ದಳದ ಸಮಾದೇಷ್ಟ(ಕಮಾಂಡೆಂಟ್) ರಾದ ಡಾ.ಎಂ.ಕಾಂತರಾಜು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಹಾಯಕ ಆಡಳಿತಾಧಿಕಾರಿ ಎಂ.ಎಸ್.ವಿಶ್ವನಾಥ್, ಬೋಧಕ ಎಂ.ಆರ್.ಚಂದನ್, ಸಹಾಯಕ ಬೋಧಕ ಎಸ್.ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು. ಇದಕ್ಕೂ ಮೊದಲು ಪೊಲೀಸ್ ಬ್ಯಾಂಡ್ ಹಿಮ್ಮೇಳದೊಂದಿಗೆ ಪರೇಡ್ ಕಮಾಂಡರ್ ನಿಂಗರಾಜ್ ನೇತೃತ್ವದಲ್ಲಿ ಗೃಹರಕ್ಷಕರು ಪಥ ಸಂಚಲನ ನಡೆಸಿ, ಗಣ್ಯರಿಗೆ ಗೌರವ ಸಲ್ಲಿಸಿದರು.

> ಯುದ್ಧದಲ್ಲಿ ಸೈನಿಕರೊಬ್ಬರಿಗೆ ನಾಲ್ಕೈದು ಗುಂಡು ಬಿದ್ದು ಅವರು ಅಲ್ಲೇ ಕುಸಿಯುತ್ತಾರೆ. ಅದನ್ನು ನೋಡಿದ ಮತ್ತೊಬ್ಬ ಯೋಧ, ಗುಂಡೇಟು ಬಿದ್ದಿದ್ದ ಸ್ನೇಹಿತನ ಕರೆ ತರುವುದಾಗಿ ಮೇಲಧಿಕಾರಿಯ ಅನುಮತಿ ಕೇಳುತ್ತಾರೆ. ಆದರೆ ಯುದ್ಧದ ನಡುವೆ ಹೋಗುವುದು ಸುರಕ್ಷಿತವಲ್ಲ ಎಂದು ನಿರಾಕರಿಸುತ್ತಾರೆ. ಆದರೂ ಹೇಗೋ ಸ್ನೇಹಿತನ ಹೊತ್ತು ಸುರಕ್ಷಿತ ಸ್ಥಳಕ್ಕೆ ಕರೆತರುತ್ತಾರೆ. ಆ ವೇಳೆ ಅವರಿಗೂ ಗುಂಡೇಟು ಬಿದ್ದಿರುತ್ತದೆ. ಆಗ ಮೇಲಧಿಕಾರಿಗಳು, ಇದೇ ಕಾರಣಕ್ಕೆ ಹೋಗುವುದು ಬೇಡ ಎಂದಿದ್ದು ಎನ್ನುತ್ತಾರೆ. ಆಗ ಅವರು 'ಸಾರ್ ನಾನು ಅಲ್ಲಿಗೆ ಹೋದಾಗ ನೀನು ಬಂದೇ ಬರುತ್ತೀಯಾ ಅಂತ ನನಗೆ ಗೊತ್ತಿತ್ತು ಎಂದು ಹೇಳಿದ ಸಾರ್.' ನನಗೆ ಗುಂಡೇಟು ಬಿದ್ದರೂ ಪರವಾಗಿಲ್ಲ ಅವನ ವಿಶ್ವಾಸ ಉಳಿಸಿಕೊಂಡೆ ಎಂದರು. ಇಂತಹ ಬಂಧ ನಿಮ್ಮಲ್ಲಿರಬೇಕು. ನಿಮ್ಮ ಮಧ್ಯೆ ಯಾರಿಗಾದರೂ ತೊಂದರೆಯಾದರೆ ಅವರನ್ನು ಸಂತೈಸಿ.
>
> –ಮೇಜರ್ ಮಂಜುನಾಥ್, ಕರ್ನಾಟಕ ಎನ್‌ಸಿಸಿ ಬೆಟಾಲಿಯನ್ (ಎಓ 13 ಕೆಎಆರ್)

20 ದಿನದಿಂದ ಊರಿಂದ ಊರಿಗೆ ಹುಲಿರಾಯನ ದಂಡಯಾತ್ರೆ

- ಹೈರಾಣಾಗುತ್ತಿರುವ ಅರಣ್ಯ ಇಲಾಖೆ ಸಿಬ್ಬಂದಿ
- ವೆಬ್ ಪೋರ್ಟಲ್ ಮೂಲಕ ಗ್ರಾಮಸ್ಥರಿಗೆ ಹುಲಿ ಇರುವಿಕೆ ಎಚ್ಚರಿಕೆ ಸಂದೇಶ ರವಾನೆಗೆ ಕ್ರಮ
- ದಡದಹಳ್ಳಿ ತೆಂಗಿನತೋಟದಲ್ಲಿ ಹಾದು ಹೋದ ಹುಲಿ
- ಕೂಂಬಿಂಗ್ ಕಾರ್ಯಾಚರಣೆಯಲ್ಲಿ ಹುಲಿ ಹೆಜ್ಜೆ ಪತ್ತೆ





ಮೈಸೂರು,ಡಿ.14(ಎಂಟಿವೈ)–ತಾಯಿಯಿಂದ ಬೇರ್ಪಟ್ಟು ಸರಹದ್ದಿಗಾಗಿ ಮೈಸೂರಿನ ಗಡಿಭಾಗಕ್ಕೆ ಬಂದಿದ್ದ ಹೆಣ್ಣು ಹುಲಿ ಮರಿ ಊರಿಂದ ಊರಿಗೆ ದಂಡಯಾತ್ರೆ ಮುಂದುವರೆಸಿದ್ದು, ಅದರ ಹೆಜ್ಜೆ ಗುರುತು ಅವಲಂಬಿಸಿ ಕಾರ್ಯಾಚರಣೆಯನ್ನು ಸ್ಥಳಾಂತರಿಸಲಾಗುತ್ತಿದೆ.

ಮೈಸೂರು ತಾಲೂಕಿನ ಚಿಕ್ಕಕಾನ್ಯ, ದೊಡ್ಡಕಾನ್ಯ, ಬ್ಯಾತಹಳ್ಳಿ, ಸಿಂಧುವಳ್ಳಿ ಭಾಗದಲ್ಲಿ ಕಳೆದ 20 ದಿನದಿಂದ ಕಾಣಿಸಿಕೊಳ್ಳುತ್ತಿದ್ದ ಒಂದೂವರೆ ವರ್ಷದ ಹೆಣ್ಣು ಹುಲಿ ಮರಿ ಸೆರೆ ಹಿಡಿಯುವುದೇ ಅರಣ್ಯ ಇಲಾಖೆಗೆ ಸವಾಲಾಗಿ ಪರಿಣಮಿಸಿದೆ. ದೊಡ್ಡಕಾನ್ಯದಿಂದ ದಡದಹಳ್ಳಿ, ಕೊಂಗನಂಜಯ್ಯನಹುಂಡಿ, ಬೀರೇಗೌಡನಹುಂಡಿಯ ಪಾಳು ಬಿದ್ದ ಜಮೀನು, ತೆಂಗಿನತೋಟದಲ್ಲಿ ಹುಲಿ ಪ್ರತ್ಯಕ್ಷವಾಗಿತ್ತಾದರೂ, ಕಾರ್ಯಾಚರಣೆ ಆರಂಭಿಸುವುದರೊಳಗಾಗಿ ಬೇರೆ ಕಡೆ ಹೋಗಿಬಿಡುತ್ತಿದೆ.

ಗ್ರಾಮಸ್ಥರು ಹುಲಿಯನ್ನು ಕಂಡು ಮಾಹಿತಿ ನೀಡಿದ್ದ ಮೇರೆಗೆ ಅರಣ್ಯ ಇಲಾಖೆ ನಡೆಸಿದ ಕೂಂಬಿಂಗ್ ಕಾರ್ಯಾಚರಣೆಯಲ್ಲಿ ಹುಲಿ ಹೆಜ್ಜೆ ಗುರುತು ಪತ್ತೆಯಾಗಿದೆ. ಬುಧವಾರ ಸಂಜೆ 5 ಗಂಟೆಗೆ ದಡದಹಳ್ಳಿ ಗ್ರಾಮದ ತೆಂಗಿನ ತೋಟದಲ್ಲಿ ಹುಲಿ ಓಡಾಡುತ್ತಿರುವುದಾಗಿ ರೈತರೊಬ್ಬರು ಮಾಹಿತಿ ನೀಡಿದ್ದರು. ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಹುಲಿ ಹೆಜ್ಜೆ ಗುರುತು ಕಂಡು ಬಂದಿದ್ದು, ಹುಲಿ ಸಂಚಾರ ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ ಕಾರ್ಯಾಚರಣೆ ಸ್ಥಳಾಂತರಿಸಲಾಗಿದೆ. ಅಲ್ಲದೆ, ಡ್ರೋನ್ ಕ್ಯಾಮರಾ ಮೂಲಕ ಹುಲಿ ಪತ್ತೆಗೆ ಕಾರ್ಯಾಚರಣೆ ನಡೆಸಲಾಯಿತಾದರೂ, ಯಾವುದೇ ಸುಳಿವು ಸಿಕ್ಕಿಲ್ಲ.

ನ.29ರಿಂದ ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಿದ್ದರೂ, ಹುಲಿ ಮರಿ ಮಾತ್ರ ಯಾಮಾರಿಸುತ್ತಲೇ ಇದೆ. ಬೇರೆ ಬೇರೆ ಸ್ಥಳ ಬದಲಿಸುವ ಮೂಲಕ ಅರಣ್ಯ ಸಿಬ್ಬಂದಿಗೆ ಚಳ್ಳೆಹಣ್ಣು ತಿನ್ನಿಸುತ್ತಾ ಬಂದಿದ್ದು, ಇದು ಕಾರ್ಯಾಚರಣೆಯಲ್ಲಿ ತೊಡಗಿರುವವರನ್ನು ಹೈರಾಣಾಗಿಸಿದೆ.

ವೈಲ್ಡ್‌ಲೈಫ್ ಅಡ್ವಾನ್ಸ್ ಅಲರ್ಟ್ ಸಿಸ್ಟಮ್(ವಾಸ್): ಅರಣ್ಯ ಪ್ರದೇಶದಿಂದ ಅಂತರವಿರುವ ಮೀಸಲು ಅರಣ್ಯದಲ್ಲಿ ಹುಟ್ಟಿರುವ ಈ ಹುಲಿ ಮರಿಗಳು ಅರಣ್ಯ ಪ್ರದೇಶದಲ್ಲಿ ಎದುರಾಗುವ ಸವಾಲುಗಳ ಬಗ್ಗೆ ಅರಿವೇ ಇಲ್ಲವಾಗಿದೆ. ಹೀಗಾಗಿ ಕಾಡಂಚಿನ ಗ್ರಾಮಗಳಲ್ಲಿ ಸಣ್ಣ ಪುಟ್ಟ ಪ್ರಾಣಿಗಳನ್ನು ಬೇಟೆಯಾಡುವ ಮೂಲಕ ಇದುವರೆಗೂ ಜೀವನ ರೂಪಿಸಿಕೊಂಡಿದೆ. ನಗರ ಹುಲಿ(ಅರ್ಬನ್ ಟೈಗರ್) ಎಂದು ಗುರುತಿಸಲ್ಪಟ್ಟಿರುವ ಈ ಹುಲಿ ಮರಿ ಗ್ರಾಮಗಳ ಅಂಚಿನಲ್ಲೇ ಬೀಡು ಬಿಟ್ಟಿದ್ದು, ಅದರಿಂದಾಗ ಬಹುದಾದ ಅಹಿತಕರ ಘಟನೆ ತಡೆಗಟ್ಟಲು ಅರಣ್ಯ ಇಲಾಖೆ ಹಗಲು–ರಾತ್ರಿ ಕಾರ್ಯಾಚರಣೆ ನಡೆಸುತ್ತಿದೆ. ಇದರೊಂದಿಗೆ ವೈಲ್ಡ್‌ಲೈಫ್ ಅಡ್ವಾನ್ಸ್ ಅಲರ್ಟ್ ಸಿಸ್ಟಮ್ ಜಾರಿಗೊಳಿಸಿ, ಹುಲಿ ಓಡಾಡುತ್ತಿರುವ ಗ್ರಾಮಗಳ ಜನರ ಮೊಬೈಲ್ ನಂಬರ್ ಸಂಗ್ರಹಿಸಿ, ಗ್ರೂಪ್ ರಚಿಸಲಾಗಿದೆ. ವೆಬ್‌ಪೋರ್ಟಲ್‌ಗಳ ಮೂಲಕ ಗ್ರಾಮಸ್ಥರಿಗೆ ಹುಲಿ ಇರುವಿಕೆ, ಕಾರ್ಯಾಚರಣೆ, ಅನುಸರಿಸಬೇಕಾದ ಕ್ರಮ ಸೇರಿದಂತೆ ಕೆಲವು ಅಲರ್ಟ್ ಸಂದೇಶವನ್ನು ತಿಳಿಸಲಾಗುತ್ತಿದೆ. ಅಲ್ಲದೆ, ವದಂತಿ ಹಬ್ಬಿಸದಂತೆ ಹಾಗೂ ವದಂತಿ ಹಬ್ಬಿಸುವವರ ವಿರುದ್ಧ ಕೈಗೊಳ್ಳುವ ಕ್ರಮ ಕುರಿತಂತೆ ಮಾಹಿತಿ ನೀಡಲಾಗುತ್ತಿದೆ. ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್ ಡಾ.ಕೆ.ಎನ್.ಬಸವರಾಜು, ಎಸಿಎಫ್ ಎನ್.ಲಕ್ಷ್ಮೀ ಕಾಂತ, ಆರ್‌ಎಫ್‌ಓ ಸುರೇಂದ್ರ, ಹಿರಿಯ ಅಧಿಕಾರಿಗಳು ಸ್ಥಳದಲ್ಲೇ ಬೀಡುಬಿಟ್ಟಿದ್ದು, ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದಾರೆ.

ಸಂಸತ್‌ಗೆ ನುಸುಳಿದ ಪ್ರಕರಣ ಆಘಾತಕಾರಿ



ಮೈಸೂರು, ಡಿ. 14–ದೇಶದ ಸಂಸತ್ ಭವನದೊಳಗೆ ನುಸುಳಿ, ಆತಂಕ ಸೃಷ್ಟಿಸಿದ ಘಟನೆ ಅತ್ಯಂತ ಆಘಾತಕಾರಿಯಾದುದು ಎಂದು ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್ ಅಭಿಪ್ರಾಯಪಟ್ಟಿದ್ದಾರೆ.

ಅತ್ಯಂತ ಬಿಗಿಭದ್ರತೆಯ ಹೊರ ತಾಗಿ ಇಂತದ್ದೊಂದು ಘಟನೆ ನಡೆದಿರುವುದು ಆತಂಕಕಾರಿ ಬೆಳವಣಿಗೆ. ಇದು ಭದ್ರತಾ ವ್ಯವಸ್ಥೆಯ ಲೋಪ ಎನ್ನುವುದು ಸ್ಪಷ್ಟವಾಗಿದೆ. ಈ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಿ ಘಟನೆಯ ಹಿಂದಿನ ಸಂಪೂರ್ಣ ಸತ್ಯವನ್ನು ದೇಶದ ಮುಂದಿಡುವುದು ಕೇಂದ್ರ ಸರ್ಕಾರ ಹಾಗೂ ಗೃಹ ಸಚಿವ ಅಮಿತ್ ಶಾ ಅವರ ಕರ್ತವ್ಯವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

22 ವರ್ಷಗಳ ಹಿಂದೆ ಸಂಸತ್ ಮೇಲೆ ಭಯೋತ್ಪಾದಕರು ನಡೆಸಿದ್ದ ದಾಳಿಯ ವಾರ್ಷಿಕ ಸ್ಮರಣೆ ದಿನವನ್ನೇ ಆರಿಸಿಕೊಂಡು ಈ ದಾಳಿ ನಡೆದಿರುವುದನ್ನು ಗಮನಿಸಿದರೆ ಇದರ ಹಿಂದೆ ಹುನ್ನಾರಗಳಿರಬಹುದೆಂಬ ಸಂಶಯವೂ ಮೂಡುತ್ತಿದೆ. ಅಂದು ಕೂಡ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವೇ ಇತ್ತು ಎನ್ನುವುದನ್ನು ಗಮನಿಸಬೇಕಾಗುತ್ತದೆ. ಇದು ದೇಶದ ಸುರಕ್ಷತೆ ಬಗ್ಗೆ ಹಲವಾರು ಪ್ರಶ್ನೆಗಳಿಗೆ ಕಾರಣವಾಗಿದೆ ಎಂದು ಹೇಳಿದ್ದಾರೆ.


ಸಂಸತ್‌ನಲ್ಲಿ ಭದ್ರತಾ ಲೋಪ; ಪ್ರತಾಪ್ ಸಿಂಹರ ತನಿಖೆಗೆ ಡಾ.ಯತೀಂದ್ರ ಆಗ್ರಹ



ಮೈಸೂರು,ಡಿ.14–ಸಂಸತ್‌ನಲ್ಲಿ ಭದ್ರತಾ ವೈಫಲ್ಯ ಪ್ರಕರಣ ಸಂಬಂಧ ಪ್ರತಾಪ್ ಸಿಂಹ ಅವರ ಕಚೇರಿಯಿಂದ ಪಾಸ್ ಪಡೆದಿದ್ದ ಹಿನ್ನೆಲೆಯಲ್ಲಿ ಪ್ರತಾಪ್ ಸಿಂಹ ಅವರನ್ನೂ ತನಿಖೆಗೆ ಒಳಪಡಿಸಬೇಕು ಎಂದು ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಆಗ್ರಹಿಸಿದರು.

ಈ ಕುರಿತು ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಿನ್ನೆ ಸಂಸತ್ ಮೇಲೆ ನಡೆದಿರುವ ದಾಳಿ ಇಡೀ ದೇಶವನ್ನೇ ಬೆಚ್ಚಿ ಬೀಳಿಸಿದೆ. ಸಂಸತ್‌ನಲ್ಲಿ ಭದ್ರತಾ ಲೋಪ ಆಗಿದೆ. ಈ ಘಟನೆ ಹಿಂದೆ ಬೇರೆ ಹುನ್ನಾರ ಇದೆ. ಸಂಸತ್ ಮೇಲೆ ಅಟ್ಯಾಕ್ ಮಾಡಿದ ಓರ್ವ ಮೈಸೂರಿನವನು. ಸಂಸತ್ ಒಳಗೆ ನುಗ್ಗಿರುವವರು ಸಂಸದ ಪ್ರತಾಪ್ ಸಿಂಹ ಕಚೇರಿಯಿಂದ ಪಾಸ್ ಪಡೆದು ಹೋಗಿದ್ದಾರೆ. ಪ್ರತಾಪ್ ಸಿಂಹರವರೇ ಏಕೆ ಅವರನ್ನು ಕಳುಹಿಸಿರಬಾರದು? ಎಂದು ಪ್ರಶ್ನಿಸಿದರು.

ನಾವು ಸಹ ವಿಧಾನಸಭಾ ಅಧಿವೇಶನ ವೀಕ್ಷಣೆಗೆ ಪಾಸ್ ನೀಡುತ್ತೇವೆ. ಪಾಸ್ ನೀಡುವಾಗ ಸಂಪೂರ್ಣವಾಗಿ ಪರಿಶೀಲಿಸಿ ನಂತರ ಪಾಸ್ ನೀಡುತ್ತೇವೆ. ಆಗಾಗಿ ಆ ವ್ಯಕ್ತಿಗಳಿಗೂ ಪ್ರತಾಪ್ ಸಿಂಹರಿಗೂ ಪರಿಚಯವಿರುತ್ತೆ. ಕೂಡಲೇ ಅವರನ್ನು ತನಿಖೆಗೆ ಒಳಪಡಿಸಬೇಕು. ಚುನಾವಣೆ ವೇಳೆ ಇಂತಹ ಘಟನೆ ನಡೆಯುತ್ತಿರುವುದರ ಹಿಂದೆ ಬೇರೊಂದು ಹುನ್ನಾರ ಇದ್ದೇ ಇರುತ್ತೆ ಎಂದು ಆರೋಪಿಸಿದರು.



ಮೈಸೂರು ನಗರಪಾಲಿಕೆ ವಾರ್ಡ್ ನಂ.35ರಲ್ಲಿ ಗುರುವಾರ ನಡೆದ ಪೊಲೀಸ್ ನಡೆ ಸಾರ್ವಜನಿಕರ ಕಡೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮೈಸೂರು ಪೊಲೀಸ್ ಆಯುಕ್ತ ಬಿ.ರಮೇಶ್ ಅವರನ್ನು ಮೊಹಲ್ಲಾ ನಿವಾಸಿಗಳು ಅಭಿನಂದಿಸಿದರು. ಈ ವೇಳೆ ಸುತ್ತೂರು ಶ್ರೀಕಂಠಮೂರ್ತಿ, ಓಂ ಶಕ್ತಿ ಪ್ರವೀಣ್, ಜಂಯಶೀಲ್ ಇತರರು ಉಪಸ್ಥಿತರಿದ್ದಾರೆ.

ಸಂಸತ್‌ನ ಭದ್ರತಾ ವೈಫಲ್ಯ: ತನಿಖೆಗೆ ಕಾಂಗ್ರೆಸ್ ಆಗ್ರಹ



ಮೈಸೂರು,ಡಿ.14–ಸಂಸತ್‌ನಲ್ಲಿ ಭಾರಿ ಭದ್ರತಾ ವೈಫಲ್ಯ ಪ್ರಕರಣ ಸಂಬಂಧ ಘಟನೆ ಬಗ್ಗೆ ಸಂಪೂರ್ಣ ತನಿಖೆಯಾಗಬೇಕು. ಈ ಕೂಡಲೇ ಸಂಸದ ಪ್ರತಾಪ್ ಸಿಂಹ ಅವರನ್ನು ಸಂಸದ ಸ್ಥಾನದಿಂದ ಅಮಾನತು ಮಾಡಬೇಕು ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆಗ್ರಹಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಭದ್ರತಾ ಲೋಪಕ್ಕೆ ಸಂಬಂಧಪಟ್ಟಂತಹ ವಿಚಾರಕ್ಕೆ ನಮ್ಮಲ್ಲಿ ಸೂಕ್ತ ದಾಖಲೆಗಳಿವೆ. ಮನೋರಂಜನ್ ಮೈಸೂರಿನಲ್ಲಿ ಹುಟ್ಟಿ ಬೆಳೆದ ವ್ಯಕ್ತಿ. ಸಂಸದ ಪ್ರತಾಪ್ ಸಿಂಹರ ಜೊತೆ ನಿಕಟ ಸಂಪರ್ಕದಲ್ಲಿದ್ದ ವ್ಯಕ್ತಿ. ಸಾಗರ್ ಶರ್ಮಾ, ಮನೋರಂಜನ್ ಅವರಿಗೆ ಸ್ವತಃ ತಮ್ಮ ಹಸ್ತಾಕ್ಷರದಿಂದ ಸಹಿ ಮಾಡಿಕೊಟ್ಟಿರುವ ಪಾಸ್‌ಗಳವು. ಇದರ ಬಗ್ಗೆ ಹೆಚ್ಚಿನ ತನಿಖೆ ಆಗಬೇಕು. ಅವರ ಕಚೇರಿಗಳನ್ನು ಸೀಜ್ ಮಾಡಬೇಕು ಎಂದು ಲಕ್ಷ್ಮಣ್ ಒತ್ತಾಯಿಸಿದರು.

ಈ ಒಂದು ಘಟನೆಯನ್ನು ಬಿಜೆಪಿ ಲಘುವಾಗಿ ಪರಿಗಣಿಸುತ್ತಿದೆ. ಇದರ ಬಗ್ಗೆ ಯಾರೂ ತುಟಿ ಬಿಚ್ಚುತ್ತಿಲ್ಲ. ಘಟನೆ ನಡೆದು 24 ಗಂಟೆ ಆದರೂ ಬಿಜೆಪಿ ನಾಯಕರು ಯಾರೂ ಮಾತನಾಡುತ್ತಿಲ್ಲ. ಪ್ರತಾಪ್ ಸಿಂಹ ಒಂದು ಟ್ವೀಟ್ ಮೂಲಕವಾದರೂ ಇದರ ಬಗ್ಗೆ ಸ್ಪಷ್ಟನೆ ಕೊಡಬೇಕು. ಎಲ್ಲಿದ್ದಾರೆ ಅನ್ನೋದೆ ಗೊತ್ತಿಲ್ಲ. ಯಾವಾಗಲೂ ಫೇಸ್‌ಬುಕ್ ಲೈವ್ ಬರ್ತಾ ಇದ್ದ ವ್ಯಕ್ತಿ ಎಲ್ಲಿ ಕಾಣೆಯಾಗಿದ್ದಾರೆ. ಈ ಕೂಡಲೇ ನೀವು ಎಲ್ಲೇ ಇದ್ದರೂ ಘಟನೆ ಕುರಿತು ಸ್ಪಷ್ಟನೆ ಕೊಡಬೇಕು. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದರು.

ಪ್ರಕರಣದಲ್ಲಿ ಒಬ್ಬ ಏನಾದರೂ ಬೇರೆ ಸಮುದಾಯದ ವ್ಯಕ್ತಿ ಇದ್ದರೆ ಇಡೀ ದೇಶದಲ್ಲಿ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದರು. ಈಗ ಯಾಕೆ ಪ್ರಕರಣವನ್ನು ಹಳ್ಳ ಹಿಡಿಯುವ ನಿಟ್ಟಿನಲ್ಲಿ ಮುಂದಾಗಿದ್ದಾರೆ. ಸ್ಮೋಕ್ ಡಬ್ಬಿಗಳನ್ನು ಹೇಗೆ ಒಳ ಭಾಗಕ್ಕೆ ತೆಗೆದುಕೊಂಡು ಹೋದರು. ಅಂತಹ ಅನಾಹುತ ಆದರೂ ಸ್ಥಳಕ್ಕೆ ಒಬ್ಬ ವೈದ್ಯರೂ ಬರಲಿಲ್ಲ. ಇದರ ಅರ್ಥ ಏನು, ಇದೆಲ್ಲ ಪೂರ್ವ ನಿಯೋಜಿತ ಕೃತ್ಯನಾ ಎಂದು ಎಂ.ಲಕ್ಷ್ಮಣ್ ಪ್ರಶ್ನಿಸಿದರು.

ನಿಮಗೂ ಮನೋರಂಜನ್ ತಂದೆಗೂ ಏನ್ ಸಂಬಂಧ? ಐಟಿ ಸೆಲ್‌ನಲ್ಲಿ ಮನೋರಂಜನ್ ಕೆಲಸ ಮಾಡುತ್ತಿದ್ದರಾ? ನಿಮ್ಮ ಗಮನಕ್ಕೆ ಬಾರದೆ ಪಾಸ್ ಹೇಗೆ ಕೊಟ್ಟಿದ್ದೀರಿ? ಅಮಿತ್ ಶಾ ಭೇಟಿ ಮಾಡುವ ಅವಕಾಶ ಮಾಡಿಕೊಟ್ಟಿಲ್ವಾ? ಆರ್‌ಎಸ್‌ಎಸ್ ಮುಖಂಡರ ಭೇಟಿ ಮಾಡಿಸಿದ್ದೀರಾ? ದೆಹಲಿಯಲ್ಲಿರುವ ಎಂಪಿ ಕ್ವಾರ್ಟರ್ಸ್‌ನಲ್ಲಿ ಇವರು ಉಳಿಸಿಕೊಂಡಿಲ್ವಾ ಎಂದು ಪ್ರತಾಪ್ ಸಿಂಹರಿಗೆ ಸರಣಿ ಪ್ರಶ್ನೆ ಹಾಕಿದರು.



ಮೈಸೂರಿನ ರಘುಲಾಲ್ ಅಂಡ್ ಕಂಪನಿ ವತಿಯಿಂದ ಡಿ.ದೇವರಾಜ ಅರಸು ರಸ್ತೆಯ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಮುಂಭಾಗದ ಬೀದಿಬದಿ ವ್ಯಾಪಾರಿಗಳಿಗೆ ತಳ್ಳುವ ಗಾಡಿ ವಿತರಿಸಲಾಯಿತು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ಡಿ.ನಾಗಭೂಷಣ್, ಕಾಂಗ್ರೆಸ್ ಮುಖಂಡರಾದ ರಾಜೀವ್, ವಿನಯ್‌ಕುಮಾರ್, ಪತ್ರಕರ್ತ ಸತ್ಯನಾರಾಯಣ, ಕೃಷ್ಣಪ್ಪ, ರಾಮ್‌ರಾಜ್, ಸುವರ್ಣಮ್ಮ, ರವೀಂದ್ರ, ಬಸವಣ್ಣ, ವಾರ್ಡ್ ಅಧ್ಯಕ್ಷ ಆನಂದ್, ಜ್ಞಾನೇಶ, ಹಿರೇಗೌಡ, ಬಾಲಾಜಿ ಸಂಜಯ್, ಮಂಗಳಮ್ಮ, ಶಾಂತಮ್ಮ, ಮಂಜುಳಮ್ಮ, ಪವನ್ ಮತ್ತಿತರರಿದ್ದರು.

ನಾಗಾಪುರ ಆಶ್ರಮ ಶಾಲೆಯಲ್ಲಿ ಆರೋಗ್ಯ ತಪಾಸಣೆ



ಮೈಸೂರು,ಡಿ.14(ಎಂಟಿವೈ)– ಹುಣಸೂರು ತಾಲೂಕಿನ ನಾಗಾಪುರ ಮತ್ತು ವೀರನಹೊಸಳ್ಳಿ ಆಶ್ರಮ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಬುಡಕಟ್ಟು ಸಮುದಾಯ ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಲಾಯಿತು.

ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಜೆಎಸ್‌ಎಸ್ ಉನ್ನತ ಶಿಕ್ಷಣ ಸಂಸ್ಥೆ ಹಾಗೂ ವಾಕ್ ಮತ್ತು ಶ್ರವಣ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಹೆಚ್.ಸಿ.ಬಸವರಾಜು ಉದ್ಘಾಟಿಸಿ ಮಾತನಾಡಿ, ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ನಿರ್ದೇಶಕಿ ಡಾ.ಎನ್.ಶ್ರೀನಿವಾಸ್, ಉಪನಿರ್ದೇಶಕಿ ಬಿ.ಎಸ್.ಪ್ರಭಾ ಅರಸ್ ರವರು ಆಸಕ್ತಿ ವಹಿಸಿ ನಮ್ಮ ತಾಲೂಕಿನ 5 ಆಶ್ರಮಶಾಲೆ ಒಂದು. ಬಾಲಕಿಯರ ವಿದ್ಯಾರ್ಥಿನಿಲಯದ 250 ಮಕ್ಕಳಿಗೆ ತಪಾಸಣೆ ನಡೆಸಿ, ಉಚಿತವಾಗಿ ಔಷಧಿ ವಿತರಿಸಿದ್ದಾರೆ. ಇದೊಂದು ಉತ್ತಮ ಕಾರ್ಯಕ್ರಮವಾಗಿದ್ದು ಇದರಲ್ಲಿ ಕಿವಿ, ಮೂಗು, ಗಂಟಲು, ವಾಕ್ ಮತ್ತು ಶ್ರವಣ ಪರೀಕ್ಷೆ, ರಕ್ತ ಪರೀಕ್ಷೆ, ದಂತ ಪರೀಕ್ಷೆ, ಮಕ್ಕಳ ತಜ್ಞರು ಬಂದು ಮಕ್ಕಳನ್ನು ಪರೀಕ್ಷಿಸಿ ಚಿಕಿತ್ಸೆ ನೀಡಿದ್ದಾರೆ. ಈ ಉಚಿತ ಆರೋಗ್ಯ ತಪಾಸಣಾ ಶಿಬಿರ ಪ್ರತಿ ವರ್ಷ ಮಾಡಿದರೆ ಮಕ್ಕಳಿಗೆ ಅನುಕೂಲವಾಗುತ್ತದೆ ಎಂದ ಅವರು, ಚಿಕಿತ್ಸೆಗೆ ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದ ತಿಳಿಸಿದರು. ಈ ಸಂದರ್ಭದಲ್ಲಿ ವೈದ್ಯರಾದ ಡಾ.ಮಹಾದೇವಪ್ಪ, ಡಾ.ಇಂದಿರಾ, ಡಾ.ರವೀಶ್‌ಗಣಿ, ಡಾ.ಸಾರಾನ್ಸ್, ಡಾ.ವಿಘ್ನೇಶ್, ಮುಖ್ಯ ಶಿಕ್ಷಕರಾದ ಸಿ.ಲಕ್ಷ್ಮಣ್, ಕೆ.ಎ.ಮೋಹನ್, ಶಿವಕುಮಾರ್, ಚೇತನ್ ಕುಮಾರ್, ಸಣ್ಣಯ್ಯ ಹಾಗೂ ಆಶ್ರಮ ಶಾಲೆ ಶಿಕ್ಷಕರು ಇದ್ದರು.

ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.14– ವಿವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ 66/11 ಕೆ.ವಿ ಮೈಸೂರು ಸೌತ್ ವಿದ್ಯುತ್ ವಿತರಣಾ ಕೇಂದ್ರದಲ್ಲಿ 3ನೇ ತ್ರೈಮಾಸಿಕ ನಿರ್ವಹಣಾ ಕೆಲಸದ ನಿಮಿತ್ತ ಡಿ.16ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಶ್ರೀರಾಂಪುರ 2ನೇ ಹಂತ, ರಮಾಭಾಯಿನಗರ, ಮಹದೇವಪುರ, ಜಯನಗರ 1ರಿಂದ 20ನೇ ಕ್ರಾಸ್, ಪರಸಯ್ಯನಹುಂಡಿ, ಶಿವಪುರ, ಕುವೆಂಪುನಗರ ಕೆ–ಬ್ಲಾಕ್, ಅಪೋಲೊ ಆಸ್ಪತ್ರೆ ಸುತ್ತಮುತ್ತ, ಚಿಕ್ಕಹರದನಹಳ್ಳಿ, ಗೊರೂರುಗ್ರಾಮ, ಕಳಲವಾಡಿ, ಕೋಟೆಹುಂಡಿ, ಯಡಹಳ್ಳಿ, ರಾಯನಕೆರೆ, ಸರಸ್ವತಿಪುರಂ 1ನೇ ಮುಖ್ಯರಸ್ತೆಯಿಂದ 6ನೇ ಮುಖ್ಯರಸ್ತೆ, ಭಾಗಶಃ ಕೆ.ಜಿ.ಕೊಪ್ಪಲು ಹಾಗೂ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ರಂಗಭೂಮಿ ಜೀವನವೆಂಬ ಸಾಗರದಲ್ಲಿ ಈಜುವ ಕಲೆ ಕಲಿಸುತ್ತದೆ

ಕನ್ನಡ–ಸಂಸ್ಕೃತಿ ಇಲಾಖೆ ಜೆಡಿ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಅಭಿಮತ



ಮೈಸೂರು,ಡಿ.14(ಪಿಎಂ)–ಜೀವನವೆಂಬ ಸಾಗರದಲ್ಲಿ ಕೊಚ್ಚಿ ಹೋಗದಂತೆ ಈಜುವ ಕಲೆಯನ್ನು ರಂಗಭೂಮಿ ಕಲಿಸಲಿದ್ದು, ಹಾಗಾಗಿ ನಮ್ಮ ಯುವ ಜನರು ಈ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಹೇಳಿದರು.

ಮೈಸೂರಿನ ಕಲಾಮಂದಿರ ಆವರಣದ ರಂಗತಾಲೀಮು ಕೊಠಡಿಯಲ್ಲಿ ದೇಸಿರಂಗ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣ ಮತ್ತು ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಂಗಭೂಮಿ ಬದುಕಿನ ಕಲೆ ಕಲಿಸುತ್ತದೆ. ಜೀವನ ಎನ್ನುವುದು ದೊಡ್ಡ ಸಾಗರ. ಅಲ್ಲಿ ಎದುರಾಗುವ ಅಡೆತಡೆಗಳಲ್ಲಿ ದಿಕ್ಕು ತಪ್ಪಿ ಕೊಚ್ಚಿ ಹೋಗದಂತೆ ಈಜುವ ಕಲೆಯನ್ನು ರಂಗಭೂಮಿ ಕಲಿಸುತ್ತದೆ ಎಂದರು.

ಅಲ್ಲದೆ, ರಂಗಭೂಮಿ ಅತ್ಯಂತ ಸರಳವಾಗಿ ಬದುಕುವ ಜೊತೆಗೆ ಎಂತಹ ಕ್ಲಿಷ್ಟ ಸಂದರ್ಭದಲ್ಲೂ ಧೃತಿಗೆಡದೆ ಇರುವ ಧೈರ್ಯ ನೀಡುತ್ತದೆ. ರಂಗಭೂಮಿಯ ಶೇ.99ರಷ್ಟು ಜನ ಐಷಾರಾಮಿ ಬದುಕಿಗೆ ಆಸೆಪಟ್ಟವರಲ್ಲ. ಡಾ.ರಾಜ್‌ಕುಮಾರ್ ಇದಕ್ಕೆ ಸೂಕ್ತ ನಿದರ್ಶನವಾಗುತ್ತಾರೆ. ಡಾ.ರಾಜ್‌ಕುಮಾರ್ ಹಾಗೂ ಬಿ.ವಿ.ಕಾರಂತ ಇಬ್ಬರೂ ಗುಬ್ಬಿ ನಾಟಕ ಕಂಪನಿಯಲ್ಲಿ ಬಾಲನಟರಾಗಿ ಜೊತೆಯಲ್ಲಿ ಅಭಿನಯಿಸಿದ್ದವರು. ಹೀಗಾಗಿ ಡಾ.ರಾಜ್‌ಕುಮಾರ್ ಮೈಸೂರಿಗೆ ಭೇಟಿ ನೀಡಿದಾಗಲೆಲ್ಲಾ ರಂಗಾಯಣಕ್ಕೆ ಭೇಟಿ ನೀಡಿ ಬಿ.ವಿ.ಕಾರಂತರೊಂದಿಗೆ ಮಾತುಕತೆ ನಡೆಸಿ ಹೋಗುತ್ತಿದ್ದರು ಎಂದು ಸ್ಮರಿಸಿದರು.

ಕನ್ನಡ ಚಿತ್ರರಂಗದ ಪ್ರಾರಂಭದಲ್ಲಿ ಅಭಿನಯಿಸಿರುವ ಬಹುತೇಕ ಎಲ್ಲರ ಮೂಲವೂ ರಂಗಭೂಮಿಯೇ ಆಗಿದೆ. ರಂಗಭೂಮಿಗೆ ಭೂತ, ವರ್ತಮಾನ ಹಾಗೂ ಭವಿಷ್ಯ ಕಾಲದ ಮೇಲೆ ಕನ್ನಡಿ ಹಿಡಿಯುವ ಶಕ್ತಿಯಿದೆ. ಬಹುಶಃ ರಂಗಭೂಮಿ ಎನ್ನುವುದು ಅಭಿನಯದ ಹುಚ್ಚು ಇದ್ದವರನ್ನೇ ಸೆಳೆಯುತ್ತದೆ. ಅದ್ಭುತವಾದ ಅನುಭವ ನೀಡುವ ಕ್ಷೇತ್ರವೆಂದರೆ ಅದು ರಂಗಭೂಮಿ. ಎಲ್ಲಾ ಇದ್ದೂ ಸುರಕ್ಷಿತವಾಗಿದ್ದರೆ ಅಂತಹವರಿಂದ ಯಾವುದೇ ಸಾಧನೆ ಸಾಧ್ಯವಿಲ್ಲ. ಏನಾದರೂ ಕೊರತೆ ಇದ್ದವರೇ ಛಲ ಬಿಡದೇ ಸಾಧನೆ ಮಾಡುತ್ತಾರೆ ಎಂಬುದಕ್ಕೆ ಸಮಾಜದಲ್ಲಿ ಸಾಕಷ್ಟು ನಿದರ್ಶನಗಳು ಸಿಗುತ್ತವೆ ಎಂದು ತಿಳಿಸಿದರು.

ಆಧುನಿಕ ಕನ್ನಡ ರಂಗಭೂಮಿಯು ದೊಡ್ಡ ದೊಡ್ಡ ಪ್ರತಿಭೆಗಳನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದೆ. ರಂಗಭೂಮಿ ವಾಸ್ತವದ ಮೇಲೆ ಬೆಳಕು ಚೆಲ್ಲುತ್ತದೆ. ನಮ್ಮ ಶಿಕ್ಷಣ ವ್ಯವಸ್ಥೆಯೊಳಗೆ ಕಲಿಯಲಾಗದ ಎಷ್ಟೋ ವಿಚಾರಗಳನ್ನು ರಂಗಭೂಮಿ ಕಲಿಸುತ್ತದೆ. ರಂಗಭೂಮಿ ಮತ್ತು ಜಾನಪದ ಕಲೆಯತ್ತ ನಮ್ಮ ಯುವ ಸಮುದಾಯ ಬರಬೇಕು ಎಂದರು.

'ಯುವ ಜನರಿಗೆ ರಂಗಭೂಮಿ ಅವಶ್ಯಕತೆ' ಕುರಿತು ರಂಗಾಯಣದ ಹಿರಿಯ ಕಲಾವಿದ ರಾಮನಾಥ್, 'ಜೆಪ್ಪು ತಕ್ಕಡಿ ಬೋಳೇಶಂಕರ ನಾಟಕ' ಕುರಿತು ರಂಗಾಯಣದ ಹಿರಿಯ ಕಲಾವಿದ ಕೃಷ್ಣಕುಮಾರ್ ನಾರ್ಣಕಜೆ ವಿಷಯ ಮಂಡಿಸಿ, ಶಿಬಿರಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ಸಂಸ್ಥೆಯ ದಿನಮಣಿ ಮತ್ತಿತರರು ಹಾಜರಿದ್ದರು.

ಡಿ.18ರಂದು ನಾಟಕ ಪ್ರದರ್ಶನ

> ದೇಸಿರಂಗ ಸಾಂಸ್ಕೃತಿಕ ಸಂಸ್ಥೆಯಿಂದ ಆಯೋಜಿಸಿರುವ 20 ದಿನಗಳ ರಂಗ ತರಬೇತಿ ಶಿಬಿರದ ಪ್ರಯುಕ್ತ ಶಿಬಿರಾರ್ಥಿಗಳಿಗಾಗಿ ಈ ವಿಚಾರ ಸಂಕಿರಣ, ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈಗಾಗಲೇ ಶಿಬಿರದ 17 ದಿನಗಳು ಕಳೆದಿದ್ದು, 18 ಮಂದಿ ಯುವ ಜನರು ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ. ಡಿ.18ರಂದು ಡಾ.ಚಂದ್ರಶೇಖರ ಕಂಬಾರರ ನಾಟಕ 'ಜೆಪ್ಪು ತಕ್ಕಡಿ ಬೋಳೇಶಂಕರ' ಪ್ರದರ್ಶನ ಏರ್ಪಡಿಸಿದ್ದು, ಶಿಬಿರಾರ್ಥಿಗಳು ಈ ನಾಟಕ ಪ್ರಸ್ತುತಪಡಿಸಲಿದ್ದಾರೆ.
>
> –ಕೃಷ್ಣಜನಮನ, ರಂಗ ನಿರ್ದೇಶಕ

ಮೈಸೂರು ಮಿತ್ರ ಶುಕ್ರವಾರ 15 ಡಿಸೆಂಬರ್ 2023

ಅತ್ತೆಯನ್ನೇ ಹತ್ಯೆಗೈದ ಅಳಿಯನ ಬಂಧನ

ಶ್ರೀರಂಗಪಟ್ಟಣ, ಡಿ.14– ಪಾಂಡವಪುರ ತಾಲೂಕಿನ ಎಲೆಕೆರೆ ಗ್ರಾಮದಲ್ಲಿ ತನ್ನ ಅತ್ತೆಯನ್ನೇ ಹತ್ಯೆಗೈದು ಪರಾರಿಯಾಗಿದ್ದ ಅಳಿಯನನ್ನು ಬಂಧಿಸುವಲ್ಲಿ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ. ಪಾಂಡವಪುರ ತಾಲೂಕಿನ ಕಟ್ಟೇರಿ ಗ್ರಾಮದ ನಿವಾಸಿ ಚೆಲುವರಾಜು ಅವರ ಪುತ್ರ ಕಾಂತರಾಜು(31) ಬಂಧಿತ ಆರೋಪಿ.



ವಿವರ: ಎಲೆಕೆರೆ ಗ್ರಾಮದ ನಿವಾಸಿ ಲೇ. ಸ್ವಾಮಿಗೌಡರ ಪತ್ನಿ ಪಾರ್ವತಮ್ಮ ಅವರು ಡಿ.12 ರಂದು ಸೋಮವಾರ ರಾತ್ರಿ ತಮ್ಮ ಪುತ್ರಿ ಅರ್ಪಿತಾಳೊಂದಿಗೆ ಗ್ರಾಮದ ಈಶ್ವರ ದೇವಾಲಯಕ್ಕೆ ಕಾರ್ತಿಕ ಮಾಸದ ಪೂಜೆಗೆ ತೆರಳಿದ್ದರು. ದೇವಾಲಯದಲ್ಲಿ ಪೂಜೆ ಸಲ್ಲಿಸಿ, ಬಳಿಕ ಗ್ರಾಮದ ವಿಸಿ ನಾಲೆಯಲ್ಲಿ ಗಂಗಾ ಪೂಜೆ ಮುಗಿಸಿ ಮನೆಗೆ ವಾಪಸ್ಸಾಗುವಾಗ ಹಿಂದಿನಿಂದ ಬಂದ ವ್ಯಕ್ತಿಯೋರ್ವ ಪಾರ್ವತಮ್ಮ ಅವರಿಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದ. ಈ ವೇಳೆ ಸ್ಥಳೀಯರು ತಕ್ಷಣ ಆಕೆಯನ್ನು ಮೈಸೂರಿನ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದರಾದರೂ, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದರು. ಈ ಸಂಬಂಧ ಪಾರ್ವತಮ್ಮ ಅವರ ಪುತ್ರ ಅರುಣ್ ಕುಮಾರ್ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ತನಿಖೆ ಕೈಗೊಂಡು ಘಟನೆ ನಡೆದು 24 ಗಂಟೆಯೊಳಗೆ ಕಾಂತರಾಜುನನ್ನು ಬಂಧಿಸಿದ್ದಾರೆ.

ವಿಚಾರಣೆ ವೇಳೆ ಆರೋಪಿ ಕಾಂತರಾಜು, ನನ್ನ ಪತ್ನಿ ಅರ್ಪಿತಾ ನನ್ನನ್ನು ಬಿಟ್ಟು ತವರು ಮನೆಯಲ್ಲಿರಲು ಹಾಗೂ ನನ್ನ ಸಂಸಾರದಲ್ಲಿ ಹೊಂದಾಣಿಕೆ ಇಲ್ಲದಿರಲು ನನ್ನ ಅತ್ತೆ ಪಾರ್ವತಮ್ಮನೇ ಕಾರಣ. ನನ್ನ ಪತ್ನಿ ಅರ್ಪಿತಾಳನ್ನು ಕಳುಹಿಸಿಕೊಡುವಂತೆ ಸಾಕಷ್ಟು ಬಾರಿ ಕೇಳಿದರೂ ಕಳುಹಿಸಿರಲಿಲ್ಲ. ಹೀಗಾಗಿ ನಾನೇ ನಮ್ಮ ಅತ್ತೆಯನ್ನು ಹತ್ಯೆ ಮಾಡಿರುವುದಾಗಿ ಪೊಲೀಸರ ಮುಂದೆ ತಪ್ಪೊಪ್ಪಿಕೊಂಡಿದ್ದಾನೆ. ಪೊಲೀಸರು ಆರೋಪಿಯಿಂದ ಕೃತ್ಯಕ್ಕೆ ಬಳಸಿದ್ದ ಬಜಾಜ್ ಪಲ್ಸರ್ ಬೈಕ್, ಚಾಕುವನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಬಿ.ಜಿ.ಕುಮಾರ್, ಎಸ್‌ಐ ರಕ್ಷಿತ, ಸಿಬ್ಬಂದಿಗಳಾದ ಶ್ರೀನಿವಾಸ್ ಮೂರ್ತಿ, ಮುತ್ತುರಾಜ್, ರೇವಯ್ಯ, ಶಂಕರ್, ರವೀಂದ್ರ ಭಾಗವಹಿಸಿದ್ದರು.

ಚಿರತೆ ದಾಳಿ: ರೈತನಿಗೆ ಗಾಯ

ಮದ್ದೂರು, ಡಿ.14– ಹಾಡಹಗಲೇ ಚಿರತೆ ದಾಳಿ ನಡೆಸಿದ ಪರಿಣಾಮ ರೈತ ಗಾಯಗೊಂಡಿರುವ ಘಟನೆ ತಾಲೂಕಿನ ಚಾಮನಹಳ್ಳಿಯಲ್ಲಿ ಗುರುವಾರ ಮಧ್ಯಾಹ್ನ ನಡೆದಿದೆ. ಗ್ರಾಮದ ರೈತ ಶಶಿಕುಮಾರ್ (45) ಗಾಯಗೊಂಡಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈತ ಮಧ್ಯಾಹ್ನ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಚಿರತೆ ಏಕಾಏಕಿ ದಾಳಿ ನಡೆಸಿದೆ. ಪರಿಣಾಮ ಕೈಗೆ ಸಣ್ಣ ಪ್ರಮಾಣದಲ್ಲಿ ಗಾಯವಾಗಿದೆ. ಈ ವೇಳೆ ಅಲ್ಲೆ ಇದ್ದ ಮೇಕೆಯನ್ನು ಚಿರತೆ ಹೊತ್ತೊಯ್ದಿದೆ.



ಗ್ರಾಮದ ಭತ್ತದ ಗದ್ದೆಯಲ್ಲಿ 2 ಚಿರತೆ ಬೀಡು ಬಿಟ್ಟಿದ್ದು, ಏಕಾಏಕಿ ಚಿರತೆ ದಾಳಿಯಿಂದ ಭಯಗೊಂಡಿರುವ ಗ್ರಾಮದ ಜನತೆ, ಕೂಡಲೇ ಚಿರತೆಗಳ ಸೆರೆಗೆ ಒತ್ತಾಯಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ, ಬೋನಿಟ್ಟು ಚಿರತೆಗಳ ಸೆರೆಗೆ ಕ್ರಮ ಕೈಗೊಂಡಿದ್ದಾರೆ.

ಅಪ್ರಾಪ್ತ ವಯಸ್ಸಿನ ಗರ್ಭಿಣಿ ಪ್ರಕರಣ ಪತ್ತೆಯಾದರೆ ಪೋಕ್ಸೋ ಕಾಯ್ದೆಯಡಿ ದೂರು ದಾಖಲಿಸಿ

ನಿರ್ಲಕ್ಷಿಸಿದರೇ ಅಧಿಕಾರಿಗಳ ವಿರುದ್ಧವೂ ಕ್ರಮ: ಡಿಸಿ ಡಾ.ಕುಮಾರ್ ಎಚ್ಚರಿಕೆ

ಮಂಡ್ಯ, ಡಿ.14– ಜಿಲ್ಲೆಯಲ್ಲಿ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳು ಗರ್ಭಿಣಿಯಾದ ಪ್ರಕರಣ ಕಂಡು ಬಂದಲ್ಲಿ ಅಧಿಕಾರಿಗಳು ತಕ್ಷಣ ಪೋಕ್ಸೋ ಕಾಯ್ದೆಯಡಿ ದೂರು ದಾಖಲಿಸಬೇಕು. ಒಂದು ವೇಳೆ ದೂರು ದಾಖಲಾಗದಿರುವುದು ಜಿಲ್ಲಾಡಳಿತದ ಗಮನಕ್ಕೆ ಬಂದರೆ ಅಧಿಕಾರಿಗಳ ವಿರುದ್ಧ ಪೋಕ್ಸೋ ಕಾಯ್ದೆ ಸೆಕ್ಷನ್ 3.3ರಡಿ ಶಿಸ್ತು ಕ್ರಮ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿ ಡಾ.ಕುಮಾರ್ ಎಚ್ಚರಿಕೆ ನೀಡಿದರು.



ಗುರುವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬಾಲ್ಯವಿವಾಹ ತಡೆಗಟ್ಟುವ ಕುರಿತು ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಅಪ್ರಾಪ್ತ ಗರ್ಭಿಣಿಯರನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಅಂಗನವಾಡಿ ಕಾರ್ಯಕರ್ತೆಯರ ಮೂಲಕ ವಿವಿಧ ಸೌಲಭ್ಯ ಒದಗಿಸುವ ಸಂದರ್ಭ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು ಅವರ ಬಳಿ ಚಿಕಿತ್ಸೆಗೆ ಬಂದಾಗ ಪತ್ತೆ ಹಚ್ಚಬಹುದು. ಪ್ರಕರಣಗಳ ಬಗ್ಗೆ ತಿಳಿದಿದ್ದರೂ ಅವರ ಮೇಲೆ ಕ್ರಮ ಜರುಗಿಸದಿದ್ದಲ್ಲಿ ಕರ್ತವ್ಯ ಲೋಪವಾಗುತ್ತದೆ ಎಂದರು.

ಗ್ರಾಮದ ಪ್ರತಿಯೊಂದು ಮನೆಗಳಿಗೂ ಮಾಹಿತಿ ತಲುಪಿಸುವ ಹಾಗೂ ಪಡೆಯಲು ಆರೋಗ್ಯ ಇಲಾಖೆಯಲ್ಲಿ ಆಶಾ ಕಾರ್ಯಕರ್ತೆಯರು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಇದ್ದಾರೆ. ಇಂತಹ ವ್ಯವಸ್ಥೆ ಇರುವಾಗ ಬಾಲ್ಯ ವಿವಾಹ ಹಾಗೂ ಭ್ರೂಣ ಹತ್ಯೆ ಪ್ರಕರಣ ನಡೆಯದಂತೆ ಅಧಿಕಾರಿಗಳು ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಿ. ಬಾಲ್ಯವಿವಾಹ ಪ್ರಕರಣ ದಾಖಲಿಸುವುದು ಅಧಿಕಾರಿಗಳ ಉದ್ದೇಶವಾಗಬಾರದು. ಬಾಲ್ಯ ವಿವಾಹ ತಡೆಗಟ್ಟುವುದು ಮುಖ್ಯ. ಬಾಲ್ಯ ವಿವಾಹ ತಡೆಗಟ್ಟುವಲ್ಲಿ ಅಧಿಕಾರಿಗಳು ವಿಫಲವಾದರೇ ಅವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು ಎಂದು ಎಚ್ಚರಿಸಿದರು.

ಬಾಲ್ಯ ವಿವಾಹದಿಂದಾಗುವ ದುಷ್ಪರಿಣಾಮಗಳು ಹಾಗೂ ಬಾಲ್ಯ ವಿವಾಹ ನಿಷೇಧ ಕಾಯ್ದೆ 2006ರಡಿ ನೀಡಲಾಗುವ ಶಿಕ್ಷೆಯ ಬಗ್ಗೆ ಶಾಲಾ ಹಾಗೂ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಮಾಹಿತಿ ನೀಡಿ. ಗ್ರಾಮಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಿ, ಜಿಲ್ಲಾ ಆರೋಗ್ಯಾಧಿಕಾರಿ, ತಾಲೂಕು ಆರೋಗ್ಯ ಅಧಿಕಾರಿ ಹಾಗೂ ಮಹಿಳಾ ಮತ್ತು ಕಲ್ಯಾಣಾಧಿಕಾರಿ ಬಾಲ್ಯವಿವಾಹ ಹಾಗೂ ಅಪ್ರಾಪ್ತ ಗರ್ಭಿಣಿ ಪ್ರಕರಣದಲ್ಲಿ ನಿರ್ಲಕ್ಷ್ಯ ವಹಿಸಿದರೆ ಅದು ಸಮಾಜಕ್ಕೆ ಮಾಡುವ ಅನ್ಯಾಯ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಮಾತನಾಡಿ, ಜಿಲ್ಲೆಯಲ್ಲಿ ಬಾಲ್ಯವಿವಾಹ, ಪೋಕ್ಸೋ ಸೇರಿದಂತೆ ಯಾವುದೇ ಪ್ರಕರಣ ಕಂಡು ಬಂದರೆ ತಕ್ಷಣ ಪೊಲೀಸ್ ಇಲಾಖೆಗೆ ಮಾಹಿತಿ ನೀಡಿ ದೂರು ದಾಖಲಿಸಿ. ವಿಳಂಬವಾಗಿ ಹಾಗೂ ಅಸಡ್ಡೆಯಿಂದ ದೂರನ್ನು ನಿಧಾನವಾಗಿ ದಾಖಲಿಸಿದರೇ ಅಧಿಕಾರಿಗಳು ಸಹ ತಪ್ಪಿತಸ್ಥರಾಗುತ್ತಾರೆ ಎಂದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಮೋಹನ್, ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ರಾಜಮೂರ್ತಿ, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಶಿವರಾಮೇಗೌಡ, ತಹಸೀಲ್ದಾರ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಪೊಲೀಸ್ ಅಧಿಕಾರಿಗಳು ಸೇರಿದಂತೆ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

6 ಅಧಿಕಾರಿಗಳು ಸರ್ಕಾರ ರೂಪಿಸುವ ಕಾಯ್ದೆ ನಿಯಮಗಳಂತೆ ಕಾರ್ಯ ನಿರ್ವಹಿಸಬೇಕು. ಅಪ್ರಾಪ್ತ ವಯಸ್ಸಿನ ಗರ್ಭಿಣಿಯರು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾದಾಗ ವೈದ್ಯರು ತಕ್ಷಣ ಸಂಬಂಧಿಸಿದ ಇಲಾಖೆಗೆ ಮಾಹಿತಿ ನೀಡಿ, ದೂರು ದಾಖಲಿಸಬೇಕು. ಬಾಲ್ಯವಿವಾಹ ತಡೆಗಟ್ಟಲು ಶಿಕ್ಷಕರು, ಗ್ರಾಮ ಲೆಕ್ಕಿಗರು, ಪಿಡಿಓ, ಪೊಲೀಸ್ ಸಿಬ್ಬಂದಿ ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು. ಶಿಕ್ಷಕರು ಶಾಲೆಯಿಂದ ಮಕ್ಕಳು ಹೊರ ಉಳಿದರೆ ಆ ಬಗ್ಗೆ ಮಾಹಿತಿ ಪಡೆಯಬೇಕು. ಪ್ರೌಢಶಾಲಾ ವಿದ್ಯಾಭ್ಯಾಸ ಮುಗಿಸಿದ ನಂತರ ವಿದ್ಯಾರ್ಥಿನಿಯರು ಕಾಲೇಜಿಗೆ ದಾಖಲಾಗಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು.

– ಶೇಖ್ ತನ್ವೀರ್ ಆಸಿಫ್, ಜಿಪಂ ಸಿಇಓ.

ಮೂರನೇ ದಿನಕ್ಕೆ ಕಾಲಿಟ್ಟ ಅಂಚೆ ನೌಕರರ ಧರಣಿ



ಕೆ.ಆರ್.ಪೇಟೆ, ಡಿ.14– ಕಮಲೇಶ್ ಚಂದ್ರ ವರದಿ ಜಾರಿ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪಟ್ಟಣದ ಅಂಚೆ ಕಚೇರಿ ಎದುರು ಅಂಚೆ ನೌಕರರು ನಡೆಸುತ್ತಿರುವ ಧರಣಿ ಗುರುವಾರಕ್ಕೆ ಮೂರನೇ ದಿನಕ್ಕೆ ಕಾಲಿಟ್ಟಿದೆ.

ಈ ವೇಳೆ ಮಾತನಾಡಿದ ತಾಲೂಕು ಗ್ರಾಮೀಣ ಅಂಚೆ ಸೇವಕರ ಜಂಟಿ ಕ್ರಿಯಾ ಸಮಿತಿ ಸದಸ್ಯರು, ಕಮಲೇಶ್ ಚಂದ್ರ ವರದಿ ಕೂಡಲೇ ಜಾರಿಗೊಳಿಸಬೇಕು. ತಮ್ಮ ಸೇವೆ ಖಾಯಂಗೊಳಿಸಿ ಪಿಂಚಣಿ, ವೈದ್ಯಕೀಯ ಸೌಲಭ್ಯ, ಸೇವಾ ಹಿರಿತನದ ಆಧಾರದ ಮೇಲೆ ಬಡ್ತಿ ಮೊದಲಾದ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಒತ್ತಾಯಿಸಿದರು.

2018ರಲ್ಲಿ 16 ದಿನಗಳ ಕಾಲ ನಡೆದ ಅನಿರ್ದಿಷ್ಟಾವಧಿ ಮುಷ್ಕರದ ವೇಳೆ ಅಂಚೆ ಇಲಾಖೆ ಉನ್ನತಾಧಿಕಾರಿಗಳು ಕೆಲವೇ ತಿಂಗಳಲ್ಲಿ ತಮ್ಮ ಬೇಡಿಕೆ ಈಡೇರಿಸುವ ಭರವಸೆ ನೀಡಿದ ಹಿನ್ನಲೆಯಲ್ಲಿ ಚಳವಳಿ ವಾಪಸ್ ಪಡೆಯಲಾಗಿತ್ತು. ಆದರೂ ಈವರೆಗೂ ಇಲಾಖೆ ಅಧಿಕಾರಿಗಳು ಹಾಗೂ ಕೇಂದ್ರ ಸರ್ಕಾರ ನಮ್ಮ ಬೇಡಿಕೆ ಈಡೇರಿಸಲು ಮುಂದಾಗಿಲ್ಲ. ಹೀಗಾಗಿ ನಾವು ಮತ್ತೆ ಪ್ರತಿಭಟನೆಗೆ ಇಳಿದಿದ್ದೇವೆ. ನಮ್ಮ ಬೇಡಿಕೆ ಈಡೇರುವ ತನಕ ಹೋರಾಟ ಮುಂದುವರೆಸುತ್ತೇನೆ ಎಂದ ಪ್ರತಿಭಟನಾಕಾರರು ನಮ್ಮ ಹೋರಾಟಕ್ಕೆ ನ್ಯಾಯ ಸಿಗದಿದ್ದರೇ ಮುಂದಿನ ದಿನಗಳಲ್ಲಿ ಗ್ರಾಮೀಣ ಭಾಗದ ಸಾರ್ವಜನಿಕರ ಸಹಕಾರದೊಂದಿಗೆ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆ ವೇಳೆ ಗ್ರಾಮೀಣ ಅಂಚೆ ಡಾಕ್ ಸೇವಕರ ಯೂನಿಯನ್ ಪದಾಧಿಕಾರಿಗಳಾದ ಗೋವಿಂದರಾಜು, ಮಹೇಶ್, ಬಿ.ಎ.ಸುಬ್ರಹ್ಮಣ್ಯ, ಪ್ರಭಾವತಿ, ಸತೀಶ್, ಲಕ್ಷ್ಮೀಶ್, ಶಿವರಾಮ ನಾಯಕ, ಶಂಕರ ನಾರಾಯಣ್, ಬಿ.ಎನ್. ಇಂದ್ರ ಕುಮಾರ್, ಬಿ.ಎನ್. ಪದ್ಮನಾಭ, ಅರ್ಪಿತಾ, ರಾಮೇಗೌಡ, ವಿನೂತ, ಕುಮಾರ್ ಸೇರಿದಂತೆ ತಾಲೂಕಿನ ವಿವಿಧ ಅಂಚೆ ಕಚೇರಿಗಳ ಪೋಸ್ಟ್ ಮಾಸ್ಟರ್ಸ್ ಹಾಗೂ ಪೋಸ್ಟ್‌ಮನ್‌ಗಳು ಭಾಗವಹಿಸಿದ್ದರು.

ವಕೀಲರ ಸಂರಕ್ಷಣಾ ಕಾಯ್ದೆ ಜಾರಿಗೆ ಒತ್ತಾಯಿಸಿ ಪ್ರತಿಭಟನೆ

ಶ್ರೀರಂಗಪಟ್ಟಣ, ಡಿ.14– ವಕೀಲರ ಸಂರಕ್ಷಣಾ ಕಾಯ್ದೆ ಜಾರಿಗೆ ಒತ್ತಾಯಿಸಿ ವಕೀಲರ ಸಂಘದ ಸದಸ್ಯರು ಪಟ್ಟಣದ ನ್ಯಾಯಾಲಯದ ಎದುರು ಪ್ರತಿಭಟನೆ ನಡೆಸಿದರು.



ವಕೀಲರ ಸಂಘದ ಅಧ್ಯಕ್ಷ ಸತ್ಯನಾರಾಯಣ ಅವರ ನೇತೃತ್ವದಲ್ಲಿ ಸಂಘದ ಕಚೇರಿಯಲ್ಲಿ ಕಾಯ್ದೆ ಕುರಿತು ಚರ್ಚಿಸಿದ ಬಳಿಕ ಧರಣಿ ಆರಂಭಿಸಿದ ಪ್ರತಿಭಟನಾಕಾರರು, ಯಾವುದೇ ಸರ್ಕಾರಗಳು ವಕೀಲರಿಗೆ ರಕ್ಷಣೆ ನೀಡುವ ಕಾಯ್ದೆಗಳನ್ನು ಜಾರಿಗೊಳಿಸಲು ಮೀನಾಮೇಷ ಎಣಿಸುತ್ತಿವೆ. ಇದರಿಂದ ವಕೀಲರಿಗೆ ರಕ್ಷಣೆ ಇಲ್ಲದಂತಾಗಿದೆ. ಕಾಯ್ದೆ ಜಾರಿ ಸಂಬಂಧ ಹಲವು ವರ್ಷಗಳಿಂದ ಹೋರಾಟ ನಡೆಸಿದರೂ, ಯಾವುದೇ ಪ್ರಯೋಜನವಾಗಿಲ್ಲ. ವಕೀಲರ ಮೇಲೆ ಹಲ್ಲೆ, ಹತ್ಯೆ ನಡೆಯುತ್ತಿದ್ದರೂ ಸರ್ಕಾರ ಈ ಬಗ್ಗೆ ಗಮನ ಹರಿಸುತ್ತಿಲ್ಲ. ಹೀಗಾಗಿ ಕೂಡಲೇ ವಕೀಲರ ಸಂರಕ್ಷಣಾ ಕಾಯ್ದೆ ಜಾರಿ ಮಾಡುವಂತೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ವಕೀಲರ ಸಂಘದ ಉಪಾಧ್ಯಕ್ಷ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಪವನ್‌ಗೌಡ, ಖಜಾಂಚಿ ವಿನಯ್, ಸಹ ಕಾರ್ಯದರ್ಶಿ ಡಿ.ಕೃಷ್ಣೇಗೌಡ, ಹಿರಿಯ ವಕೀಲರಾದ ಬಿ.ನಿಂಗೇಗೌಡ, ಎ.ಕುಮಾರ್, ಕೆ.ಕುಮಾರ್, ಗಂಗರಾಜು, ಶಿವರಾಜು, ಹೇಮಾರಾಧ್ಯ, ಸಿದ್ದೇಶ್, ಬಾಲರಾಜು, ಶಿವರಾಮು, ರವೀಶ್, ಲಕ್ಷ್ಮಿ, ಸೌಮ್ಯ, ಪುಷ್ಪ, ಲತಾ, ಜಯಂತಿ ಸೇರಿದಂತೆ ಇತರರಿದ್ದರು.

ಸೈನಿಕ ಶಾಲೆ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮಂಡ್ಯ, ಡಿ.14– ಕುಶಾಲನಗರದ ಕೊಡಿಗೆ ಸೈನಿಕ ಶಾಲೆಯ 6 ಮತ್ತು 9ನೇ ತರಗತಿಗೆ ಅಖಿಲ ಭಾರತ ಸೈನಿಕ ಶಾಲೆ ಪ್ರವೇಶ ಪರೀಕ್ಷೆ ನಿಗದಿಯಾಗಿದ್ದು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಡಿ.16 ಕೊನೆ ದಿನ. 2024ರ ಜ.21ರಂದು ಪರೀಕ್ಷೆ ನಡೆಯಲಿದ್ದು, ಹೆಚ್ಚಿನ ಮಾಹಿತಿಗಾಗಿ ಎನ್‌ಟಿಎ ವೆಬ್‌ಸೈಟ್ http://exam.nta.ac.in/AISSEE ಅಥವಾ www.sainikschoolkodugu.edu.in ಅನ್ನು ಸಂಪರ್ಕಿಸಬಹುದು.

ಡಿ.20ರಂದು 'ಭಾರತರತ್ನ' ಕೃತಿ ಬಿಡುಗಡೆ

ಮೈಸೂರು,ಡಿ.14(ಪಿಎಂ)– ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಡಾ.ಡಿ.ಎಸ್.ಜಯಪ್ಪಗೌಡ ಅವರ ಆಂಗ್ಲಭಾಷೆಯ ಕೃತಿ 'ಭಾರತರತ್ನ (ಸರ್.ಎಂ.ವಿಶ್ವೇಶ್ವರಯ್ಯ ಅವರ ಜೀವನ ಚರಿತ್ರೆ)' ಬಿಡುಗಡೆ ಸಮಾರಂಭವನ್ನು ಡಿ.20ರಂದು ಹಮ್ಮಿಕೊಳ್ಳಲಾಗಿದೆ.

ಮೈಸೂರಿನ ಜೆಎಲ್‌ಬಿ ರಸ್ತೆಯ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಅಂದು ಬೆಳಗ್ಗೆ 11ಕ್ಕೆ ಸಮಾರಂಭ ನಡೆಯಲಿದ್ದು, ಶ್ರೇಷ್ಠ ಕಾದಂಬರಿಕಾರ ಡಾ.ಎಸ್.ಎಲ್. ಭೈರಪ್ಪ ಕೃತಿ ಬಿಡುಗಡೆ ಮಾಡಲಿದ್ದಾರೆ. ಇಂಜಿನಿಯರ್‌ಗಳ ಸಂಸ್ಥೆ ಅಧ್ಯಕ್ಷ ಡಾ.ಆರ್.ದೀಪು ಅಧ್ಯಕ್ಷತೆ ವಹಿಸಲಿದ್ದು, ಇತಿಹಾಸ ತಜ್ಞ ಡಾ.ಎನ್.ಎಸ್.ರಂಗರಾಜು ಕೃತಿ ಕುರಿತು ಮಾತನಾಡಲಿದ್ದಾರೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಪ್ರಸ್ತಾವಿಕ ಭಾಷಣ ಮಾಡಲಿದ್ದು, ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಕೃತಿಯ ಕರ್ತೃ ಡಾ.ಜಯಪ್ಪಗೌಡ ಉಪಸ್ಥಿತರಿರಲಿದ್ದು, ಎನ್.ಅಮುದ ಪರಮೇಶ್ವರ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ತಾಪಮಾನ, ಗಾಳಿ, ಹವಾನಿಯಂತ್ರಣ ವ್ಯವಸ್ಥೆ ಸರಿಯಾದ ತಿಳುವಳಿಕೆಯಿಂದ

ಕಟ್ಟಡದೊಳಗಿನ ಗಾಳಿಯ ಗುಣಮಟ್ಟ ಹೆಚ್ಚಲಿದೆ

ಇಂಜಿನಿಯರ್ ಆರ್.ಗೋಪಾಲಕೃಷ್ಣನ್



ಮೈಸೂರು, ಡಿ.14(ಪಿಎಂ)– ತಾಪಮಾನ, ಗಾಳಿ ಮತ್ತು ಹವಾನಿಯಂತ್ರಣ ವ್ಯವಸ್ಥೆ ಬಗ್ಗೆ ಸರಿಯಾದ ತಿಳುವಳಿಕೆ ಮೂಲಕ ಕಟ್ಟಡದ ಒಳಾಂಗಣ ಗಾಳಿಯ ಗುಣಮಟ್ಟ ಹೆಚ್ಚಲಿದೆ ಎಂದು ಕಲ್ಪಾಕ್ಕಂನ ಇಂದಿರಾ ಗಾಂಧಿ ಸೆಂಟರ್ ಫಾರ್ ಅಟಾಮಿಕ್ ರಿಸರ್ಚ್ ಸಂಸ್ಥೆಯ ವಿಜ್ಞಾನ ಅಧಿಕಾರಿಯೂ ಆದ ಇಶ್ರೇ ಸಂಪನ್ಮೂಲ ವ್ಯಕ್ತಿ ಹಾಗೂ ಇಂಜಿನಿಯರ್ ಆರ್. ಗೋಪಾಲಕೃಷ್ಣನ್ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ರಾಷ್ಟ್ರೀಯ ಶಕ್ತಿ ಸಂರಕ್ಷಣಾ ದಿನದ ಪ್ರಯುಕ್ತ ಇಂಜಿನಿಯರ್‌ಗಳ ಸಂಸ್ಥೆ ಹಾಗೂ ಇಶ್ರೇ ಮೈಸೂರು ಘಟಕದ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ 'ಹವಾ ವಿತರಣಾ ವ್ಯವಸ್ಥೆಯಲ್ಲಿ ಶಕ್ತಿಯ ಸಂರಕ್ಷಣೆ' ಕುರಿತು ಮಾತನಾಡಿದರು.

ಕಚೇರಿ, ಕಾರ್ಖಾನೆ, ಮನೆಗಳು ಸೇರಿದಂತೆ ಮೊದಲಾದ ಕಟ್ಟಡಗಳ ನಿರ್ಮಾಣದಲ್ಲಿ ಹವಾನಿಯಂತ್ರಣ ವ್ಯವಸ್ಥೆ ಸಮರ್ಪಕವಾಗಿ ವಿನ್ಯಾಸಗೊಳಿಸುವ ಬಗ್ಗೆ ಬಹುತೇಕರು ಆಲೋಚಿಸುವುದಿಲ್ಲ. ಆದರೆ ಇಲ್ಲಿ ಹೊರಹೋಗುವ ಮತ್ತು ಒಳಬರುವ ಗಾಳಿಗೆ ವೈಜ್ಞಾನಿಕ ರೀತಿಯಲ್ಲಿ ಅವಕಾಶ ನೀಡಿದರೆ ಎಷ್ಟೋ ಶಕ್ತಿ ಉಳಿತಾಯ ಮಾಡಬಹುದು ಎಂದು ತಿಳಿಸಿದರು.

ನಾವು ಸೂಕ್ತ ರೀತಿಯಲ್ಲಿ ಮಾಡುವ ಸಣ್ಣ ಬದಲಾವಣೆಯೂ ಉಪಕರಣಗಳ ಕಾರ್ಯಕ್ಷಮತೆ ಹೆಚ್ಚಿಸಿ ಇಂಧನ ಉಳಿತಾಯಕ್ಕೆ ಕಾರಣವಾಗುತ್ತದೆ. ಈ ನಿಟ್ಟಿನಲ್ಲಿ ಕ್ರಮವಹಿಸಬೇಕು. ಇಂಧನ ಸಂರಕ್ಷಣೆಯಲ್ಲಿ ಇದು ಮುಖ್ಯ ಸಂಗತಿ ಎಂದರು. ಇಶ್ರೇ ಮೈಸೂರು ಘಟಕದ ಅಧ್ಯಕ್ಷ ಹಾಗೂ ಇಂಜಿನಿಯರ್‌ಗಳ ಸಂಸ್ಥೆ ಕಾರ್ಯದರ್ಶಿ ಡಾ.ಎಸ್.ಎ. ಮೋಹನ್ ಕೃಷ್ಣ, ಇಶ್ರೇ ಮೈಸೂರು ಘಟಕದ ಚುನಾಯಿತ ಅಧ್ಯಕ್ಷ ಅರಣಿ ಶ್ರೀನಿವಾಸ್, ಕಾರ್ಯಕ್ರಮ ಸಂಚಾಲಕರಾದ ಕೆ.ಬಿ. ಭಾಸ್ಕರ್, ಟಿ.ಎ.ಪ್ರಭಾಕರ್, ಇಂಜಿನಿಯರ್‌ಗಳ ಸಂಸ್ಥೆ ಮಾಜಿ ಅಧ್ಯಕ್ಷ ಬಿ.ಎಸ್. ಪ್ರಭಾಕರ್ ಮತ್ತಿತರರು ಹಾಜರಿದ್ದರು.



ಕರ್ನಾಟಕ ದಲಿತ ಸಂಘರ್ಷ ಸಮಿತಿ ಮೈಸೂರು ಜಿಲ್ಲಾ ಶಾಖೆಯ ಅಧ್ಯಕ್ಷರಾಗಿ ನೇಮಕವಾಗಿರುವ ಹಲಗಯ್ಯನಹುಂಡಿ ಗ್ರಾಮದ ಶಂಕರ್ ಅವರಿಗೆ ಸಂಘಟನೆಯ ರಾಜ್ಯಾಧ್ಯಕ್ಷ ಡಾ.ಎನ್.ಮೂರ್ತಿ ನೇಮಕಾತಿ ಪತ್ರ ವಿತರಣೆ ಮಾಡಿದರು. ಇತರ ಮುಖಂಡರನ್ನು ಚಿತ್ರದಲ್ಲಿ ಕಾಣಬಹುದು.

'ಭಾರತೀಯ ಚಿಂತನೆ ಜಾಗತೀಕರಣಗೊಳಿಸುವಿಕೆ'

ಮೈಸೂರಿನಲ್ಲಿ ನಾಲ್ಕನೇ ಅಂತಾರಾಷ್ಟ್ರೀಯ ಸಮಾವೇಶಕ್ಕೆ ಚಾಲನೆ

ಮೈಸೂರು, ಡಿ.14(ಎಂಕೆ)– ನಗರದ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಕೋಝಿಕೋಡ್ (IIM Kozhikode) ವತಿಯಿಂದ ಆಯೋಜಿಸಿರುವ 'ಭಾರತೀಯ ಚಿಂತನೆಯನ್ನು ಜಾಗತೀಕರಣಗೊಳಿಸುವಿಕೆ' (Globalizing Indian thought GIT-2023) ಶೀರ್ಷಿಕೆಯ 4ನೇ ಅಂತಾರಾಷ್ಟ್ರೀಯ ಸಮಾವೇಶಕ್ಕೆ ಗುರುವಾರ ಚಾಲನೆ ದೊರೆಯಿತು.

'ಭಾರತೀಯ ಜ್ಞಾನ ವ್ಯವಸ್ಥೆ, ಸಂಸ್ಕೃತಿ ಮತ್ತು ನಿರ್ವಹಣೆ' ಪರಿಕಲ್ಪನೆಯ ಅಂತಾರಾಷ್ಟ್ರೀಯ ಸಮಾವೇಶವನ್ನು ಉದ್ಘಾಟಿಸಿದ ಪ್ರಧಾನ ಮಂತ್ರಿಯವರ ಆರ್ಥಿಕ ಸಲಹಾ ಮಂಡಳಿಯ ಸದಸ್ಯ ಸಂಜೀವ್ ಸನ್ಯಾಲ್ ಮಾತನಾಡಿ, ಪ್ರಾಚೀನ ಇತಿಹಾಸವಿರುವ ಭಾರತೀಯ ಸಾಂಸ್ಕೃತಿಕ ಪರಂಪರೆ, ಭಾರತೀಯರ ಚಿಂತನಾ ಕೌಶಲ್ಯತೆ ವಿಶ್ವದೆಲ್ಲೆಡೆ ಪ್ರತಿಧ್ವನಿಸುತ್ತಿದ್ದು, ಮುಂದಿನ ದಿನಗಳಲ್ಲಿ ವಿಶ್ವಮನ್ನಣೆ ಪಡೆಯಲಿದೆ ಎಂದು ಹೇಳಿದರು.

ಭಾರತ ಅತಿದೊಡ್ಡ ಆರ್ಥಿಕತೆಯುಳ್ಳ ದೇಶವಾಗಿದ್ದು, ವಿಶ್ವದ ಅಗ್ರ 5 ದೇಶಗಳ ಪೈಕಿ ಏಷ್ಯಾದಿಂದ ಭಾರತ ಗುರ್ತಿಸಿಕೊಂಡಿದೆ. ನಾವು ಈಗಾಗಲೇ ವಿಶ್ವದ 5ನೇ ಅತಿದೊಡ್ಡ ಆರ್ಥಿಕತೆ ಹಾಗೂ ಜಿಡಿಪಿ ಲೆಕ್ಕಾಚಾರದಲ್ಲಿ ವಿಶ್ವದ ಮೂರನೇ ಅತಿ ದೊಡ್ಡ ಆರ್ಥಿಕ ಸ್ಥಾನದಲ್ಲಿದ್ದೇವೆ. ಮುಂದಿನ 18 ತಿಂಗಳುಗಳಲ್ಲಿ ದೇಶದ ಆರ್ಥಿಕತೆ ಜರ್ಮನಿಗಿಂತ ಹಾಗೆಯೇ ಮುಂದಿನ 3 ವರ್ಷಗಳಲ್ಲಿ ಜಪಾನ್‌ಗಿಂತ ದೊಡ್ಡದಾಗಲಿದೆ ಎಂದು ಭವಿಷ್ಯ ನುಡಿದರು.

ಭಾರತೀಯರ ಚಿಂತನಾ ಶಕ್ತಿಯನ್ನು ರಾಷ್ಟ್ರೀಯ ಸಂಪನ್ಮೂಲವಾಗಿ ಮಾತ್ರವಲ್ಲದೆ ಜಾಗತಿಕ ಮಾನದಂಡವಾಗಿ ಬಳಸಿಕೊಳ್ಳಬೇಕಾಗಿದೆ. ಭಾರತೀಯ ಕಂಪನಿಗಳು ಅವುಗಳ ರೇಟಿಂಗ್‌ಗಳು, ಬುದ್ಧಿವಂತಿಕೆ ಮತ್ತು ನಾವೀನ್ಯತೆ ಮಾನದಂಡದ ಗುಣಮಟ್ಟ ಹೆಚ್ಚಿಸುವ ಮೂಲಕ ಜಾಗತಿಕವಾಗಿ ಪ್ರಮಾಣೀಕರಿಸುವಂತಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಸುಜುಕಿ ಮೋಟಾರ್ ಕಾರ್ಪೊರೇಷನ್ ನಿರ್ದೇಶಕರು ಹಾಗೂ ಹಿರಿಯ ವ್ಯವಸ್ಥಾಪಕ ಅಧಿಕಾರಿ ಕಿಂಜಿ ಸೈಟೊ ಮಾತನಾಡಿ, ಅನೌಪಚಾರಿಕ ಮತ್ತು ಅಸಂಘಟಿತ ವಲಯಗಳಲ್ಲಿ ಉದ್ಯಮಶೀಲತೆಯನ್ನು ಹೆಚ್ಚಿಸುವ ಮೂಲಕ ಭಾರತವು ತನ್ನ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ. ಭಾರತೀಯರದ್ದು ಹೊಂದಿಕೊಳ್ಳುವ ಮನಸ್ಥಿತಿಯಾಗಿದ್ದು, ಸ್ನೇಹಿತರು ಮತ್ತು ಸಂಬಂಧಿಕರೊಂದಿಗಿರಲು ಬಯಸುತ್ತಾರೆ ಎನ್ನುತ್ತಲೇ ದೇಶದಲ್ಲಿ ಮಾರುತಿ ಸುಜುಕಿ ಕಾರುಗಳು ಸಂಚಲನ ಸೃಷ್ಟಿಸಿದ್ದರ ಕುರಿತು ತಿಳಿಸಿದರು.

ಐಐಎಂ ಕೋಝಿಕೋಡ್ ನಿರ್ದೇಶಕ ಪ್ರೊ.ದೇಬಾಶಿಸ್ ಚಟರ್ಜಿ ಮಾತನಾಡಿ, ಭಾರತೀಯ ಚಿಂತನೆಯನ್ನು ಜಾಗತೀಕರಣಗೊಳಿಸುವುದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಕೋಝಿಕೋಡ್‌ನ ಮುಖ್ಯ ಧ್ಯೇಯವಾಗಿದೆ. ಭಾರತದ ಶಕ್ತಿಯ ಮೌಲ್ಯ ಮತ್ತು ಚೈತನ್ಯವು ಇನ್ನೂ ಪ್ರಕಟವಾಗಬೇಕಿದ್ದು, ಈ ನಿಟ್ಟಿನಲ್ಲಿ ಐಐಎಂ ಕೋಝಿಕೋಡ್ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.





ಐಐಎಂ ಕೋಝಿಕೋಡ್‌ನ 'ಭಾರತೀಯ ಚಿಂತನೆಯನ್ನು ಜಾಗತೀಕರಣಗೊಳಿಸುವಿಕೆ' ನಾಲ್ಕನೇ ಅಂತಾರಾಷ್ಟ್ರೀಯ ಸಮಾವೇಶಕ್ಕೆ ಪ್ರಧಾನ ಮಂತ್ರಿಯವರ ಆರ್ಥಿಕ ಸಲಹಾ ಮಂಡಳಿಯ ಸದಸ್ಯ ಸಂಜೀವ್ ಸನ್ಯಾಲ್ ಚಾಲನೆ ನೀಡಿದರು. ಮತ್ತೊಂದು ಚಿತ್ರದಲ್ಲಿ ಗ್ರಾಮ್ಮಿ ಅವಾರ್ಡ್ ವಿನ್ನರ್ ಪಂಡಿತ್ ವಿಶ್ವ ಮೋಹನ್ ಭಟ್ ಅವರಿಂದ ಮೋಹನ ವೀಣಾ ವಾದನ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಮನಸೂರೆಗೊಂಡ ವೀಣಾ ಮಾಧುರ್ಯ...

ಗ್ರಾಮ್ಮಿ ಅವಾರ್ಡ್ ವಿನ್ನರ್ ಪಂಡಿತ್ ವಿಶ್ವ ಮೋಹನ್ ಭಟ್ ಅವರ ಮೋಹನ ವೀಣಾ ವಾದನ ನೆರೆದಿದ್ದವರ ಮನಸೂರೆಗೊಂಡಿತು. ಜಿಐಟಿ–2023 ಅಂತಾರಾಷ್ಟ್ರೀಯ ಸಮಾವೇಶದ ವೇದಿಕೆ ಕಾರ್ಯಕ್ರಮದ ಬಳಿಕ ವೀಣಾ ವಾದನ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟ ಅವರು, ತಮ್ಮ ಅಮೋಘ ವಾದ್ಯ ಕೌಶಲ್ಯತೆ ಮೂಲಕ ಕೇಳುಗರನ್ನು ಮೂಕ ವಿಸ್ಮಿತರನ್ನಾಗಿಸಿದರು. 'ಮೋಹನ ವೀಣಾ', 'ವಿಶ್ವ ವೀಣಾ', 'ಹಂಸ ವೀಣಾ' ರಾಗಗಳನ್ನು ನುಡಿಸಿದ ಅವರು, ಸುಂದರ ಸಂಜೆಯಲ್ಲಿ ಸಂಗೀತದ ತಂಪೆರೆದರು. ಪಂಡಿತ್ ಸಲಿಲ್ ಭಟ್ ಸಹಕಾರ ಹಾಗೂ ತಬಲ ವಾದನದಲ್ಲಿ ಹಿಮಾಂಶು ಮಹಂತ್ ಅವರ ಕೈಚಳಕ ಅಪಾರ ಮೆಚ್ಚುಗೆಗೆ ಪಾತ್ರವಾಯಿತು. ಇದೇ ವೇಳೆ ಮಾತನಾಡಿದ ಪಂಡಿತ್ ವಿಶ್ವ ಮೋಹನ್ ಭಟ್, ಸಂಗೀತ ದೇವರ ಭಾಷೆಯಾಗಿದ್ದು, ಧ್ಯಾನ ಮತ್ತು ಭಕ್ತಿಯೊಂದಿಗೆ ಬೆಸೆದುಕೊಂಡಿದೆ. ಹೃದಯ ಮತ್ತು ಮನಸ್ಸನ್ನು ಉಲ್ಲಾಸಗೊಳಿಸುವ ಸಂಗೀತಕ್ಕೆ ಸೀಮಿತ ಎನ್ನುವುದಿಲ್ಲ. ಪ್ರೀತಿ, ಸಂತೋಷ, ಭ್ರಾತೃತ್ವ ಎಲ್ಲವನ್ನು ಸಂಗೀತ ಒಳಗೊಂಡಿದೆ ಎಂದು ತಿಳಿಸಿದರು.

ಬಿಯರ್ ಉತ್ಪಾದನೆ ಮೇಲಿನ ಮಿತಿ ಆದೇಶ ಹಿಂಪಡೆದ ಸರ್ಕಾರ; 3ನೇ ಪಾಳಿಯಲ್ಲೂ ಉತ್ಪಾದನೆಗೆ ಅನುಮತಿ

● ಕೆ.ಆರ್.ಕ್ಷೇತ್ರದ ಶಾಸಕ ಶ್ರೀವತ್ಸ ಪ್ರಸ್ತಾಪಕ್ಕೆ ಸರ್ಕಾರದ ಮನ್ನಣೆ ● ಸಾವಿರಾರು ಉದ್ಯೋಗಿಗಳಿಗೆ ಮತ್ತೆ ಆಶ್ರಯ

ಮೈಸೂರು, ಡಿ.14– ಬಿಯರ್ ಉತ್ಪಾದನೆ ಮೇಲೆ ನಿಯಂತ್ರಣ ಹೇರಿದ್ದ ಆದೇಶವನ್ನು ರಾಜ್ಯ ಸರ್ಕಾರ ಹಿಂಪಡೆದಿದ್ದು, 3ನೇ ಪಾಳಿಯಲ್ಲಿ ಬಿಯರ್ ಉತ್ಪಾದನೆಗೆ ಮತ್ತೆ ಅನುಮತಿ ನೀಡಿದೆ. ಈ ಸಂಬಂಧ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ವಿಧಾನಸಭೆಯಲ್ಲಿ ಗಮನ ಸೆಳೆದಿದ್ದರು.

ಮುಖ್ಯಮಂತ್ರಿಗಳ ತವರು ಕ್ಷೇತ್ರ ವ್ಯಾಪ್ತಿಯ ಇಮ್ಮಾವು ಹಾಗೂ ನಂಜನಗೂಡಿನ ತಾಂಡ್ಯ ಕೈಗಾರಿಕಾ ಪ್ರದೇಶ ಸೇರಿದಂತೆ ರಾಜ್ಯದ ಎಲ್ಲಾ ಬಿಯರ್ ಫ್ಯಾಕ್ಟರಿಗಳಲ್ಲಿ 3ನೇ ಪಾಳಿ(ರಾ.10–ಬೆ.6) ಕಾರ್ಯ ನಿರ್ವಹಿಸುವುದನ್ನು ಸರ್ಕಾರ ರದ್ದುಪಡಿಸಿರುವುದರಿಂದ ಅಲ್ಲಿನ ಕಾರ್ಮಿಕರು ಉದ್ಯೋಗ ಕೊರತೆ ಎದುರಿಸುತ್ತಿರುವ ಹಿನ್ನೆಲೆಯಲ್ಲಿ ಈ ಆದೇಶ ಹಿಂಪಡೆಯಲು ಶಾಸಕ ಶ್ರೀವತ್ಸ ವಿಧಾನಸಭೆಯಲ್ಲಿ ಅಬಕಾರಿ ಸಚಿವರ ಮೂಲಕ ಸರ್ಕಾರದ ಗಮನ ಸೆಳೆದಿದ್ದರು.

ಇದಕ್ಕೆ ಸರ್ಕಾರ ಉತ್ತರ ನೀಡಿ, ಬ್ರೇವರಿ ಘಟಕಗಳಲ್ಲಿ 3ನೇ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು ಅಧಿಕಾರಿ ಹಾಗೂ ಸಿಬ್ಬಂದಿ ಕೊರತೆ ಇರುವುದರಿಂದ ಆ ಪಾಳಿಯದಲ್ಲಿ ಉತ್ಪಾದನೆಗೆ ನೀಡಿದ್ದ ಅನುಮತಿಯನ್ನು ಹಿಂಪಡೆಯಬೇಕೆಂದು ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ವರದಿ ನೀಡಿದ್ದ ಕಾರಣ ಹಾಸನದ ವುಡ್‌ಪೆಕ್ಕರ್ ಡಿಸ್ಟಿಲರೀಸ್ ಅಂಡ್ ಬ್ರೇವರೀಸ್, ನಂಜನಗೂಡು ತಾಂಡ್ಯ ಕೈಗಾರಿಕಾ ಪ್ರದೇಶದ ಯುನೈಟೆಡ್ ಬ್ರೇವರೀಸ್ ಲಿಮಿಟೆಡ್, ಇಮ್ಮಾವು ಕೈಗಾರಿಕಾ ಪ್ರದೇಶ್ ಕಾರ್ಲ್ಸ್‌ಬರ್ಗ್ ಇಂಡಿಯಾ, ಬನ್ನೂರು ಹೋಬಳಿ ಮಲಿಯೂರು ಗ್ರಾಮದ ಆನ್‌ಹೆಷ್ಯೂರ್ ಬುಷ್, ಅಡಕನಹಳ್ಳಿಯ ಬಿ9 ಬ್ರೇವರೀಸ್ ಹಾಗೂ ನಾಗಮಂಗಲ ತಾಲೂಕು ತುಮಕೂರು ರಸ್ತೆಯ ಯುನೈಟೆಡ್ ಬ್ರೇವರೀಸ್ ಸೇರಿದಂತೆ ಒಟ್ಟು 6 ಬ್ರೇವರಿ ಘಟಕಗಳಲ್ಲಿ 2023–24ನೇ ಅಬಕಾರಿ ಸಾಲಿಗೆ ಅನ್ವಯವಾಗುವಂತೆ 3ನೇ ಪಾಳಿಯಲ್ಲಿ ಬಿಯರ್ ಉತ್ಪಾದನೆ ಅನುಮತಿಯನ್ನು ಹಿಂಪಡೆಯಲಾಗಿದೆ ಎಂದು ತಿಳಿಸಿತ್ತು.



ನಂತರದಲ್ಲಿ ಡಿಸೆಂಬರ್ ತಿಂಗಳಲ್ಲಿ ಹೊಸ ವರ್ಷ ಮತ್ತು ಕ್ರಿಸ್‌ಮಸ್ ಹಬ್ಬದ ಪ್ರಯುಕ್ತ ಬಿಯರ್‌ಗೆ ಬೇಡಿಕೆ ಹೆಚ್ಚಾಗಿದೆ. ಮುಂಬರುವ ಬೇಸಿಗೆಯಲ್ಲೂ ಬೇಡಿಕೆ ಹೆಚ್ಚಬಹುದು. ಆದರೆ 3ನೇ ಪಾಳಿಯಲ್ಲಿ ಕಾರ್ಯ ನಿರ್ವಹಣೆಯನ್ನು ರದ್ದುಪಡಿಸಿರುವುದರಿಂದ ಪೂರೈಕೆ ಮಾಡಲಾಗದೆ ಬ್ರೇವರಿಗಳಿಗೆ ಆರ್ಥಿಕ ಸಂಕಷ್ಟ ಉಂಟಾಗುತ್ತಿದೆ. ಇದರಿಂದ ಸರ್ಕಾರದ ರಾಜಸ್ವಕ್ಕೂ ನಷ್ಟ ಉಂಟಾಗುತ್ತದೆ. ಹಾಗಾಗಿ 3ನೇ ಪಾಳಿಯಲ್ಲಿ ಉತ್ಪಾದನೆಗೆ ಅನುಮತಿ ನೀಡುವಂತೆ ಎಲ್ಲಾ ಬ್ರೇವರಿ ಫ್ಯಾಕ್ಟರಿಗಳಿಂದ ಮನವಿ ಸಲ್ಲಿಸಲಾಗಿತ್ತು. ಬ್ರೇವರಿಗಳ ಮನವಿ ಪರಿಗಣಿಸಿ ಹಾಗೂ ಸರ್ಕಾರದ ರಾಜಸ್ವ ಹಿತದೃಷ್ಟಿಯಿಂದ 3ನೇ ಪಾಳಿಯಲ್ಲಿ ಬಿಯರ್ ಉತ್ಪಾದನೆಗೆ ಅನುಮತಿ ನೀಡಿ ಆದೇಶಿಸಲಾಗಿದೆ ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ವಿವರಣೆ ನೀಡಿದ್ದಾರೆ.

ಲಾಭ ಕಡಿಮೆ ಕಾರಣ: ಸರ್ಕಾರದ ಕ್ರಮದ ಬಗ್ಗೆ ಪ್ರತಿಕ್ರಿಯಿಸಿರುವ ಶಾಸಕ ಶ್ರೀವತ್ಸ, 3ನೇ ಪಾಳಿಯದಲ್ಲಿ ಬಿಯರ್ ಉತ್ಪಾದನೆಗೆ ಬ್ರೇಕ್ ಹಾಕಿದ್ದರಿಂದ ಮೈಸೂರು ಸೇರಿದಂತೆ 6 ಬಿಯರ್ ಫ್ಯಾಕ್ಟರಿಯ ಸಾವಿರಾರು ಮಂದಿಯ ಉದ್ಯೋಗಕ್ಕೆ ತೊಂದರೆಯಾಗಿದ್ದರಿಂದ ಈ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದೆ. ಆದರೆ 3ನೇ ಪಾಳಿಯಲ್ಲಿ ಉತ್ಪಾದನೆಗಿದ್ದ ಅನುಮತಿ ವಾಪಸ್ ಪಡೆಯಲು ಅಧಿಕಾರಿಗಳು ಹಾಗೂ ಸಿಬ್ಬಂದಿ ಕೊರತೆ ಕಾರಣ ನೆಪಮಾತ್ರ. ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಸಂದರ್ಭದಲ್ಲಿ ಬಿಯರ್‌ಗೆ ಭಾರಿ ಬೇಡಿಕೆಯಿರುತ್ತದೆ. ಆದರೆ ಇದರಿಂದ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುವುದಿಲ್ಲ. ಹಾಗಾಗಿ ಉತ್ಪಾದನೆ ಕಡಿಮೆ ಮಾಡುವ ಮೂಲಕ ಹೆಚ್ಚು ಲಾಭ ಬರುವಂತಹ ವಿಸ್ಕಿ, ಬ್ರ್ಯಾಂಡಿ, ರಮ್ ಇನ್ನಿತರ ಮದ್ಯ ಮಾರಾಟ ಹೆಚ್ಚಿಸುವುದು ಸರ್ಕಾರದ ಯೋಜನೆಯಾಗಿತ್ತು ಎಂದು ತಿಳಿಸಿದ್ದಾರೆ.

ಸಂಸದ ಪ್ರತಾಪ್ ಸಿಂಹ ಮೈಸೂರು ಕಚೇರಿ, ನಿವಾಸಕ್ಕೆ ಪೊಲೀಸ್ ಭದ್ರತೆ



ಮೈಸೂರು, ಡಿ.14(ಆರ್‌ಕೆ)–ನವ ದೆಹಲಿಯಲ್ಲಿ ಬುಧವಾರ ದುಷ್ಕರ್ಮಿಗಳು ಸಂಸತ್ ಭವನಕ್ಕೆ ನುಸುಳಿ ಆತಂಕ ಸೃಷ್ಟಿಸಿದ್ದು, ಅವರಿಗೆ ಸಂಸತ್ ಭವನ ಪ್ರವೇಶಕ್ಕೆ ಪಾಸ್ ಕಲ್ಪಿಸಿದ ಹಿನ್ನೆಲೆಯಲ್ಲಿ ಸಂಸದ ಪ್ರತಾಪ್ ಸಿಂಹ ಅವರ ಮೈಸೂರು ಕಚೇರಿ ಹಾಗೂ ನಿವಾಸಕ್ಕೆ ಬಿಗಿ ಭದ್ರತೆ ಕಲ್ಪಿಸಲಾಗಿದೆ.

ಘಟನೆ ಬೆಳಕಿಗೆ ಬರುತ್ತಿದ್ದಂತೆಯೇ ಕಾಂಗ್ರೆಸ್ ಕಾರ್ಯಕರ್ತರು ಮೈಸೂರಿನ ಹುಣಸೂರು ರಸ್ತೆಯ ಜಲದರ್ಶಿನಿ ಅತಿಥಿ ಗೃಹದ ಆವರಣದಲ್ಲಿರುವ ಸಂಸದರ ಕಚೇರಿಗೆ ಬುಧವಾರ ಸಂಜೆ ಮುತ್ತಿಗೆ ಹಾಕಲೆತ್ನಿಸಿದರು. ಪೊಲೀಸರು ತಡೆದಾಗ ಗೇಟಿನಲ್ಲೇ ಪ್ರತಿಭಟನೆ ನಡೆಸಿದ್ದರು.

ಸಂಸತ್ ಭವನ ಪ್ರವೇಶಿಸಲು ಮೈಸೂರಿನ ಮನೋರಂಜನ್ ಮತ್ತು ಉತ್ತರ ಪ್ರದೇಶದ ಸಾಗರ್ ಶರ್ಮಾ ಎಂಬುವರಿಗೆ ಪ್ರತಾಪ್ ಸಿಂಹ ಪಾಸ್ ಕಲ್ಪಿಸಿದ್ದರು ಎಂಬ ಕಾರಣಕ್ಕೆ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ದೇವರಾಜ ಠಾಣೆ ಪೊಲೀಸರು ಜಲದರ್ಶಿನಿಯ ಅವರ ಕಚೇರಿಗೆ ಸಿಬ್ಬಂದಿ ನಿಯೋಜಿಸಿರುವುದಲ್ಲದೆ, 1 ಸಿಎಆರ್ ತುಕಡಿ ದಿನದ 24 ಗಂಟೆಯೂ ಸ್ಥಳದಲ್ಲಿ ಮೊಕ್ಕಾಂ ಹೂಡಿದೆ.

ಅದೇ ರೀತಿ ಮೈಸೂರಿನ ವಿಜಯನಗರ 3ನೇ ಹಂತದ ರಿಂಗ್ ರಸ್ತೆ ಸಮೀಪವಿರುವ ಪ್ರತಾಪ್ ಸಿಂಹ ನಿವಾಸದ ಬಳಿಯೂ ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ಸುರೇಶ್ ಕುಮಾರ್ ನೇತೃತ್ವದಲ್ಲಿ ಬಿಗಿ ಭದ್ರತೆ ಒದಗಿಸಲಾಗಿದೆ. ಅಲ್ಲದೇ ಸಂಸತ್ ಭವನಕ್ಕೆ ನುಸುಳಿ ಲೋಕಸಭೆ ಕಲಾಪಕ್ಕೆ ಅಡ್ಡಿಪಡಿಸುವುದರೊಂದಿಗೆ ಕಲರ್ ಗ್ಯಾಸ್ ಸಿಡಿಸಿ ಬಂಧಿತನಾಗಿರುವ ವಿಜಯನಗರ 2ನೇ ಹಂತದ ಸ್ನೇಕ್ ಶ್ಯಾಂ ರಸ್ತೆಯ ಮನೋರಂಜನ್ ಮನೆಗೂ ಪೊಲೀಸರನ್ನು ಸಿಎಆರ್ ತುಕಡಿಯೊಂದಿಗೆ 3 ಪಾಳಿಯಲ್ಲಿ ಭದ್ರತೆ ಕಲ್ಪಿಸಿ, ಕಟ್ಟೆಚ್ಚರ ವಹಿಸಲಾಗಿದೆ. ಆಯಾ ಸಬ್ ಡಿವಿಷನ್ ಎಸಿಪಿಗಳು ಸಹ ಭೇಟಿ ನೀಡಿ ಮೇಲ್ವಿಚಾರಣೆ ನಡೆಸುತ್ತಿದ್ದಾರೆ.

ಕೃಷ್ಣ ಜನ್ಮಭೂಮಿ ಪ್ರಕರಣ: ಶಾಹಿ ಈದ್ಗಾ ಸಂಕೀರ್ಣದ ಸಮೀಕ್ಷೆಗೆ ಅಲಹಾಬಾದ್ ಹೈಕೋರ್ಟ್ ಅನುಮತಿ

ಅಲಹಾಬಾದ್: ಮಹತ್ವದ ಬೆಳವಣಿಗೆಯಲ್ಲಿ ಕೃಷ್ಣ ಜನ್ಮಭೂಮಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅಲಹಾಬಾದ್ ಹೈಕೋರ್ಟ್ ಶಾಹಿ ಈದ್ಗಾ ಸಂಕೀರ್ಣದ ಸಮೀಕ್ಷೆಗೆ ಅನುಮತಿ ನೀಡಿದೆ.

ಜ್ಞಾನವ್ಯಾಪಿ ಪ್ರಕರಣದಂತೆಯೇ ಹಿಂದೂ–ಮುಸ್ಲಿಂ ಸಮುದಾಯಗಳ ತಿಕ್ಕಾಟಕ್ಕೆ ಕಾರಣವಾಗಿರುವ ಮತ್ತೊಂದು ಪುಣ್ಯಕ್ಷೇತ್ರ ಕೃಷ್ಣ ಜನ್ಮಭೂಮಿ ಮಥುರಾದಲ್ಲಿರುವ ಶಾಹಿ ಈದ್ಗಾ ಸಂಕೀರ್ಣದ ಸಮೀಕ್ಷೆಗೆ ಅಲಹಾಬಾದ್ ಹೈಕೋರ್ಟ್ ಬುಧವಾರ ಅನುಮತಿ ನೀಡಿದೆ.

ಹಿಂದೂಪರ ಸಂಘಟನೆಗಳು ಸಲ್ಲಿಸಿದ್ದ ಮನವಿಯನ್ನು ಸ್ವೀಕರಿಸಿರುವ ಅಲಹಾಬಾದ್ ಹೈಕೋರ್ಟ್ ವಿವಾದಿತ ಶಾಹಿ ಈದ್ಗಾ ಸಂಕೀರ್ಣದ ವೈಜ್ಞಾನಿಕ ಸಮೀಕ್ಷೆ ನಡೆಸಲು ಅನುಮತಿ ನೀಡಿದೆ.

ಶಾಹಿ ಈದ್ಗಾ ಮಸೀದಿಯ ವಾದ ತಿರಸ್ಕರಿಸಿದ ಕೋರ್ಟ್: ಇನ್ನು ಈ ಕುರಿತು ಮಾತನಾಡಿರುವ ಕೃಷ್ಣ ಜನ್ಮಭೂಮಿ ಪ್ರಕರಣ ಹಿಂದೂ ಸಂಘಟನೆಗಳ ಪರ ವಕೀಲ ವಿಷ್ಣು ಶಂಕರ್ ಜೈನ್ ಅವರು, 'ವಕೀಲ ಕಮಿಷನರ್‌ನಿಂದ ಶಾಹಿ ಈದ್ಗಾ ಮಸೀದಿ ಸಮೀಕ್ಷೆಗೆ ನಾವು ಒತ್ತಾಯಿಸಿದ್ದ ನಮ್ಮ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ಅನುಮತಿಸಿದೆ. ಸಮೀಕ್ಷೆ ವಿಧಾನಗಳನ್ನು ಡಿಸೆಂಬರ್ 18 ರಂದು ನಿರ್ಧರಿಸಲಾಗುವುದು. ಶಾಹಿ ಈದ್ಗಾ ಮಸೀದಿಯ ವಾದವನ್ನು ನ್ಯಾಯಾಲಯ ತಿರಸ್ಕರಿಸಿದೆ. ನಮ್ಮ ಬೇಡಿಕೆಯು ಶಾಹಿ ಈದ್ಗಾ ಮಸೀದಿ ಸರ್ವೆಯಾಗಿತ್ತು. ಶಾಹಿ ಈದ್ಗಾ ಸಂಕೀರ್ಣದಲ್ಲಿ ಹಿಂದೂ ದೇವಾಲಯದ ಸಾಕಷ್ಟು ಚಿಹ್ನೆಗಳು ಇವೆ. ಮತ್ತು ನಿಜವಾದ ಸ್ಥಾನವನ್ನು ತಿಳಿಯಲು, ವಕೀಲ ಕಮಿಷನರ್ ಅಗತ್ಯವಿದೆ. ಇದು ನ್ಯಾಯಾಲಯದ ಮಹತ್ವದ ತೀರ್ಪು ಎಂದು ಹೇಳಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿರುವ ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ದೇಗುಲದ ಪ್ರಧಾನ ಅರ್ಚಕ ಆಚಾರ್ಯ ಸತ್ಯೇಂದ್ರ ದಾಸ್ ಅವರು, "ತೀರ್ಪು ಬರುವುದು ಒಳ್ಳೆಯದು. ಸಮೀಕ್ಷೆ ಮುಖ್ಯವಾಗಿದೆ... ಸಮೀಕ್ಷೆಯು ಸತ್ಯಗಳನ್ನು ಸ್ಪಷ್ಟವಾಗಿ ತೋರಿಸುತ್ತದೆ" ಎಂದು ಹೇಳಿದರು.

ವಕೀಲರ ಸಂರಕ್ಷಣಾ ಕಾಯ್ದೆ ಜಾರಿಗಾಗಿ ನಾಲ್ಕನೇ ದಿನವೂ ಮುಂದುವರೆದ ಪ್ರತಿಭಟನೆ



ಮೈಸೂರು,ಡಿ.14(ಎಂಟಿವೈ)– ರಾಜ್ಯದಲ್ಲಿ ವಕೀಲರ ಸಂರಕ್ಷಣಾ ಕಾಯ್ದೆಯನ್ನು ಜಾರಿಗೊಳಿಸುವಂತೆ ಆಗ್ರಹಿಸಿ ವಕೀಲರು ನಡೆಸುತ್ತಿರುವ ಪ್ರತಿಭಟನೆ ನಾಲ್ಕನೇ ದಿನವೂ ಮುಂದುವರೆದಿದ್ದು, ಗುರುವಾರ ಹಲವು ಮಂದಿ ವಕೀಲರು ಕಲಾಪದಿಂದ ದೂರವುಳಿದು ಧರಣಿಯಲ್ಲಿ ಪಾಲ್ಗೊಂಡರು.

ಮೈಸೂರಿನ ನ್ಯಾಯಾಲಯದ ಮುಂಭಾಗದ ಗುರುವಾರವೂ ಧರಣಿ ಮುಂದುವರೆಸಿದ ವಕೀಲರು, ರಾಜ್ಯದಲ್ಲಿ ವಕೀಲರ ಮೇಲೆ ನಿರಂತರವಾಗಿ ದಾಳಿ ಪ್ರಕರಣ ನಡೆಯುತ್ತಿದೆ. ವಕೀಲರು ತಮ್ಮ ವೃತ್ತಿಯನ್ನು ನಿರ್ಭೀತಿಯಿಂದ ನಡೆಸಲು ಅಸಾಧ್ಯವಾಗಿದೆ. ಅನೇಕ ಕಾರಣದಿಂದ ವಕೀಲರು ದಾಳಿಗೆ ಒಳಗಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ವಕೀಲರ ರಕ್ಷಣೆಗಾಗಿ ಕಾಯ್ದೆ ಜಾರೊಗೊಳಿಸುವಂತೆ ಹಲವು ವರ್ಷದಿಂದ ವಕೀಲರ ಸಂಘ ಮನವಿ ಮಾಡುತ್ತಲೇ ಇದೆ. ಈ ಹಿನ್ನೆಲೆಯಲ್ಲಿ ಈ ಅದಿವೇಷನದಲ್ಲೇ ವಕೀಲರ ಸಂರಕ್ಷಣಾ ಕಾಯ್ದೆಗೆ ಸಮ್ಮತಿ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಉಪಾಧ್ಯಕ್ಷ ಪುಟ್ಟ ಸಿದ್ದೇಗೌಡ, ಕಾರ್ಯದರ್ಶಿ ಎಸ್.ಉಮೇಶ್, ಖಜಾಂಚಿ ಹೆಚ್.ಎಸ್.ಮಹದೇವ ಸ್ವಾಮಿ, ಜಂಟಿ ಕಾರ್ಯದರ್ಶಿ ಜಿ.ಎಂ. ನಾಗೇಶ್, ಮಹಿಳಾ ಕಾರ್ಯದರ್ಶಿ ಬಿ.ಎಸ್.ಭಾಗ್ಯಮ್ಮ ಸೇರಿದಂತೆ ಹಲವು ವಕಲೀರು ಪಾಲ್ಗೊಂಡಿದ್ದರು.

ಸಂಸತ್ ಭವನದಲ್ಲಿನ ಭದ್ರತಾ ವೈಫಲ್ಯ; ಮನೋರಂಜನ್ ಮನೆಯಲ್ಲಿ ಐಬಿ ಅಧಿಕಾರಿಗಳಿಂದ ಮಾಹಿತಿ ಸಂಗ್ರಹ

ರಾಜ್ಯ ಗುಪ್ತವಾರ್ತೆ, ಸ್ಥಳೀಯ ಪೊಲೀಸರು ಸಾಥ್



ಮೈಸೂರು, ಡಿ.14(ಆರ್‌ಕೆ)–ಸಂಸತ್ ಭವನ ಪ್ರವೇಶಿಸಿ, ಲೋಕಸಭೆ ಕಲಾಪದ ವೇಳೆ ನುಗ್ಗಿ ಅವಾಂತರ ಸೃಷ್ಟಿಸಿರುವ ಆರೋಪಿಗಳ ಪೈಕಿ ಒಬ್ಬನಾದ ಮೈಸೂರಿನ ಮನೋರಂಜನ್ ವಿಜಯನಗರ 2ನೇ ಹಂತದ ಮನೆಯಲ್ಲಿ ಐಬಿ (ಇಂಟೆಲಿಜೆನ್ಸ್ ಬ್ಯೂರೋ) ಅಧಿಕಾರಿಗಳು ಮಾಹಿತಿ ಸಂಗ್ರಹಿಸಿದರು.

ಘಟನೆ ಸಂಭವಿಸಿದಾಗ ಬಂಧಿತರಾದವರ ಪೈಕಿ ಓರ್ವ ಮೈಸೂರಿನವನು ಎಂದು ತಿಳಿಯುತ್ತಿದ್ದಂತೆಯೇ ಬುಧವಾರ ಮಧ್ಯಾಹ್ನದಿಂದಲೇ ವಿಜಯನಗರ ಉಪ ವಿಭಾಗದ ಎಸಿಪಿ ಎಸ್.ಜಿ.ಗಜೇಂದ್ರ ಪ್ರಸಾದ್ ನೇತೃತ್ವದ ವಿಜಯನಗರ ಠಾಣೆ ಪೊಲೀಸರು, ರಾಜ್ಯ ಗುಪ್ತವಾರ್ತಾ ವಿಭಾಗ (ಸ್ಟೇಟ್ ಇಂಟೆಲಿಜೆನ್ಸ್)ದ ಪೊಲೀಸರ ನೆರವಿನೊಂದಿಗೆ ಮನೋರಂಜನ್ ಮನೆಯಲ್ಲಿ ತಪಾಸಣೆ ಆರಂಭಿಸಿದ್ದರು.

ಇಂದು ಬೆಳಗ್ಗೆಯಿಂದಲೂ ತನಿಖೆ ನಡೆಸುತ್ತಿರುವ ಅವರು, ತಂದೆ ದೇವರಾಜೇಗೌಡ, ತಾಯಿ ಶೈಲಜಾ, ಪುತ್ರಿ, ಸಂಬಂಧಿಕರನ್ನು ವಿಚಾರಣೆಗೊಳಪಡಿಸಿ, ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಮನೋರಂಜನ್ ಬೆಳೆದ ವಾತಾವರಣ, ಓದಿದ ಶಾಲೆ, ಕಾಲೇಜು ಅವಧಿಯಲ್ಲಿ ಆತನ ಮನಸ್ಥಿತಿ, ಕಾಲೇಜು ಶಿಕ್ಷಣದ ನಂತರ ಬಿಇ ಪದವಿಗೆ ಸೇರುವ ಮಧ್ಯೆ ಜೀವನದಲ್ಲಿ ಆತ ಏನಾಗಬೇಕೆಂದು ಬಯಸಿದ್ದ ಹೀಗೆ ಪ್ರಶ್ನೆಗಳ ಮೇಲೆ ಪ್ರಶ್ನೆ ಕೇಳಿ ಮಾಹಿತಿ ಕಲೆ ಹಾಕಿದ್ದಾರೆ.

ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನಲ್ಲಿ ಎಷ್ಟು ವರ್ಷ ಓದಿದ, ಪದವಿ ಪೂರ್ಣಗೊಳಿಸಿದನೆ, ನಂತರ ಮನೋರಂಜನ್ ಕೆಲಸಕ್ಕೆ ಹೋಗದಿರಲು ಕಾರಣವೇನು, ಇಂಜಿನಿಯರಿಂಗ್ ಮುಕ್ತಾಯಗೊಳಿಸಿದ ಬಗ್ಗೆ ಹಾಗೂ ಪಿಯುಸಿ, ಎಸ್‌ಎಸ್‌ಎಲ್‌ಸಿಯಲ್ಲಿ ಗಳಿಸಿದ ಅಂಕಗಳು, ಅಂಕಪಟ್ಟಿಗಳ ಬಗ್ಗೆಯೂ ಮಾಹಿತಿ ಸಂಗ್ರಹಿಸಲಾಗಿದ್ದು, ವಿದ್ಯಾಭ್ಯಾಸ ಮುಗಿದು 15 ವರ್ಷದಿಂದ ಆತ ಏನು ಮಾಡುತ್ತಿದ್ದಾನೆ ಎಂಬ ಬಗ್ಗೆ ತಂದೆ–ತಾಯಿಯಿಂದ ವಿವರ ಪಡೆದಿದ್ದಾರೆ.

ಅವನು ಬ್ಯಾಂಕ್ ಅಕೌಂಟ್ ಹೊಂದಿರುವ ಶಾಖೆಗಳು, ಹಣದ ವಹಿವಾಟು, ಗೂಗಲ್ ಪೇ, ಫೋನ್ ಪೇ, ಆರ್‌ಟಿಜಿಎಸ್, ನೆಫ್ಟ್‌ನಂತಹ ಆನ್‌ಲೈನ್ ಪಾವತಿಗಳ ಬಗ್ಗೆ ಮಾಹಿತಿಯನ್ನು ಐಬಿ ಅಧಿಕಾರಿಗಳು ಕಲೆ ಹಾಕುತ್ತಿದ್ದಾರೆ.

ಮೈಸೂರಿನಲ್ಲಿದ್ದಾಗ ಮನೋರಂಜನ್ ಕುಟುಂಬದ ಸದಸ್ಯರು, ಸಂಬಂಧಿಕರೊಂದಿಗೆ ಎಷ್ಟು ಸಮಯ ಬೆರೆಯುತ್ತಿದ್ದ, ಹೊರಗಡೆ ಯಾರ ಜೊತೆ ಸೇರುತ್ತಿದ್ದ, ಕ್ರಾಂತಿಕಾರಿ ಮನೋಸ್ಥಿತಿಯ ಸಂಘಟನೆಗಳೊಂದಿಗೆ ಸಂಪರ್ಕವಿತ್ತೇ? ಬೇರೆ ರಾಜ್ಯಗಳಿಗೆ ಹೋಗುತ್ತೇನೆಂದು ಹೇಳಿ ಹೋದಾಗ ನಿಮ್ಮೊಂದಿಗೆ ಮೊಬೈಲ್ ಫೋನ್ ಸಂಪರ್ಕಕ್ಕೆ ಬಂದಿದ್ದನೇ? ಹೀಗೆ ನಾನಾ ಪ್ರಶ್ನೆಗಳಿಗೆ ಅಧಿಕಾರಿಗಳು ಉತ್ತರ ಪಡೆದಿದ್ದಾರೆ.

ಅನ್ಯಾಯ, ಅಕ್ರಮ, ಅಸಮಾನತೆ, ಅಸ್ಪೃಶ್ಯತೆ, ಸಾಮಾಜಿಕ, ಆರ್ಥಿಕ, ಆಡಳಿತಾತ್ಮಕ ವಿಷಯಗಳ ಕುರಿತಂತೆ ಅಸಮಾಧಾನ ವ್ಯಕ್ತಪಡಿಸುತ್ತಿದ್ದುದನ್ನು ಗಮನಿಸಿದ್ದೀರಾ? ಕಡೆಯದಾಗಿ ಆತ ಮೈಸೂರಿಂದ ಯಾವ ದಿನ ಹೋಗಿದ್ದ. ಆ ವೇಳೆ ಮನೆಯಿಂದ ಏನನ್ನಾದರೂ ಕೊಂಡೊಯ್ದಿದ್ದನೇ? ಸ್ವಗ್ರಾಮಕ್ಕೆ ಎಷ್ಟು ಅವಧಿಗೊಮ್ಮೆ ಹೋಗುತ್ತಿದ್ದ, ಆ ವೇಳೆ ಕೃಷಿ ಬಗ್ಗೆ ಆಸಕ್ತಿ ತೋರುತ್ತಿದ್ದನೇ? ಎಂಬುದರ ಬಗ್ಗೆಯೂ ಅಧಿಕಾರಿಗಳು ಹೇಳಿಕೆ ದಾಖಲಿಸಿಕೊಂಡಿದ್ದಾರೆ. ಸ್ಥಳೀಯ ಪೊಲೀಸರೂ ಪ್ರಾಥಮಿಕ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಆ ವೇಳೆ ದೇವರಾಜೇಗೌಡರ ಮನೆಗೆ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಭದ್ರತೆ ಒದಗಿಸಲಾಗಿದೆ.

ಅಪ್ರಾಪ್ತ ನಾದಿನಿ ಮೇಲೆ ಅತ್ಯಾಚಾರ ; ಕಾಮುಕನಿಗೆ 25 ವರ್ಷಗಳ ಕಠಿಣ ಸಜೆ

ಮೈಸೂರು ಪೋಕ್ಸೋ ವಿಶೇಷ ನ್ಯಾಯಾಲಯದಿಂದ ತೀರ್ಪು



ಮೈಸೂರು,ಡಿ.14(ಪಿಎಂ)– ಅಪ್ರಾಪ್ತ ವಯಸ್ಸಿನ ನಾದಿನಿ ಮೇಲೆ ಅತ್ಯಾಚಾರ ಎಸಗಿ ಗರ್ಭಿಣಿಯಾಗಲು ಕಾರಣನಾದ ವ್ಯಕ್ತಿಯೊಬ್ಬನಿಗೆ 25 ವರ್ಷಗಳ ಕಠಿಣ ಸಜೆ ಮತ್ತು ಲಕ್ಷ ರೂ. ದಂಡ ವಿಧಿಸಿ ಮೈಸೂರಿನ ಪೋಕ್ಸೋ ವಿಶೇಷ ನ್ಯಾಯಾಲಯ ತೀರ್ಪು ನೀಡಿದೆ.

ತಾಲೂಕಿನ ಗ್ರಾಮವೊಂದರ ನಿವಾಸಿಯಾದ ಅಡುಗೆ ಕೆಲಸ ಮಾಡುತ್ತಿದ್ದ ವ್ಯಕ್ತಿ ಶಿಕ್ಷೆಗೆ ಗುರಿಯಾದವ. ಈತ ಹೆಚ್ಚಾಗಿ ತನ್ನ ಮಾವನ ಮನೆಯಲ್ಲಿ ಇರುತ್ತಿದ್ದ. ಅಲ್ಲದೆ, ತನ್ನ ನಾದಿನಿ ಅಪ್ರಾಪ್ತ ಬಾಲಕಿ ಜೊತೆಯಲ್ಲಿ ತುಂಬಾ ಸಲುಗೆಯಿಂದ ಇರುತ್ತಿದ್ದ. ಮಾರ್ಚ್ 2022ರಲ್ಲಿ ಒಂದು ದಿನ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ತನ್ನ ನಾದಿನಿಯನ್ನು ಹೆದರಿಸಿ ಬಲವಂತವಾಗಿ ದೈಹಿಕ ಸಂಪರ್ಕ ಮಾಡಿದ್ದ. ಯಾರಿಗಾದರೂ ಹೇಳಿದರೆ ಕೊಲೆ ಮಾಡುವುದಾಗಿಯೂ ಬೆದರಿಕೆ ಹಾಕಿದ್ದ.

ನಂತರವೂ ಅನೇಕ ಬಾರಿ ಬಲವಂತವಾಗಿ ದೈಹಿಕ ಸಂಪರ್ಕ ಮಾಡಿದ್ದರ ಪರಿಣಾಮ ಆಕೆ ಗರ್ಭಿಣಿಯಾದಳು. ಈ ಬಗ್ಗೆ ಬಾಲಕಿ ತಾಯಿ ವರುಣ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ವೃತ್ತ ನಿರೀಕ್ಷಕರಾದ ಸ್ವರ್ಣ ಅವರು ಆರೋಪಿಯ ವಿರುದ್ಧ ಪೋಕ್ಸೋ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಪೋಕ್ಸೋ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೈಮ ಖಮ್ರೋಜ್ ಅವರು, ಆರೋಪಿ ವಿರುದ್ಧದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ 2023ರ ಡಿ.12ರಂದು ಆರೋಪಿಗೆ ಪೋಕ್ಸೋ ಕಾಯ್ದೆ ಅಡಿಯಲ್ಲಿನ ಅಪರಾಧಗಳಿಗಾಗಿ ಒಟ್ಟು 25 ವರ್ಷಗಳ ಕಠಿಣ ಶಿಕ್ಷೆ ಮತ್ತು ಒಂದು ಲಕ್ಷ ರೂ. ದಂಡ ವಿಧಿಸಿದರು. ಅಲ್ಲದೆ, ಬಾಲಕಿಗೆ ಕೊಲೆ ಬೆದರಿಕೆ ಒಡ್ಡಿದ ಅಪರಾಧಕ್ಕಾಗಿ 6 ತಿಂಗಳ ಸಾದಾ ಸಜೆ ಹಾಗೂ ಸಾವಿರ ರೂ. ದಂಡವನ್ನು ಪಾವತಿಸುವಂತೆ ತೀರ್ಪು ನೀಡಿದರು.

ದಂಡದ ಮೊತ್ತದಲ್ಲಿ ಬಾಲಕಿಗೆ 75 ಸಾವಿರ ರೂ. ಪರಿಹಾರವನ್ನು ಪಾವತಿಸುವಂತೆ ಆದೇಶಿಸಿ, ನೊಂದ ಅಪ್ರಾಪ್ತ ಬಾಲಕಿಯು 5 ಲಕ್ಷ ರೂ. ಪರಿಹಾರಕ್ಕೆ ಅರ್ಹಳು ಎಂದು ತೀರ್ಪು ಪ್ರಕಟಿಸಿದರು. ಈ ಪ್ರಕರಣದಲ್ಲಿ ಸರ್ಕಾರದ ಪರವಾಗಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಕೆ.ಬಿ.ಜಯಂತಿ ವಾದ ಮಂಡಿಸಿದರು.

ವಿಶೇಷಚೇತನ ಬಾಲಕಿಗೆ ಲೈಂಗಿಕ ದೌರ್ಜನ್ಯ ; ವ್ಯಕ್ತಿಗೆ 20 ವರ್ಷ ಶಿಕ್ಷೆ

ಮೈಸೂರು,ಡಿ.14(ಪಿಎಂ)– ವಿಶೇಷಚೇತನ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದ ವ್ಯಕ್ತಿಗೆ ಮೈಸೂರಿನ ಪೋಕ್ಸೋ ವಿಶೇಷ ನ್ಯಾಯಾಲಯ, 20 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ, ತೀರ್ಪು ನೀಡಿದೆ.

ತಾಲೂಕಿನ ವ್ಯಕ್ತಿಯೊಬ್ಬ ಹೀಗೆ ಶಿಕ್ಷೆಗೆ ಗುರಿಯಾಗಿದ್ದು, ಈತ ನೀರು ಕೇಳುವ ನೆಪದಲ್ಲಿ ಬಾಲಕಿಯ ಮನೆಗೆ ನುಗ್ಗಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದ. ಬಾಲಕಿಯ ಪೋಷಕರ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿದ್ದ ದಕ್ಷಿಣ ಠಾಣೆ ಪೊಲೀಸರು, ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಶ್ರೈಮ ಖಮ್ರೋಜ್ ಅವರು, ಕಾರಾಗೃಹ ಶಿಕ್ಷೆ ಜೊತೆಗೆ ಲಕ್ಷದ 5 ಸಾವಿರ ರೂ. ಪರಿಹಾರ ನೀಡಬೇಕೆಂದು ಆದೇಶಿಸಿ ಡಿ.6ರಂದು ತೀರ್ಪು ನೀಡಿದರು. ಸಂತ್ರಸ್ತ ಬಾಲಕಿ ಕಾನೂನು ಸೇವಾ ಪ್ರಾಧಿಕಾರದಿಂದ 5 ಲಕ್ಷ ರೂ. ಪರಿಹಾರ ಪಡೆಯಲು ಅರ್ಹಳು ಎಂದು ನ್ಯಾಯಾಧೀಶರು ಪ್ರಕಟಿಸಿದ್ದಾರೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕಿ ಕೆ.ಬಿ.ಜಯಂತಿ ವಾದ ಮಂಡಿಸಿದರು.

ಭಾರತಕ್ಕೆ ಭರ್ಜರಿ ಜಯ: ಸರಣಿ ಡ್ರಾನಲ್ಲಿ ಅಂತ್ಯ



ಜೋಹಾನ್ಸ್‌ಬರ್ಗ್, ಡಿ.14– ನಾಯಕ ಸೂರ್ಯ ಕುಮಾರ್ ಯಾದವ್ ಅವರ ಭರ್ಜರಿ ಶತಕ ಹಾಗೂ ಕುಲದೀಪ್ ಯಾದವ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಭಾರತ, ದಕ್ಷಿಣ ಆಫ್ರಿಕಾ ವಿರುದ್ಧ 106 ರನ್‌ಗಳ ಭರ್ಜರಿ ಜಯ ಗಳಿಸಿದೆ.

ಈ ಗೆಲುವಿನೊಂದಿಗೆ 3 ಪಂದ್ಯಗಳ ಟಿ20 ಸರಣಿ 1–1 ಅಂತರದಿಂದ ಡ್ರಾನಲ್ಲಿ ಅಂತ್ಯಗೊಂಡಿದೆ. ಇದಕ್ಕೂ ಮುನ್ನ ನಡೆದ ಮೊದಲ ಪಂದ್ಯ ಮಳೆ ಕಾರಣ ರದ್ದಾಗಿತ್ತು. ಇನ್ನು 2ನೇ ಪಂದ್ಯದಲ್ಲಿ ಸೌತ್ ಆಫ್ರಿಕಾ ಜಯ ಸಾಧಿಸಿತ್ತು. ಇದೀಗ 3ನೇ ಪಂದ್ಯದಲ್ಲಿ ಭಾರತ ಭರ್ಜರಿ ಜಯ ಸಾಧಿಸುವ ಮೂಲಕ ಸರಣಿ ಸಮಬಲಗೊಳಿಸುವಲ್ಲಿ ಯಶಸ್ವಿಯಾಗಿದೆ.

ಇಲ್ಲಿನ ನ್ಯೂ ವಾಂಡರರ್ಸ್ ಕ್ರೀಡಾಂಗಣದಲ್ಲಿ ನಡೆದ ಮೂರನೇ ಟಿ20 ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 201 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ಆರಂಭಿಕರಾದ ಶುಭ್‌ಮನ್ ಗಿಲ್ ಹಾಗೂ ಯಶಸ್ವಿ ಜೈಸ್ವಾಲ್ 29 ರನ್ ಗಳಿಸಿ ಉತ್ತಮ ಆರಂಭ ಒದಗಿಸುವ ಸೂಚನೆ ನೀಡಿದರಾದರೂ 8 ರನ್ ಗಳಿಸಿದ್ದ ಗಿಲ್ ವಿಕೆಟ್ ಒಪ್ಪಿಸಿದರು. ನಂತರ ಬಂದ ತಿಲಕ್ ವರ್ಮಾ ಮೊದಲ ಎಸೆತದಲ್ಲೇ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಈ ವೇಳೆ ಜೊತೆಯಾದ ಜೈಸ್ವಾಲ್ ಹಾಗೂ ಸೂರ್ಯಕುಮಾರ್ 3ನೇ ವಿಕೆಟ್‌ಗೆ 112 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ದ.ಆಫ್ರಿಕಾ ಬೌಲರ್‌ಗಳ ಮೇಲೆ ಸವಾರಿ ಮಾಡಿದ ಸೂರ್ಯ ಕುಮಾರ್ ಯಾದವ್ 56 ಎಸೆತಗಳಲ್ಲಿ 8 ಸಿಕ್ಸರ್, 7 ಬೌಂಡರಿ ಒಳಗೊಂಡ 100 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಭರ್ಜರಿ ಆಟವಾಡಿ ಜೈಸ್ವಾಲ್ 41 ಎಸೆತಗಳಲ್ಲಿ 3 ಸಿಕ್ಸರ್, 6 ಬೌಂಡರಿ ಒಳಗೊಂಡ 60 ರನ್ ಗಳಿಸಿ ಔಟಾದರು. ಅಂತಿಮವಾಗಿ ರಿಂಕು ಸಿಂಗ್ 14 ರನ್ ಗಳಿಸಿದರು. ದಕ್ಷಿಣ ಆಫ್ರಿಕಾ ಪರ ವಿಲಿಯಮ್ಸ್, ಕೇಶವ್ ಮಹಾರಾಜ್ ತಲಾ 2, ನಾಂದ್ರೆ ಬರ್ಗರ್, ಶಮ್ಸಿ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಭಾರತ ನೀಡಿದ 202 ರನ್‌ಗಳ ಬೃಹತ್ ಗೆಲುವಿನ ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ 13.5 ಓವರ್‌ಗಳಲ್ಲಿ 95 ರನ್ ಗಳಿಗೆ ಆಲೌಟಾಗುವ ಮೂಲಕ ಸೋಲು ಅನುಭವಿಸಿತು. ತಂಡದ ಪರ ಏಡೆನ್ ಮಾರ್ಕ್ರಾಮ್ 25, ಡೇವಿಡ್ ಮಿಲ್ಲರ್ 35, ಡೊನೊವನ್ ಫೆರೇರಾ 12ರನ್ ಗಳಿಸಿದ್ದು ಬಿಟ್ಟರೇ ಉಳಿದವರಿಂದ ನಿರೀಕ್ಷಿತ ಪ್ರದರ್ಶನ ಮೂಡಿಬರಲಿಲ್ಲ. ಭಾರತದ ಪರ ಕುಲದೀಪ್ ಯಾದವ್ 5, ರವೀಂದ್ರ ಜಡೇಜಾ 2, ಮುಖೇಶ್ ಕುಮಾರ್, ಅರ್ಶದೀಪ್ ಸಿಂಗ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಸೂರ್ಯ ಕುಮಾರ್ ಯಾದವ್ ಪಂದ್ಯ ಹಾಗೂ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ರಾಜ್ಯದಲ್ಲಿ ಬರ ಭೀಕರ: ಜನ ಗುಳೆ ಹೋಗದಂತೆ ಅಗತ್ಯ ಕ್ರಮ

● ಕಂದಾಯ ಸಚಿವ ಕೃಷ್ಣಬೈರೇಗೌಡ ವಿವರಣೆ ● ನರೇಗಾ ಯೋಜನೆಯಡಿ ಮಾನವ ದಿನಗಳು 150ಕ್ಕೆ ಹೆಚ್ಚಿಸಲು ಕೇಂದ್ರಕ್ಕೆ ಮನವಿ

ಬೆಂಗಳೂರು, ಡಿ.14(ಕೆಎಂಶಿ)– ಬರ ಹಿನ್ನೆಲೆಯಲ್ಲಿ ಜನರು ಗುಳೆ ಹೋಗುವುದನ್ನು ತಡೆಯಲು ರಾಜ್ಯ ಸರ್ಕಾರ ಎಲ್ಲಾ ಅಗತ್ಯ ಕ್ರಮ ತೆಗೆದುಕೊಂಡಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ವಿಧಾನಪರಿಷತ್ತಿನಲ್ಲಿಂದು ತಿಳಿಸಿದ್ದಾರೆ.

ಕೋಟ ಶ್ರೀನಿವಾಸ ಪೂಜಾರಿ ಅವರ ಪ್ರಸ್ತಾವಕ್ಕೆ ನಿಯಮಾವಳಿಯಡಿ ಉತ್ತರಿಸಿದ ಸಚಿವರು, ನರೇಗಾ ಯೋಜನೆಯ ಅಡಿಯಲ್ಲಿ ಮಾನವ ದಿನಗಳನ್ನು 150 ದಿನಕ್ಕೆ ಹೆಚ್ಚಿಸಲು ಕೇಂದ್ರಕ್ಕೆ ಮನವಿ ಸಲ್ಲಿಸಲಾಗಿದೆ. ಆದರೆ, ಕೇಂದ್ರದಿಂದ ಇನ್ನೂ ನಮ್ಮ ಮನವಿಗೆ ಸಕಾರಾತ್ಮಕ ಪ್ರತಿಕ್ರಿಯೆ ಲಭ್ಯವಾಗಿಲ್ಲ ಎಂದರು.

ಬರ ನಿರ್ವಹಣೆಗೆ ಅಗತ್ಯವಾದ ಎಲ್ಲಾ ಕ್ರಮಗಳನ್ನೂ ರಾಜ್ಯ ಸರ್ಕಾರ ಈಗಾಗಲೇ ತೆಗೆದುಕೊಂಡಿದೆ. ಬರ ಕಾರಣಕ್ಕೆ ಜನ ಬೇರೆ ಕಡೆಗಳಿಗೆ ವಲಸೆ ಹೋಗುವ ಪ್ರಸಂಗಗಳೂ ಕಂಡು ಬಂದಿದೆ. ಇದನ್ನು ತಡೆಯುವ ನಿಟ್ಟಿನಲ್ಲಿ ನರೇಗಾ ಮಾನವ ದಿನಗಳನ್ನು 100 ರಿಂದ 150ಕ್ಕೆ ಏರಿಸುವುದೊಂದೇ ನಮ್ಮ ಮುಂದಿರುವ ಕ್ರಮ.



ಬರ ಘೋಷಿಸಿದ ತಕ್ಷಣ ನರೇಗಾ ಯೋಜನೆಯ ಅಡಿಯಲ್ಲಿ ಹೆಚ್ಚಿನ 50 ಮಾನವ ದಿನಗಳನ್ನು ನೀಡಬೇಕು ಎಂದು ಕಾನೂನಿನಲ್ಲಿದೆ. ಆದರೆ, ಈ ಬಗ್ಗೆ ನಾವು ಸೆಪ್ಟೆಂಬರ್ 23 ರಂದೇ ಮನವಿ ಮಾಡಿದ್ದರೂ ಕೇಂದ್ರ ಸರ್ಕಾರ ಮಾತ್ರ ಈ ಬಗ್ಗೆ ಈವರೆಗೆ ಉತ್ತರ ನೀಡಿಲ್ಲ ಎಂದು ಅವರು ವಿಷಾದಿಸಿದರು.

ಅಲ್ಲದೆ, ಕೇಂದ್ರದಿಂದ ಈಗಾಗಲೇ ಲಭ್ಯವಾಗಿರುವ 13 ಕೋಟಿ ರೂ. ಮಾನವ ದಿನಗಳ ಅನುದಾನದ ಗುರಿಯನ್ನು ನಾವು ಈಗಾಗಲೇ ತಲುಪಿದ್ದು, ಈ ಅವಧಿಯಲ್ಲಿ ನರೇಗಾಕ್ಕೆ ನಾವು ವಿಶೇಷ ಆದ್ಯತೆ ನೀಡಿದ್ದೇವೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ನಮ್ಮ ಮನವಿಯನ್ನು ಪುರಸ್ಕರಿಸುವ ವಿಶ್ವಾಸವೂ ಇದೆ ಎಂದರು.

ಬರ ನಿರ್ವಹಣೆಗಾಗಿ ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ 18,171 ಕೋಟಿ ರೂ. ಪರಿಹಾರವನ್ನು ಎನ್‌ಡಿಆರ್‌ಎಫ್ ಅನ್ವಯ ಕೋರಿ ಮನವಿ ಮಾಡಿದ್ದೇವೆ. ಸೆಪ್ಟೆಂಬರ್ 23ರಂದು ಕೇಂದ್ರ ಕೃಷಿ, ಗೃಹ ಸಚಿವರ ಭೇಟಿಗೆ ಪ್ರಯತ್ನ ಕೂಡ ನಡೆಸಲಾಗಿದೆ. ಕೇಂದ್ರ ಬರ ಅಧ್ಯಯನ ತಂಡವು ಅಕ್ಟೋಬರ್ 4 ರಿಂದ ಅಕ್ಟೋಬರ್ 9ರ ವರೆಗೆ ರಾಜ್ಯದ 13 ಜಿಲ್ಲೆಗಳಿಗೆ ಭೇಟಿ ನೀಡಿ ಬರ ಪರಿಸ್ಥಿತಿಯನ್ನು ಅವಲೋಕಿಸಿದೆ. ಈ ತಂಡದವರಿಗೆ ನಾವು ರಾಜ್ಯದಲ್ಲಿನ ಬರ ಪರಿಸ್ಥಿತಿಯ ತೀವ್ರತೆಯನ್ನು ಮನವರಿಕೆ ಮಾಡಿದ್ದೇವೆ ಎಂದು ಹೇಳಿದರು.

ಕರ್ನಾಟಕ ಸೇರಿದಂತೆ ಒಟ್ಟು 12 ರಾಜ್ಯಗಳಲ್ಲಿ ಮಳೆ ಕೊರತೆಯಾಗಿದೆ. ಎಲ್ಲ ರಾಜ್ಯಗಳು ಬರ ಪರಿಹಾರಕ್ಕೆ ಕೇಂದ್ರಕ್ಕೆ ಮನವಿ ಮಾಡುವ ವಿಷಯದಲ್ಲಿ ಕರ್ನಾಟಕ ರಾಜ್ಯವು ಮುಂಚೂಣಿಯಲ್ಲಿದೆ. ನಾವು ಮನವಿ ಮಾಡಿದ ತಿಂಗಳ ನಂತರ ಆಂಧ್ರಪ್ರದೇಶ ಮತ್ತು ಎರಡು ತಿಂಗಳ ನಂತರ ಮಹಾರಾಷ್ಟ್ರದಿಂದ ಕೇಂದ್ರಕ್ಕೆ ಮನವಿ ಸಲ್ಲಿಕೆಯಾಗಿವೆ. ಇದು ಬರ ನಿರ್ವಹಣೆ ವಿಷಯದಲ್ಲಿ ರಾಜ್ಯವು ಸಾಕಷ್ಟು ಮುಂಜಾಗ್ರತೆ ವಹಿಸಿದೆ ಎಂಬುದನ್ನು ತಿಳಿಸುತ್ತದೆ ಎಂದು ಸಚಿವರು ಸದಸ್ಯರಿಗೆ ಮನವರಿಕೆ ಮಾಡಿದರು.

ಟ್ಯಾಂಕರ್ ಮೂಲಕ ನೀರು ಪೂರೈಕೆ: ರಾಜ್ಯದ 26 ಗ್ರಾಮಗಳ ಪೈಕಿ 22 ಗ್ರಾಮಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲಾಗುತ್ತಿದೆ. 89 ಗ್ರಾಮಗಳಲ್ಲಿ ಬಾಡಿಗೆ ಆಧಾರದ ಮೇಲೆ ಖಾಸಗಿ ಬೋರ್‌ವೆಲ್ ಮೂಲಕ ನೀರು ಪೂರೈಸಲಾಗುತ್ತಿದೆ. ಪ್ರತಿ 15 ದಿನಕ್ಕೊಮ್ಮೆ ಅಧಿಕಾರಿಗಳಿಗೆ ಬರ ನಿರ್ವಹಣೆ ಕುರಿತು ಸಭೆ ನಡೆಸಲಾಗುತ್ತಿದೆ.



ಸಮಸ್ಯಾತ್ಮಕ ಗ್ರಾಮಗಳನ್ನು ಪಟ್ಟಿ ಮಾಡಿ ಅಂತಹ ಕಡೆಗಳಲ್ಲಿ ಮುಂದೆ ಎದುರಾಗಲಿರುವ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸುವಲ್ಲಿ ಈಗಿನಿಂದಲೇ ಟೆಂಡರ್ ಪ್ರಕ್ರಿಯೆ ನಡೆಸಿ ನೀರು ಸರಬರಾಜು ಸಿದ್ಧತೆಗೆ ಅಗತ್ಯ ಕ್ರಮ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಸಚಿವರು ತಿಳಿಸಿದರು.

ಜನವರಿ, ಫೆಬ್ರವರಿ ಮತ್ತು ಮಾರ್ಚ್‌ನಲ್ಲಿ ಜಾನುವಾರು ಗಳಿಗೆ ಮೇವಿನ ಪೂರೈಕೆಗೆ ಅನುಕೂಲವಾಗುವಂತೆ 7,63,000 ಮೇವಿನ ಬೀಜದ ಕಿಟ್‌ಗಳನ್ನು ವಿತರಿಸಲಾಗಿದೆ. ರಾಜ್ಯದ ಮೇವನ್ನು ಬೇರೆಡೆ ಸಾಗಿಸದಂತೆ ಈಗಾಗಲೇ ನವೆಂಬರ್ 22ರಂದೇ ನಿರ್ಬಂಧ ಆದೇಶ ಹೊರಡಿಸಲಾಗಿದೆ ಎಂದರು.

ಎಸ್.ಟಿ.ಸೋಮಶೇಖರ್, ಶಿವರಾಂ ಹೆಬ್ಬಾರ್, ಎಚ್.ವಿಶ್ವನಾಥ್ ಬಿಜೆಪಿ ಸಭೆಗೆ ಚಕ್ಕರ್; ಕಾಂಗ್ರೆಸ್ ಔತಣಕ್ಕೆ ಹಾಜರ್!

'ಕಮಲ' ಬಿಟ್ಟು 'ಕೈ' ಹಿಡಿಯಲು ಸಜ್ಜಾಗಿರುವ ಈ ಮೂವರು ಶಾಸಕರು

ಲೋಕಸಭಾ ಚುನಾವಣೆಯಲ್ಲಿ ಮೈಸೂರು–ಕೊಡಗು, ಉತ್ತರ ಕನ್ನಡದಿಂದ ಕಾಂಗ್ರೆಸ್ ಸಂಭವನೀಯ ಅಭ್ಯರ್ಥಿಗಳಿವರು


ಬೆಂಗಳೂರು, ಡಿ.14(ಕೆಎಂಶಿ)– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೈಸೂರು–ಕೊಡಗು, ಉತ್ತರ ಕನ್ನಡ ಕ್ಷೇತ್ರಗಳಿಂದ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಕಣಕ್ಕಿಳಿಯಲು ಆಕಾಂಕ್ಷಿಗಳಾಗಿರುವ ಬಿಜೆಪಿಯ ಶಾಸಕರಾದ ಎಸ್.ಟಿ.ಸೋಮಶೇಖರ್, ಶಿವರಾಂ ಹೆಬ್ಬಾರ್, ಎಚ್.ವಿಶ್ವಾನಾಥ್ ಬಿಜೆಪಿ ಸಭೆಗೆ ಗೈರಾಗಿದ್ದರು. ಆದರೆ ಕಾಂಗ್ರೆಸ್ ಔತಣಕೂಟದಲ್ಲಿ ಭಾಗಿಯಾಗಿದ್ದಾರೆ. ಎಚ್.ವಿಶ್ವನಾಥ್ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಪಾಲ್ಗೊಂಡಿದ್ದಾರೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲೇ ಇವರು ಬಿಜೆಪಿಯಿಂದ ಒಂದು ಹೆಜ್ಜೆ ಹೊರಗಿಟ್ಟಿದ್ದಾರೆ. ಅಧಿಕಾರ ಕಳೆದುಕೊಂಡ ತಕ್ಷಣವೇ ಬಿಜೆಪಿಯ ನಾಯಕರನ್ನು ನಿಂದಿಸಿ ಆ ಪಕ್ಷದ ಕಾರ್ಯಕ್ರಮಗಳಿಗೂ ಹೋಗದೆ, ಕಾಂಗ್ರೆಸ್ ಮುಖಂಡರ ಜೊತೆ ಬೆರೆಯುತ್ತಿರುವ ಸೋಮಶೇಖರ್ ಹಾಗೂ ಹೆಬ್ಬಾರ್ ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸಲು ಆಸಕ್ತಿ ತೋರಿದ್ದಾರೆ. ಇದಕ್ಕೆ ಕಾಂಗ್ರೆಸ್ ನಾಯಕರಿಂದಲೂ ಹಸಿರು ನಿಶಾನೆ ದೊರೆತಂತಿದೆ.

ನಿನ್ನೆ ಬೆಳಗಾವಿಯಲ್ಲಿ ಡಿ.ಕೆ.ಶಿವಕುಮಾರ್ ಕರೆದಿದ್ದ ಔತಣಕೂಟ ಹಾಗೂ ಸಾಧು ಕೋಕಿಲ ಅವರ ಮನರಂಜನಾ ಕಾರ್ಯಕ್ರಮದಲ್ಲಿ ಇತರ ಶಾಸಕರ ಜೊತೆ ಸ್ಟೆಪ್ ಹಾಕಿದ್ದಾರೆ. ಮುಖ್ಯಮಂತ್ರಿ ಅವರಿಗೆ ತಮ್ಮ ತವರು ಜಿಲ್ಲೆಯ ಲೋಕಸಭಾ ಕ್ಷೇತ್ರವನ್ನು ಪಕ್ಷದ ತೆಕ್ಕೆಗೆ ತೆಗೆದುಕೊಳ್ಳಬೇಕೆಂದು ಅಭ್ಯರ್ಥಿಗಳ ಆಯ್ಕೆಗೆ ಕಸರತ್ತು ನಡೆಸಿದ್ದಾರೆ. ಯಡಿಯೂರಪ್ಪ ಮತ್ತು ಬೊಮ್ಮಾಯಿ ಸಂಪುಟದಲ್ಲಿ ಸಚಿವರಾಗಿದ್ದ ಸೋಮಶೇಖರ್ ಅವರಿಗೆ ಮೈಸೂರು ಜಿಲ್ಲಾ ಉಸ್ತುವಾರಿ ವಹಿಸಲಾಗಿತ್ತು. ಆ ಸಂದರ್ಭದಲ್ಲಿ ಅವರು ಜಿಲ್ಲಾ ಜನರಿಗೆ ಚಿರಪರಿಚಿತರಾಗಿದ್ದರು, ಇದಕ್ಕೂ ಮಿಗಿಲಾಗಿ ಅವರು ಒಕ್ಕಲಿಗ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಸಹಕಾರಿ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಸೋಮಶೇಖರ್ ಅವರಿಗೆ ಜೆಡಿಎಸ್ ಮುಖಂಡರ ಬೆಂಬಲವೂ ದೊರೆಯಬಹುದು. ಅಲ್ಪಸಂಖ್ಯಾತರು, ಪರಿಶಿಷ್ಟ ಹಾಗೂ ಹಿಂದುಳಿದ ಸಮುದಾಯ ಸೇರಿದಂತೆ ಒಂದಿಷ್ಟು ಒಕ್ಕಲಿಗ ಮತಗಳನ್ನೂ ಪಡೆದರೆ ಈ ಕ್ಷೇತ್ರವನ್ನು ಕಾಂಗ್ರೆಸ್ ಗೆಲ್ಲಬಹುದು ಎಂಬುದು ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರ ಲೆಕ್ಕಾಚಾರವಾಗಿದೆ ಈ ಕಾರಣದಿಂದಲೇ ಸೋಮಶೇಖರ್ ಅವರನ್ನು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಸಲು ಮುಂದಾಗಿದ್ದಾರೆ.

ಇದರ ಮಧ್ಯೆ ವಿಶ್ವನಾಥ್ ಕೂಡ ಇದೇ ಕ್ಷೇತ್ರಕ್ಕೆ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಿಂದ ಸಂಸತ್ ಪ್ರವೇಶಿಸಲು ಆಸಕ್ತಿ ತೋರಿರುವ ಹೆಬ್ಬಾರ್ ಕಾಂಗ್ರೆಸ್ ಟಿಕೆಟ್ ಬಯಸಿದ್ದಾರೆ. ಕಾಂಗ್ರೆಸ್‌ನ ಹಿರಿಯ ಸದಸ್ಯ ಆರ್.ವಿ. ದೇಶಪಾಂಡೆ ಪುತ್ರನಿಗೆ ಈ ಬಾರಿ ಬಿಜೆಪಿ ಟಿಕೆಟ್ ದೊರೆಯಲಿದೆ ಎಂಬ ಮಾತು ಕೇಳಿಬಂದಿದೆ.

ಈ ಹಿನ್ನೆಲೆಯಲ್ಲಿ ದೇಶಪಾಂಡೆ ಮಗನ ವಿರುದ್ಧ ಕಣಕ್ಕಿಳಿಯಲು ಹೆಬ್ಬಾರ್, ಕಾಂಗ್ರೆಸ್ ಬಾಗಿಲು ತಟ್ಟಿದ್ದಾರೆ, ಇದಕ್ಕೆ ಕಾಂಗ್ರೆಸ್ ನಾಯಕರ ಬೆಂಬಲವೂ ಇದೆ ಎನ್ನಲಾಗಿದೆ. ಸೋಮಶೇಖರ್ ಮತ್ತು ಹೆಬ್ಬಾರ್ ಬೆಳಗಾವಿ ಅಧಿವೇಶನ ಸಂದರ್ಭದಲ್ಲಿ ನಡೆದ ಬಿಜೆಪಿ ಶಾಸಕಾಂಗ ಸಭೆಯಿಂದ ದೂರ ಉಳಿದಿದ್ದರು. ಆದರೆ ನಿನ್ನೆ ನಡೆದ ಕಾಂಗ್ರೆಸ್‌ನ ಔತಣಕೂಟದಲ್ಲಿ ಬಿಜೆಪಿ ಶಾಸಕರು ಭಾಗವಹಿಸುವ ಮೂಲಕ ರಾಜಕೀಯ ಅಂಗಳದಲ್ಲಿ ನಡೆಯುತ್ತಿರುವ ಚರ್ಚೆಗೆ ಪುಷ್ಠಿ ಕೊಟ್ಟಿದ್ದಾರೆ.

ಬಿಜೆಪಿ ಸದಸ್ಯರು ಪಕ್ಷದ ಔತಣಕೂಟದಲ್ಲಿ ಭಾಗವಹಿಸಿದ್ದಕ್ಕೆ ಸಂಬಂಧಿಸಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಬಿಜೆಪಿ ಶಾಸಕರಾದ ಸೋಮಶೇಖರ್ ಮತ್ತು ಶಿವರಾಂ ಹೆಬ್ಬಾರ್ ಅವರು ನಿನ್ನೆ ರಾತ್ರಿ ಪಕ್ಷದ ಸಭೆಗೆ ಬಂದಿಲ್ಲ. ನಾವು ಆಹ್ವಾನ ನೀಡಿದ್ದ ಭೋಜನಕೂಟಕ್ಕೆ ಬಂದಿದ್ದರು ಎಂದು ತಿಳಿಸಿದ್ದಾರೆ. ವಿಶ್ವನಾಥ್ ಅವರು ಸೇರಿದಂತೆ ಅನ್ಯ ಪಕ್ಷದ 10 ಶಾಸಕರು ಉಪಾಹಾರ ಕೂಟಕ್ಕೆ ಬಂದಿದ್ದರು. ನಮ್ಮ ಶಾಸಕಾಂಗ ಸಭೆಗೆ ಏಕೆ ಬರುತ್ತಾರೆ. ಅವರು ನಮ್ಮ ಪಕ್ಷದ ಶಾಸಕರಲ್ಲ. ಹೀಗಾಗಿ ಅವರು ನಮ್ಮ ಶಾಸಕಾಂಗ ಸಭೆಗೆ ಬಂದಿಲ್ಲ ಎಂದರು.

ಪ್ರತಿ ಪ್ರಜೆಗೂ ಸಂವಿಧಾನವೇ ಪವಿತ್ರ ಗ್ರಂಥ

• ನ್ಯಾಯಾಧೀಶ ಶಾಮ್ ಪ್ರಸಾದ್ ಅಭಿಮತ • ಅಂಬೇಡ್ಕರ್ ಓದು ಕಾರ್ಯಕ್ರಮಕ್ಕೆ ಚಾಲನೆ



ಮಡಿಕೇರಿ, ಡಿ.14–ಡಾ.ಬಿ.ಆರ್. ಅಂಬೇಡ್ಕರ್ ಬರೆದಿರುವ ಸಂವಿಧಾನ ಭಾರತದ ಪ್ರತಿಯೊಬ್ಬ ನಾಗರಿಕರಿಗೆ 'ಪವಿತ್ರ ಗ್ರಂಥ'ವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶ ಎಚ್.ಸಿ.ಶಾಮ್ ಪ್ರಸಾದ್ ಹೇಳಿದ್ದಾರೆ.

ನಗರದ ಸರ್ಕಾರಿ ಪದವಿಪೂರ್ವ ಕಾಲೇಜಿನ ಸಭಾಂಗಣದಲ್ಲಿ ಗುರುವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ವಕೀಲರ ಸಂಘದ ವತಿಯಿಂದ ನಡೆದ 'ಡಾ.ಬಿ.ಆರ್. ಅಂಬೇಡ್ಕರ್ ಅವರ ಓದು' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಭಾರತ ಸಂವಿಧಾನ ವಿಶ್ವದಲ್ಲೇ ಶ್ರೇಷ್ಠ ಸಂವಿಧಾನವಾಗಿದೆ. ಸಂವಿಧಾನದ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳು ಸಾರ್ವಕಾಲಿಕ ದಾಖಲೆಯಾಗಿವೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಓದು ವ್ಯಾಪ್ತಿ ಸಮುದ್ರದಷ್ಟು ವಿಶಾಲ ಹಾಗೂ ಆಳವಾದದ್ದು, ಅಂಬೇಡ್ಕರ್ ಜ್ಞಾನ ಅದ್ಭುತ. ಅವರನ್ನು ಸಾಮಾಜಿಕ ಮತ್ತು ಆರ್ಥಿಕ ತಜ್ಞರಾಗಿ, ಪ್ರಬುದ್ಧ ರಾಜಕಾರಣಿಯಾಗಿ ಹಲವು ವಿಚಾರಗಳ ಬಗ್ಗೆ ಅಧ್ಯಯನ ಮಾಡಬಹುದು. ಅಂಬೇಡ್ಕರ್ ಬೆಳೆದು ಬಂದ ದಾರಿ, ಭಾರತೀಯ ಸಮಾಜಕ್ಕೆ ನೀಡಿದ ಕೊಡುಗೆ ಅಪಾರ ಎಂದು ವರ್ಣಿಸಿದರು.

ಅಂಬೇಡ್ಕರ್ ರಚಿಸಿದ ಸಂವಿಧಾನದ ಕಾನೂನು ವ್ಯಾಪ್ತಿಯಲ್ಲಿ ನಾವೆಲ್ಲರೂ ಒಳಗೊಂಡಿದ್ದೇವೆ. ಎಲ್ಲರಿಗೂ ಸಂವಿಧಾನ ಬದ್ಧವಾದ ಹಕ್ಕುಗಳನ್ನು ನೀಡಲು ಶ್ರಮಿಸಿದ್ದಾರೆ. ಆ ನಿಟ್ಟಿನಲ್ಲಿ ಮಹಾನಾಯಕ ಅಂಬೇಡ್ಕರ್ ಅವರನ್ನು ಸದಾ ಸ್ಮರಿಸಬೇಕಿದೆ ಅಂಬೇಡ್ಕರ್ ಒಬ್ಬ ವ್ಯಕ್ತಿಯಲ್ಲ, ಶಕ್ತಿ. ಅಸಮಾನತೆಯನ್ನು ಹೋಗಲಾಡಿಸಲು ಮೂಡಿ ಬಂದ ಅಲೆ ಎಂದರೆ ತಪ್ಪಾಗಲಾರದು. ಅವರ ಚಿಂತನೆ ಮತ್ತು ಸಿದ್ಧಾಂತಗಳನ್ನು ಪಾಲಿಸಿದರೆ ಮಾತ್ರ ಅವರನ್ನು ಗೌರವಿಸಿದಂತಾಗುತ್ತದೆ. ಇಡೀ ವಿಶ್ವದಲ್ಲಿ ಸಾಮ್ರಾಟ್ ಅಶೋಕನ ರಾಜ್ಯಭಾರ ಮುಳುಗದ ಸಾಮ್ರಾಜ್ಯವಾಗಿತ್ತು. ಆದರೆ, ಎಲ್ಲವೂ ನಶಿಸಿಹೋಗಿದ್ದು, 'ಅಶೋಕ ಚಕ್ರ'ವನ್ನು ಮಾತ್ರ ಇಂದು ಕಾಣುತ್ತೇವೆ. ಆ ನಿಟ್ಟಿನಲ್ಲಿ ಪ್ರತಿಯೊಂದರಲ್ಲೂ ಅವನತಿ ಹೊಂದುತ್ತಾ ಹೋಗುತ್ತೇವೆ. ಆದ್ದರಿಂದ ಪ್ರತಿಯೊಬ್ಬರೂ ಒಳ್ಳೆಯದು ಮಾಡಿ ಹೋಗಬೇಕು. ಮನುಷ್ಯ ಮನುಷ್ಯರನ್ನು ಗೌರವಿಸಬೇಕು ಎಂದು ತಿಳಿಸಿದರು.

ಮದೆನಾಡು ಮದೆಮಹೇಶ್ವರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸಿದ್ದರಾಜು ಬೆಳ್ಳಯ್ಯ ಮಾತನಾಡಿ, ಅಂಬೇಡ್ಕರ್ ಬದುಕಿನ 65 ವರ್ಷಗಳ ಅವಧಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಮಾಜಿಕ ನ್ಯಾಯ ಹಾಗೂ ಸಮಾನತೆ ಕಲ್ಪಿಸುವ ಮೂಲಕ ಅದ್ಭುತ ಸಾಧನೆ ಮಾಡಿದ್ದಾರೆ. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬುದು ಅವರ ಧ್ಯೇಯೋದ್ದೇಶವಾಗಿದೆ ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆಬಿ.ಪ್ರಸಾದ್, ಸಂವಿಧಾನದ ಪೀಠಿಕೆ ಓದಿದರು. ಪ್ರಾಂಶುಪಾಲ ವಿಜಯ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಪ್ರಾದೇಶಿಕ ನಿರ್ದೇಶಕಿ ಸ್ಮಿತಾ ಸುಬ್ಬಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಚಿನ್ನಸ್ವಾಮಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಆಡಳಿತ ಸಹಾಯಕ ಜಯಪ್ಪ ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಹಾಜರಿದ್ದರು.

ಹಕ್ಕುಗಳ ಪ್ರತಿಫಲದಿಂದ ಸಮಾನ ಬದುಕು ಸಾಧ್ಯ

ಡಾ.ಬಿ.ಆರ್.ಅಂಬೇಡ್ಕರ್ ಅವರು ಕಾನೂನು ಸಚಿವರಾಗಿ ಹಿಂದೂ ಕೋಡ್ ಬಿಲ್ ಜಾರಿಗೊಳಿಸುವ ಮೂಲಕ ಮಹಿಳೆಯರಿಗೆ ಸಮಾನ ಅವಕಾಶ ಮತ್ತು ಹಕ್ಕುಗಳನ್ನು ನೀಡಿದ್ದಾರೆ. ಇದರ ಪ್ರತಿಫಲವಾಗಿ ಪುರುಷ ಮತ್ತು ಮಹಿಳೆಯರು ಸಮಾನವಾಗಿ ಬದುಕಲು ಸಾಧ್ಯವಾಗಿದೆ ಎಂದು ವಕೀಲರ ಸಂಘದ ಅಧ್ಯಕ್ಷ ಎಂ.ಎ.ನಿರಂಜನ್ ತಿಳಿಸಿದರು. ಭಾರತ ಒಕ್ಕೂಟ ವ್ಯವಸ್ಥೆಯಲ್ಲಿ ಹೇಗೆ ಕಾನೂನುಗಳನ್ನು ತರಬೇಕು ಎಂಬ ಬಗ್ಗೆ ಸಂವಿಧಾನದಲ್ಲಿ ಅಂಬೇಡ್ಕರ್ ವಿವರಿಸಿದ್ದಾರೆ. ಮೂಲಭೂತ ಹಕ್ಕು ಮತ್ತು ಕರ್ತವ್ಯಗಳು ಹಾಗೆಯೇ ರಾಜ್ಯ ನಿರ್ದೇಶಕ ತತ್ವಗಳು. ಹೀಗೆ ಹಲವು ಅಂಶಗಳನ್ನು ವಿವರಿಸುವ ಮೂಲಕ ಭಾರತಕ್ಕೆ ಮಾದರಿ ಸಂವಿಧಾನವನ್ನು ಡಾ.ಬಿ.ಆರ್.ಅಂಬೇಡ್ಕರ್ ನೀಡಿದ್ದಾರೆ ಎಂದರು.

ಗ್ರಾಪಂ ಸ್ವಾಧೀನಕ್ಕೆ ಕೆರೆಗಳನ್ನು ಒಪ್ಪಿಸಿದ ಅಧಿಕಾರಿಗಳು



ಸುಂಟಿಕೊಪ್ಪ, ಡಿ.14–ಕುಶಾಲನಗರ ತಹಶೀಲ್ದಾರ್ ಆದೇಶದಂತೆ ಸುಂಟಿಕೊಪ್ಪ ಹೋಬಳಿಯ 7ನೇ ಹೊಸಕೋಟೆ ಮತ್ತು ಅತ್ತೂರು ನಲ್ಲೂರು ಗ್ರಾಮದಲ್ಲಿ ಕೆರೆಗಳ ಒತ್ತುವರಿ ತೆರವುಗೊಳಿಸಿದ ಕಂದಾಯ ಅಧಿಕಾರಿಗಳು, ಸ್ಥಳೀಯ ಗ್ರಾಮ ಪಂಚಾಯಿತಿ ಸ್ವಾಧೀನಕ್ಕೆ ಒಪ್ಪಿಸಿದರು.

7ನೇ ಹೊಸಕೋಟೆ ಗ್ರಾಮದ ಸರ್ವೆ ನಂ.116ರ 0.64 ಎಕರೆ, ಸರ್ವೆ ನಂ.153ರ 0.48 ಎಕರೆ ಹಾಗೂ ಅತ್ತೂರು ನಲ್ಲೂರು ಗ್ರಾಮದ ಸರ್ವೆ ನಂ.239/2ರ 0.17 ಎಕರೆ ಮತ್ತು 218ರ 0.62 ಎಕರೆ ವಿಸ್ತೀರ್ಣದ ಸರ್ಕಾರಿ ಕೆರೆಗಳನ್ನು ತಾಲೂಕು ಭೂ ಮಾಪಕರು ಅಳತೆ ನಡೆಸಿ ನಂತರ ಒತ್ತುವರಿ ತೆರವುಗೊಳಿಸಿ, ಅಭಿವೃದ್ಧಿಪಡಿಸುವ ಸಲುವಾಗಿ 7ನೇ ಹೊಸಕೋಟೆ ಗ್ರಾಮ ಪಂಚಾಯಿತಿ ಪಿಡಿಓ ಬಿ.ಪಿ.ನಂದೀಶ್ ಹಾಗೂ ಕಂಬಿಬಾಣೆ ಗ್ರಾಮ ಪಂಚಾಯಿತಿ ಪಿಡಿಓ ಕೆ.ಎಲ್.ಮಧುಮತಿ ಅವರಿಗೆ ಸುಂಟಿಕೊಪ್ಪ ಕಂದಾಯ ಅಧಿಕಾರಿಗಳು ದಾಖಲೆಗಳನ್ನು ಹಸ್ತಾಂತರಿಸಿದರು.

ಈ ಸಂದರ್ಭ ಕಂಬಿಬಾಣೆ ಗ್ರಾಪಂ ಸದಸ್ಯರಾದ ಕೃಷ್ಣ, ಅಶ್ವಿನಿ, ಗ್ರಾಮಾಡಳಿತಾಧಿಕಾರಿ ನಸೀಮಾ, ಕಂದಾಯ ಇಲಾಖೆಯ ಸಿಬ್ಬಂದಿ ಶಿವಪ್ಪ, ಸರ್ವೆಯರ್ ಸಿದ್ದರಾಜು, ಸಿಬ್ಬಂದಿ ತೇಜು, ರವಿ, ಜಗದೀಶ್ ಉಪಸ್ಥಿತರಿದ್ದರು.

ಗಡಿ ಉತ್ಸವ ಪೂರ್ವಭಾವಿ ಸಭೆ

ನಾಪೋಕ್ಲು, ಡಿ.14–ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಕರ್ನಾಟಕ ಗಡಿ ಪ್ರಾಧಿಕಾರ ಮತ್ತು ಕರಿಕೆ ಗ್ರಾಮ ಪಂಚಾಯಿತಿ ಸಂಯುಕ್ತಾಶ್ರಯದಲ್ಲಿ ಗಡಿ ಉತ್ಸವ ನಡೆಸುವ ಬಗ್ಗೆ ಕರಿಕೆ ಗ್ರಾಪಂ ಸಭಾಂಗಣದಲ್ಲಿ ಅಧ್ಯಕ್ಷ ಬಾಲಚಂದ್ರ ನಾಯರ್ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್ ಮಾತನಾಡಿ, ಗಡಿ ಭಾಗವಾದ ಕರಿಕೆಯಲ್ಲಿ ಕನ್ನಡ ಧ್ವಜಾರೋಹಣ, ನಾಡು–ನುಡಿಯ ಜಾನಪದ ಕಲಾತಂಡಗಳ ಮೆರವಣಿಗೆಯೊಂದಿಗೆ ಗಡಿ ಭಾಗದ ಸಮಸ್ಯೆಗಳು, ಅಹವಾಲುಗಳ ಕುರಿತು ವಿಚಾರಗೋಷ್ಠಿ, ಉಪನ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ಗಡಿ ಉತ್ಸವ ನಡೆಸಲಾಗುವುದು ಎಂದು ತಿಳಿಸಿದರು.

ಗಡಿ ಉತ್ಸವಕ್ಕೆ ಶಾಸಕರು, ಸಂಬಂಧಪಟ್ಟ ಅಧಿಕಾರಿಗಳನ್ನು ಬರಮಾಡಿಕೊಂಡು ಅವರ ಸಮ್ಮುಖದಲ್ಲಿ ವಿಚಾರ ಗೋಷ್ಠಿ ನಡೆಸಿ, ಗಡಿ ಭಾಗದ ಸಮಸ್ಯೆಗಳ ಪರಿಹಾರಕ್ಕೆ ನಿರ್ಣಯ ಮಂಡಿಸಲಾಗುವುದು ಎಂದು ಭರವಸೆ ನೀಡಿದರು. ಮುಖಂಡ ಬೇಕಲ್ ರಮಾನಾಥ ಮಾತನಾಡಿ, ಕರಿಕೆ ಗ್ರಾಮ ಕೊಡಗು ಹಾಗೂ ಕೇರಳ ಗಡಿಭಾಗವಾಗಿದೆ. ಇಲ್ಲಿನ ಶೈಕ್ಷಣಿಕ, ಸಾರಿಗೆ, ರಸ್ತೆಗಳ ಅವ್ಯವಸ್ಥೆಗಳ ಬಗ್ಗೆ ತಮ್ಮ ಅಳಲು ತೋಡಿಕೊಂಡರು.

ಮಡಿಕೇರಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕಡ್ಲೇರ ತುಳಸಿ ಮೋಹನ್ ಮಾತನಾಡಿ, ಗಡಿ ಉತ್ಸವ ನಡೆಸಲು ಕರಿಕೆ ಉತ್ತಮ ಸ್ಥಳ ಆಗಿದೆ. ಈ ಭಾಗದ ಸಮಸ್ಯೆಗಳನ್ನು ನೇರವಾಗಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಮನಮುಟ್ಟಿಸಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಗಡಿ ಉತ್ಸವ ಒಳ್ಳೆಯ ಅವಕಾಶವಾಗಿದೆ. ಕನ್ನಡ ಸಾಹಿತ್ಯ ಪರಿಷತ್, ಜಾನಪದ ಸಿರಿ, ಗ್ರಾಮಸಿರಿ, ಗಡಿ ಉತ್ಸವದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಕನ್ನಡದ ಕಂಪನ್ನು ಪಸರಿಸುವ ಕೆಲಸ ಮಾಡುತ್ತಿದೆ ಎಂದರು.

ಜಿಲ್ಲಾ ಗೌರವ ಕಾರ್ಯದರ್ಶಿ ಪುದಿಯನೆರವನ ರೇವತಿ ರಮೇಶ್, ಭಾಗಮಂಡಲ ಹೋಬಳಿ ಅಧ್ಯಕ್ಷ ಸುನಿಲ್ ಪತ್ರಾವೋ ಮಾತನಾಡಿದರು. ಇದೇ ಸಂದರ್ಭ ಗಡಿ ಉತ್ಸವದ ಸ್ವಾಗತ ಸಮಿತಿ ಹಾಗೂ ಉಪ ಸಮಿತಿಗಳನ್ನು ರಚಿಸಲಾಯಿತು. ಸಭೆಯಲ್ಲಿ ಗ್ರಾಪಂ ಉಪಾಧ್ಯಕ್ಷೆ ಕಲ್ಪನಾ ಜಗದೀಶ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬೇಕಲ್ ದೇವರಾಜ್, ಕೊಡಗು ಜಿಲ್ಲಾ ಕಸಾಪ ಗೌರವ ಕೋಶಾಧಿಕಾರಿ ಎಸ್.ಎಸ್.ಸಂಪತ್ ಕುಮಾರ್, ಆಯುಷ್ ಇಲಾಖೆಯ ವೈದ್ಯಾಧಿಕಾರಿ ಕೆ.ಸಿ.ಪಲ್ಲವಿ, ಗ್ರಾಪಂ ಸದಸ್ಯರಾದ ಕೆ.ಜಿ.ಜಯಶ್ರೀ, ಎಮ್.ಎಚ್.ಆಯಿಷ ಮತ್ತಿತರರು ಇದ್ದರು.

ಪ್ರತಾಪ್ ಸಿಂಹ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ



ವಿರಾಜಪೇಟೆ, ಡಿ.14–ಸಂಸತ್ ಭವನಕ್ಕೆ ನುಗ್ಗಿ ದುಷ್ಕರ್ಮಿಗಳು ಆತಂಕ ಸೃಷ್ಟಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಡಗು–ಮೈಸೂರು ಲೋಕಸಭಾ ಕ್ಷೇತ್ರದ ಸಂಸದ ಪ್ರತಾಪ್ ಸಿಂಹ ಅವರನ್ನು ಬಂಧಿಸಬೇಕು ಹಾಗೂ ಸಂಸದ ಸ್ಥಾನದಿಂದ ಪದಚ್ಯುತಗೊಳಿಸಬೇಕೆಂದು ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು ಗುರುವಾರ ವಿರಾಜಪೇಟೆಯಲ್ಲಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಗಡಿಯಾರ ಕಂಬದ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಗೃಹ ಸಚಿವ ಅಮಿತ್ ಶಾ ಹಾಗೂ ಸಂಸದ ಪ್ರತಾಪ್ ಸಿಂಹ ವಿರುದ್ಧ ಘೋಷಣೆ ಕೂಗಿದರು. ಸಂಸತ್ ಭವನಕ್ಕೆ ನುಗ್ಗಿದ ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಕೆಪಿಸಿಸಿ ವಕ್ತಾರ ಸಂಕೇತ್ ಪೂವಯ್ಯ ಮಾತನಾಡಿ, ಸಂಸತ್ ಭವನಕ್ಕೆ ನುಗ್ಗಿದ ಕಿಡಿಗೇಡಿಗಳಿಗೆ ಸಂಸದ ಪ್ರತಾಪ್ ಸಿಂಹ ಅವರ ಮೂಲಕ ಪಾಸ್ ಸಿಕ್ಕಿರುವುದು ಖಾತ್ರಿಯಾಗಿದೆ. ಇದು ಗಂಭೀರ ಪ್ರಕರಣವಾಗಿದ್ದು, ಪ್ರತಾಪ್ ಸಿಂಹ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳಬೇಕು. ಗೃಹ ಸಚಿವ ಅಮಿತ್ ಶಾ ಅವರು ಸಂಸತ್ ಭವನಕ್ಕೆ ಭದ್ರತೆ ಒದಗಿಸಲು ವಿಫಲರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅವರು ಕೂಡ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ ಮಾತನಾಡಿ, ಸಂಸದರಿಂದ ಪಾಸ್ ಪಡೆದು ಸಂಸತ್‌ನ ವೀಕ್ಷಕರ ಗ್ಯಾಲರಿಗೆ ಪ್ರವೇಶ ಪಡೆದಿದ್ದ ಆರೋಪಿಗಳು ಹಳದಿ ಬಣ್ಣದ ಹೊಗೆ ಹಾಕಿ ಆತಂಕ ಸೃಷ್ಟಿಸಿರುವುದು ಭದ್ರತಾ ಲೋಪವಾಗಿದೆ. ಪ್ರತಾಪ್ ಸಿಂಹ ಈ ಘಟನೆಯ ನೈತಿಕ ಹೊಣೆ ಹೊತ್ತು ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ವಿರಾಜಪೇಟೆ ಕಾಂಗ್ರೆಸ್ ನಗರಾಧ್ಯಕ್ಷ ಮಾದಂಡ ಪಿ.ತಿಮ್ಮಯ್ಯ, ಪುರಸಭೆ ಸದಸ್ಯರಾದ ಮೊಹಮ್ಮದ್ ರಾಫಿ, ಡಿ.ಪಿ.ರಾಜೇಶ್ ಪದ್ಮನಾಭ, ಹೆಚ್.ಎಸ್.ಮತೀನ್, ಸೇವಾದಳದ ಅಧ್ಯಕ್ಷ ಚಿಲ್ಲವಂಡ ಕಾವೇರಪ್ಪ, ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಕೊಳಮಂಡ ರಫೀಕ್, ಸೈಯದ್ ಶಬೀರ್, ಕೆ.ಎಸ್.ಗೋಪಾಲಕೃಷ್ಣ, ಮೆಲ್ವಿನ್ ಲೋಬೋ, ಜೋಕಿಂ ರೋಡ್ರಿಗಸ್, ರಕ್ಷಿತ್ ಚಂಗಪ್ಪ, ಶಶಿಧರನ್, ಮಹದೇವ, ವಿರಾಜಪೇಟೆ ಬ್ಲಾಕ್ ಮತ್ತು ನಗರ ಕಾಂಗ್ರೆಸ್ ಘಟಕದ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಭದ್ರತಾ ಲೋಪಕ್ಕೆ ಕೇಂದ್ರ ಸರ್ಕಾರವೇ ಹೊಣೆ



ಮಡಿಕೇರಿ, ಡಿ.14– ಪ್ರಜಾಪ್ರಭುತ್ವದ ದೇಗುಲದಂತಿರುವ ಸಂಸತ್ ಭವನಕ್ಕೆ ನುಗ್ಗಿದ ದುಷ್ಕರ್ಮಿಗಳು ಬಣ್ಣದ ಹೊಗೆಯ ಸ್ಪ್ರೇ ಬಳಸಿ ಆತಂಕ ಸೃಷ್ಟಿಸಿರುವುದು ಖಂಡನೀಯ. ಈ ಭದ್ರತಾ ಲೋಪಕ್ಕೆ ಕೇಂದ್ರ ಸರ್ಕಾರವೇ ನೇರಹೊಣೆ ಎಂದು ಆಮ್ ಆದ್ಮಿ ಪಾರ್ಟಿಯ ಕೊಡಗು ಜಿಲ್ಲಾಧ್ಯಕ್ಷ ಭೋಜಣ್ಣ ಸೋಮಯ್ಯ ಆರೋಪಿಸಿದ್ದಾರೆ.

ಸಂಸತ್ ಭವನಕ್ಕೆ ಸೂಕ್ತ ಭದ್ರತೆ ನೀಡುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. 22 ವರ್ಷಗಳ ಹಿಂದೆ ಕೇಂದ್ರದಲ್ಲಿ ಬಿಜೆಪಿ ಸರ್ಕಾರವಿದ್ದಾಗ ಭಯೋತ್ಪಾದಕರ ದಾಳಿ ನಡೆದಿತ್ತು ಇದೀಗ ಮತ್ತೆ ಬಿಜೆಪಿ ಸರ್ಕಾರದ ಅವಧಿಯಲ್ಲೇ ದುಷ್ಕರ್ಮಿಗಳು ಸಂಸತ್ ಭವನದೊಳಗೆ ನುಗ್ಗಿದ್ದಾರೆ. ಇದು ಕೇಂದ್ರ ಸರ್ಕಾರದ ಬೇಜವಾಬ್ದಾರಿತನಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ ಎಂದು ದೂರಿದ್ದಾರೆ.

ಸಂಸತ್ ಭವನಕ್ಕೆ ಭದ್ರತೆ ನೀಡಲಾಗದವರು ದೇಶದ ಜನತೆಗೆ ಭದ್ರತೆ ನೀಡಲು ಸಾಧ್ಯವೇ? ಸಂಸದ ಪ್ರತಾಪ್ ಸಿಂಹ ಮೂಲಕ ದುಷ್ಕರ್ಮಿಗಳು ಪಾಸ್ ಪಡೆದಿರುವ ಪ್ರಕರಣ ಇಡೀ ಕ್ಷೇತ್ರದ ಜನತೆಗೆ ಮುಜುಗರ ಉಂಟು ಮಾಡಿದೆ. ದೇಶದ ಸೇನಾ ಕ್ಷೇತ್ರಕ್ಕೆ ಸಾವಿರಾರು ಸೈನಿಕರನ್ನು ನೀಡಿದ ಕೊಡಗು ಜಿಲ್ಲೆ ಶಿಸ್ತು ಮತ್ತು ಸ್ವಾಭಿಮಾನಕ್ಕೆ ಹೆಸರುವಾಸಿಯಾಗಿದೆ. ಆದರೆ, ಈ ಕ್ಷೇತ್ರದಿಂದ ಆಯ್ಕೆಯಾದ ಒಬ್ಬ ಸಂಸದರು ಸಂಸತ್ ಪ್ರವೇಶಕ್ಕೆ ಪಾಸ್ ನೀಡುವ ಸಂದರ್ಭ ಪೂರ್ವಾಪರ ತಿಳಿಯದೆ ಇರುವುದು ಆಶ್ಚರ್ಯಕ್ಕೆ ಕಾರಣವಾಗಿದೆ ಎಂದು ಪತ್ರಿಕಾ ಹೇಳಿಕೆಯಲ್ಲಿ ಟೀಕಿಸಿದ್ದಾರೆ.

ನಾಟಕ ಎಂಬುದು ಜೀವಕಲೆ: ಎಸ್.ನಾರಾಯಣ್



ಚಾಮರಾಜನಗರ, ಡಿ.14–ಬಹಳ ಹಿಂದಿನಿಂದಲೂ ಬೆಳೆದು ಬಂದಿರುವ ನಾಟಕ ಕಲೆ ಎಂಬುದು ಜೀವಂತ ಕಲೆ ಎಂದು ಚಿತ್ರ ನಿರ್ದೇಶಕ ಎಸ್.ನಾರಾಯಣ್ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಡಾ.ರಾಜ್‌ಕುಮಾರ್ ಕಲಾಮಂದಿರದಲ್ಲಿ ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಕಲಾಮಂಟಪ ಹಾಗೂ ಚಾಮರಾಜನಗರ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಜೆಎಸ್‌ಎಸ್ ರಂಗೋತ್ಸವ–2023 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸುಸಂಸ್ಕೃತ ಜೀವನದ ಮೌಲ್ಯಗಳನ್ನು ಕಲಿಸಿ, ಬದುಕಿನ ಶೈಲಿಯನ್ನೇ ಬದಲಿಸುವ ರಂಗ ಶಿಕ್ಷಣವನ್ನು ವಿದ್ಯಾರ್ಥಿ ಜೀವನದಲ್ಲೇ ಕಲಿಸುತ್ತಿರುವ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಸರ್ಕಾರ ಮಾಡದ ರಂಗ ಶಿಕ್ಷಣವನ್ನು ಜೆಎಸ್‌ಎಸ್ ವಿದ್ಯಾಪೀಠ ಮಾಡುತ್ತಿರುವುದು ನಮ್ಮ ಪುಣ್ಯ, ಪ್ರತಿಭಾನ್ವೇಷಣೆಗೆ ಸೂಕ್ತ ವೇದಿಕೆಯನ್ನು ಕಲ್ಪಿಸಿಕೊಟ್ಟಿದೆ. ಜೀವನ ಶೈಲಿ ಬದಲಾವಣೆಯಲ್ಲಿ ರಂಗಶಿಕ್ಷಣ ಅತ್ಯಂತ ಪ್ರಮುಖ ಸ್ಥಾನ ವಹಿಸುತ್ತದೆ. ರಂಗಭೂಮಿ ಮನುಷ್ಯನನ್ನು ತಿದ್ದುತೀಡಿ ಪರಿಪಕ್ವತೆ ನೀಡುತ್ತದೆ. ರಂಗಭೂಮಿಗೆ ಭವ್ಯವಾದ ಇತಿಹಾಸವಿದೆ. ನಮ್ಮ ಹಿಂದಿನವರು ಮನರಂಜನೆಗಾಗಿ ನಾಟಕಗಳನ್ನು ಆಡುತ್ತಿದ್ದರು. ನಂತರ ಬೀದಿನಾಟಕಗಳು ಬಂದವು. ನಾಟಕ ಕಲೆ ಕಲಿತು ಆಡುವಂತಹದ್ದು, ಮೋಸ ಮಾಡುವವರ ಆಡುವ ನಾಟಕವನ್ನು ಯಾರು ಕಲಿಸಿಕೊಡಬೇಕಿಲ್ಲ. ಆದರೆ, ಕಲಿತು ಪ್ರದರ್ಶಿಸುವ ನಾಟಕಕ್ಕೆ ಒಂದು ಶಕ್ತಿ ಇದೆ ಎಂದು ತಿಳಿಸಿದರು.

ಶ್ರೀ ಶಿವರಾತ್ರಿದೇಶಿಕೇಂದ್ರಸ್ವಾಮೀಜಿ ಮಾತನಾಡಿ, ನಾಟಕ ಎಲ್ಲಾ ಕಲೆಗಳಿಗಿಂತಲೂ ಶ್ರೇಷ್ಠವಾದ ಕಲೆ. ಈ ಕಲೆಯನ್ನು ಮೈಗೂಡಿಸಿಕೊಂಡರೆ ವ್ಯಕ್ತಿತ್ವ ವಿಕಸನಗೊಳ್ಳುವ ಜೊತೆಗೆ ಆತನನ್ನು ಸುಸಂಸ್ಕೃತನನ್ನಾಗಿಸುತ್ತದೆ. ಬಾಲ್ಯದಲ್ಲೇ ಮಕ್ಕಳಿಗೆ ರಂಗಶಿಕ್ಷಣ ಕೊಟ್ಟರೆ, ಅವರಲ್ಲಿನ ಪ್ರತಿಭೆ ಹೊರಬರುತ್ತಿದೆ. ಈ ನಿಟ್ಟಿನಲ್ಲಿ ಜೆಎಸ್‌ಎಸ್ ಕಲಾಮಂಟಪ ಕೆಲಸ ನಿರ್ವಹಿಸುತ್ತಿದೆ. ಮನುಷ್ಯನನ್ನು ಇದ್ದ ಹಾಗೆ ತೋರಿಸುವುದು ರಂಗಭೂಮಿ, ಹಿರಿಯರು ರಾಮಾಯಣ, ಮಹಾಭಾರತ, ಶಿವಶರಣರ ನಾಟಗಳನ್ನು ಪ್ರದರ್ಶಿಸುತ್ತಾ, ಮೌಲ್ಯಗಳನ್ನು ಕಲಿಸುತ್ತಿದ್ದಾರೆ. ನಾಟಕದ ದೊಡ್ಡ ಪರಂಪರೆಯೇ ನಮ್ಮಲ್ಲಿದೆ ಎಂದರು.

ಎಡಿಸಿ ಗೀತಾ ಹುಡೇದ ಮಾತನಾಡಿದರು. ಜೆಎಸ್‌ಎಸ್ ರಂಗೋತ್ಸವ ಸಂಚಾಲಕ ಚಂದ್ರಶೇಖರ್ ಹೆಗ್ಗೋಠಾರ ಮತ್ತಿತರರಿದ್ದರು.

ಅಂಗಡಿಗಳಿಗೆ ನಗರಸಭೆ ಅಧಿಕಾರಿಗಳ ದಿಢೀರ್ ಭೇಟಿ

ಉದ್ಯಮ ಪರವಾನಗಿ ಪರಿಶೀಲಿಸಿದ ಪೌರಾಯುಕ್ತ ಎಸ್.ವಿ.ರಾಮದಾಸ್



ಚಾಮರಾಜನಗರ, ಡಿ.14– ಉದ್ಯಮ ಪರವಾನಗಿ ಆಂದೋಲನ ಕಾರ್ಯಕ್ರಮದ ಅಂಗವಾಗಿ ನಗರಸಭೆ ಅಧಿಕಾರಿಗಳು ಗುರುವಾರ ನಗರದ ವಿವಿಧ ಅಂಗಡಿಗಳಿಗೆ ದಿಢೀರ್ ಭೇಟಿ ನೀಡಿ, ಉದ್ಯಮ ಪರವಾನಗಿ ಪರಿಶೀಲಿಸಿದರು.

ನಗರದ ಡೀವಿಯೇಷನ್ ರಸ್ತೆಯ ವಿವಿಧ ಕಡೆ ತೆರಳಿದ ಅಧಿಕಾರಿಗಳು, ಪ್ರತಿಯೊಂದು ಅಂಗಡಿಗಳಿಗೂ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು. ನಗರಸಭೆ ವತಿಯಿಂದ ಪಡೆದಿರುವ ಉದ್ಯಮ ಪರವಾನಗಿ ಪಡೆದು ಪರಿಶೀಲಿಸಿದರು. ಈಗಾಗಲೇ ಅವಧಿ ಮುಗಿದು ಹಾಗೂ ನವೀಕರಣ ಮಾಡದಿರುವ ಅಂಗಡಿಗಳ ಮಾಲೀಕರಿಗೆ ಸ್ಥಳದಲ್ಲೇ ನವೀಕರಣ ಮಾಡಲು ದಾಖಲಾತಿಗಳನ್ನು ಪಡೆದು ಕಚೇರಿಗೆ ಬಂದು ರಸೀದಿ ಪಡೆಯಲು ಸೂಚಿಸಿದರು.

ಅಲ್ಲದೇ ಅಂಗಡಿ ಮತ್ತು ಹೋಟೆಲ್‌ಗಳಲ್ಲಿ ಸ್ವಚ್ಛತೆ, ಆಹಾರ ಗುಣಮಟ್ಟವನ್ನು ಪರಿಶೀಲಿಸಿದ ಅಧಿಕಾರಿಗಳು, ಸ್ವಚ್ಛತೆ, ಗುಣಮಟ್ಟ ಇಲ್ಲದ ಅಂಗಡಿ ಮತ್ತು ಹೋಟೆಲ್‌ಗಳಿಗೆ ದಂಡ ವಿಧಿಸಿದರು. ಡೀವಿಯೇಷನ್ ರಸ್ತೆಯ ಬಟ್ಟೆ ಅಂಗಡಿಗಳು, ಮೊಬೈಲ್ ಅಂಗಡಿಗಳು, ಪಾನೀಪುರಿ ಅಂಗಡಿಗಳು, ಹೋಟೆಲ್‌ಗಳು, ಹಣ್ಣು, ಚಿಲ್ಲರೆ, ದಿನಸಿ ಅಂಗಡಿಗಳು, ಮೆಡಿಕಲ್ ಶಾಪ್, ಮಾಂಸ ಮಾರಾಟ, ಸಿಹಿ ತಿನಿಸುಗಳ ಸೇರಿದಂತೆ ಇತರೆ ಅಂಗಡಿಗಳಿಗೆ ಅಧಿಕಾರಿಗಳ ತಂಡ ಭೇಟಿ ನೀಡಿ, ಪರವಾನಗಿ ಪರಿಶೀಲಿಸಿತು.

ಇದೇ ವೇಳೆ ಪರವಾನಗಿ ಪಡೆಯದ ಹಲವು ಅಂಗಡಿಗಳನ್ನು ಮುಚ್ಚಿಸಲಾಯಿತು. ನಗರಸಭಾ ವ್ಯಾಪ್ತಿಯಲ್ಲಿ ತೆರೆದಿರುವ ಅಂಗಡಿಗಳ ಮಾಲೀಕರು ಕಡ್ಡಾಯವಾಗಿ ನಗರಸಭೆ ವತಿಯಿಂದ ಉದ್ಯಮ ಪರವಾನಗಿ ಪಡೆಯಬೇಕು. ಅಲ್ಲದೇ ಪರವಾನಗಿ ಅವಧಿ ಮುಗಿದ ಬಳಿಕ ನವೀಕರಣ ಮಾಡಿಸಿಕೊಳ್ಳಬೇಕು. ಇಲ್ಲದಿದ್ದರೆ ದಂಡ ವಿಧಿಸಲಾಗುವುದು. ಜೊತೆಗೆ ಅಂಗಡಿಗಳ ಲೈಸೆನ್ಸ್ ರದ್ದುಪಡಿಸಲಾಗುವುದು ಎಂದು ಪೌರಾಯುಕ್ತ ಎಸ್.ವಿ.ರಾಮದಾಸ್ ಎಚ್ಚರಿಕೆ ನೀಡಿದರು.

ನಗರಸಭೆಗೆ ವಂಚಿಸದೆ ವ್ಯಾಪಾರಿಗಳು, ಅಂಗಡಿ–ಮುಂಗಟ್ಟು ಮಾಲೀಕರು ಕಾಲಕಾಲಕ್ಕೆ ತಮ್ಮ ಉದ್ಯಮದ ಪರವಾನಗಿಯನ್ನು ನವೀಕರಣ ಮಾಡಿಕೊಳ್ಳಬೇಕು. ಜೊತೆಗೆ ನ್ಯಾಯಯುತವಾಗಿ ವ್ಯಾಪಾರ ವಹಿವಾಟು ನಡೆಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಗರಸಭಾ ಸದಸ್ಯ ಅಬ್ರಾರ್ ಅಹಮ್ಮದ್, ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕಿ ಸುಧಾ, ಪರಿಸರ ಇಂಜಿನಿಯರ್ ಗಿರಿಜಾ, ಹಿರಿಯ ಆರೋಗ್ಯ ನಿರೀಕ್ಷಕರಾದ ಸುಷ್ಮಾ, ಮಂಜುನಾಥ್ ಆರೋಗ್ಯ ಸಿಬ್ಬಂದಿ ಚೇತನ್, ಮಹೇಶ್, ಮಣಿಕಂಠ ಇತರರು ಹಾಜರಿದ್ದರು.

ಕೆಲ ಅಂಗಡಿಗಳಿಗೆ ದಂಡ

ಚಾಮರಾಜನಗರದ ಡೀವಿಯೇಷನ್ ರಸ್ತೆಯಲ್ಲಿರುವ ಶ್ಯಾಂ ಸೂಪರ್ ಮಾರ್ಕೆಟ್‌ಗೆ ಭೇಟಿ ನೀಡಿದ ನಗರಸಭಾ ಅಧಿಕಾರಿಗಳು, ಉದ್ಯಮ ಪರವಾನಗಿ ಪರಿಶೀಲಿಸಿದರು. ಆದರೆ, ಉದ್ಯಮ ಪರವಾನಗಿ ಪಡೆದಿಲ್ಲ. ಜೊತೆಗೆ ಅಂಗಡಿಯಲ್ಲಿ ಸ್ವಚ್ಛತೆ ಇಲ್ಲದ ಹಾಗೂ ಕಳಪೆ ಆಹಾರ ನೀಡುತ್ತಿದ್ದ ಪರಿಣಾಮ 5 ಸಾವಿರ ರೂ. ದಂಡ ವಿಧಿಸಿ, ಅಂಗಡಿ ಮುಚ್ಚಿಸಲಾಯಿತು. ಅಲ್ಲದೆ ಬೆಂಗಳೂರು ಅಯ್ಯಂಗಾರ್ ಬೇಕರಿಯಲ್ಲಿ ಸ್ವಚ್ಛತೆ, ಗುಣ ಮಟ್ಟ ಇಲ್ಲದ ಕಾರಣ ದಂಡ ವಿಧಿಸಿ, ಅಂಗಡಿ ಮುಚ್ಚಿಸಲಾಯಿತು. ಇದೇ ರೀತಿ ನಗರದ ಹಲವು ಅಂಗಡಿಗಳಿಗೆ ಅಧಿಕಾರಿಗಳ ತಂಡ ಭೇಟಿ ನೀಡಿ, ಸ್ವಚ್ಛತೆ ಕಾಪಾಡುವಂತೆ ಸೂಚಿಸಿ, ಪರವಾನಗಿ ಪರಿಶೀಲಿಸಿತು.

ಯಳಂದೂರಿನಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಸದನದಲ್ಲಿ ಎಆರ್‌ಕೆ ಮನವಿ



ಯಳಂದೂರು, ಡಿ.14– ತಾಲೂಕಿನಲ್ಲಿ ಕ್ರೀಡಾಂಗಣ ಇಲ್ಲದೆ ಕ್ರೀಡೆಗಳನ್ನು ಆಯೋಜಿಸಲು ಪಕ್ಕದ ತಾಲೂಕಿಗೆ ತೆರಳುವ ಸ್ಥಿತಿ ಇದೆ. ಆದ್ದರಿಂದ ಯಳಂದೂರಿನಲ್ಲಿ ಕ್ರೀಡಾಂಗಣ ನಿರ್ಮಿಸುವ ನಿಟ್ಟಿನಲ್ಲಿ ಯುವಜನ ಸೇವೆ ಹಾಗೂ ಕ್ರೀಡಾ ಇಲಾಖೆಯ ಸಚಿವರು ಮುಂದಾಗಬೇಕು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಮನವಿ ಮಾಡಿದರು.

ಬೆಳಗಾವಿಯಲ್ಲಿ ನಡೆಯುತ್ತಿರುವ ಅಧಿವೇಶನದಲ್ಲಿ ಗುರುವಾರ ಮಾತನಾಡಿದ ಅವರು, ಯಳಂದೂರು ತಾಲೂಕು ಕೇಂದ್ರವಾಗಿದ್ದರೂ ಇಲ್ಲಿ ಸೂಕ್ತ ಕ್ರೀಡಾಂಗಣವಿಲ್ಲ. ಇಲ್ಲಿನ ಕ್ರೀಡಾಪಟುಗಳಿಗೆ ತೊಂದರೆಯಾಗುತ್ತಿದೆ ಎಂದು ಸಚಿವರ ಗಮನಕ್ಕೆ ತಂದರು. ಇದಕ್ಕೆ ಕ್ರೀಡಾ ಸಚಿವ ಪ್ರಿಯಾಂಕ್ ಖರ್ಗೆ ಉತ್ತರಿಸಿ, ಈಗಾಗಲೇ ಕ್ರೀಡಾಂಗಣ ನಿರ್ಮಾಣಕ್ಕೆ ಸೂಕ್ತ ಜಾಗ ಒದಗಿಸಿಕೊಡುವಂತೆ ಜಿಲ್ಲಾಧಿಕಾರಿಗೆ ಇಲಾಖೆಯಿಂದ ಪತ್ರ ಬರೆಯಲಾಗಿದೆ. ಆದರೆ, ಅಲ್ಲಿ ಜಾಗ ಗುರುತಿಸಿಕೊಟ್ಟಿಲ್ಲ. ಜಾಗ ಗುರುತಿಸಿಕೊಟ್ಟರೆ ಇದಕ್ಕೆ ಬೇಕಾದ ಅನುದಾನ ನೀಡಲು ಕ್ರಮ ವಹಿಸಲಾಗುವುದು ಎಂದು ಉತ್ತರಿಸಿದರು.

ಇದಕ್ಕೆ ಶಾಸಕ ಕೃಷ್ಣಮೂರ್ತಿ ಉತ್ತರಿಸಿ, ಈಗಾಗಲೇ ಇಲಾಖೆಯ ಅಧಿಕಾರಿಗಳಿಂದ ಜಾಗ ಸರ್ವೆ ಮಾಡಿಸಲಾಗಿದೆ. ಸೂಕ್ತ ಜಾಗ ಕೊಡಿಸಲು ನಾನು ಶ್ರಮಿಸುತ್ತೇನೆ. ಜೊತೆಗೆ ನನ್ನ ಕ್ಷೇತ್ರ ವ್ಯಾಪ್ತಿಯ ಒಳಾಂಗಣ ಕ್ರೀಡಾಂಗಣದ ಕಾಮಗಾರಿಗಳನ್ನು ಪೂರ್ಣಗೊಳಿಸಲು 3 ಕೋಟಿ ರೂ. ಅನುದಾನ ಅಗತ್ಯವಿದ್ದು, ಇದನ್ನು ಬಿಡುಗಡೆ ಮಾಡಿಕೊಡಬೇಕೆಂದು ಸಚಿವರಿಗೆ ಮನವಿ ಮಾಡಿದರು.

ಕಾಂಗ್ರೆಸ್‌ನಿಂದ ಬಡವರ ಕಿತ್ತು ತಿನ್ನುವ ಯೋಜನೆ ಅನುಷ್ಠಾನ



ಹನೂರು, ಡಿ.14–ದೇಶದ ಕಟ್ಟ ಕಡೆಯ ವ್ಯಕ್ತಿಗೂ ಸರ್ಕಾರದ ಸೌಲಭ್ಯಗಳು ಸಿಗಬೇಕು ಎನ್ನುವ ಉದ್ದೇಶದಿಂದ ಪಿಎಂ ಸ್ವನಿಧಿ ಹಾಗೂ ವಿಶ್ವಕರ್ಮ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಜಾರಿಗೆ ತಂದಿದ್ದಾರೆ ಎಂದು ಬಿಜೆಪಿ ಓಬಿಸಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಜನಧನಿ ಬಿ.ವೆಂಕಟೇಶ್ ತಿಳಿಸಿದರು.

ಪಟ್ಟಣದ ಖಾಸಗಿ ಕಲ್ಯಾಣ ಮಂಟಪದಲ್ಲಿ ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆಯ ಮಾಹಿತಿ ಸಂಬಂಧ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಬಡವರನ್ನು ಕಿತ್ತು ತಿನ್ನುವ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಿದ್ದಾರೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಪ್ರತಿಯೊಬ್ಬ ಫಲಾನುಭವಿಗಳಿಗೂ ಒಂದಲ್ಲ ಒಂದು ಸೌಲಭ್ಯ ತಲುಪಿಸಬೇಕು ಎನ್ನುವ ದೃಷ್ಟಿಯಿಂದ ಹತ್ತಾರು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಸೆ.17ರಂದು ವಿಶ್ವಕರ್ಮ ಯೋಜನೆಗೆ ಚಾಲನೆ ನೀಡಿದ್ದು, ಸಾವಿರಾರು ವರ್ಷ ವೃತ್ತಿಪರ ಜೀವನವನ್ನೇ ಮಾಡುವಂತವರಿಗೆ ಪುನಶ್ಚೇತನ ನೀಡುವ ಉದ್ದೇಶದಿಂದ ದೋಣಿ ಕಟ್ಟುವವರು, ಕಾರ್ಪೆಂಟರ್, ಕಬ್ಬಿಣದ ಆಯುಧಗಳನ್ನು ತಯಾರು ಮಾಡುವವರು, ಬೀಗದ ಕೆಲಸ, ಅಕ್ಕಸಾಲಿಗರು, ಮಡಿಕೆ ತಯಾರಕರು, ಚಮ್ಮಾರರು, ಮನೆ ಕಟ್ಟುವವರು, ಸವಿತಾ ಸಮಾಜದವರು, ಹೂ ಹಾರ ತಯಾರಕರು, ಟೈಲರ್, ಮೀನು ಬಲೆ ತಯಾರಕರು ಸೇರಿದಂತೆ 18 ವೃತ್ತಿಪರರಿಗೆ ಈ ಯೋಜನೆ ಜಾರಿಗೊಳಿಸಲಾಗಿದೆ ಎಂದರು.

ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸ್ವನಿಧಿ ಹಾಗೂ ವಿಶ್ವಕರ್ಮ ಯೋಜನೆಗೆ ಸುಮಾರು 10 ಸಾವಿರ ಫಲಾನುಭವಿಗಳನ್ನು ಗುರುತಿಸಿ ಈ ಸೌಲಭ್ಯ ಕೊಡಿಸಬೇಕೆಂದು ರೂಪರೇಷೆ ಸಿದ್ಧಪಡಿಸಲಾಗಿದೆ. ಆದ್ದರಿಂದ ಪಕ್ಷದ ಬೂತ್ ಅಧ್ಯಕ್ಷರು, ಕಾರ್ಯದರ್ಶಿಗಳು ಸೌಲಭ್ಯವನ್ನು ಫಲಾನುಭವಿಗಳಿಗೆ ತಲುಪಿಸಲು ಶ್ರಮವಹಿಸಬೇಕು ಎಂದು ತಿಳಿಸಿದರು.

ಓಬಿಸಿ ರಾಷ್ಟ್ರೀಯ ಕಾರ್ಯಕಾರಿ ಸದಸ್ಯ ನೂರೊಂದು ಶೆಟ್ಟಿ ಮಾತನಾಡಿ, ಪಕ್ಷದ ಕಾರ್ಯಕರ್ತರು ಸದೃಢವಾಗಿರಬೇಕು. ಇವರಿಗೆ ಹಿರಿಯ ನಾಯಕರು ಶಕ್ತಿ ತುಂಬಿದರೆ ಪಕ್ಷ ಇನ್ನಷ್ಟು ಗಟ್ಟಿಯಾಗಿ ಉಳಿಯುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಮಂಡಲ ಅಧ್ಯಕ್ಷರಾದ ಸಿದ್ದಪ್ಪ, ವೀರಭದ್ರ, ಜಿಲ್ಲಾ ಉಪಾಧ್ಯಕ್ಷ ಬೂದುಬಾಳು ವೆಂಕಟಸ್ವಾಮಿ, ಜಿಲ್ಲಾ ಓಬಿಸಿ ಕಾರ್ಯದರ್ಶಿ ಲೋಕೇಶ್ ಜೆಟ್ಟಿ, ಗ್ರಾಮ ಪಂಚಾಯಿತಿ ಸದಸ್ಯ ನಾಗರಾಜು, ಬೂತ್ ಅಧ್ಯಕ್ಷರಾದ ಅಶ್ವಥ್ ಉಗನಿಯ ಮಹೇಶ್, ಮಹಿಳಾ ಘಟಕದ ಅಧ್ಯಕ್ಷ ಮೀನಾ, ಮುಖಂಡರಾದ ಜಗನ್ನಾಥ್ ನಾಯ್ಡು, ಪ್ರವೀಣ್ ಕುಮಾರ್, ಅನಂತ ಪದ್ಮನಾಭ ಗುಪ್ತ ಇನ್ನಿತರರು ಹಾಜರಿದ್ದರು.



ಚಾಮರಾಜನಗರ ಚಾಮರಾಜೇಶ್ವರ ಉದ್ಯಾನ ಮುಂಭಾಗ ಕರ್ನಾಟಕ ಸೇನಾಪಡೆ ಕಾರ್ಯಕರ್ತರು ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುತ್ತಿರುವ ಕ್ರಮವನ್ನು ಖಂಡಿಸಿ ಗುರುವಾರ ಕಡ್ಲೆಪುರಿ, ಕಡಲೆಕಾಯಿ ತಿಂದು, ಸ್ಥಳದಲ್ಲೇ ಟೀ ಮಾಡಿ ಕುಡಿದು ಪ್ರತಿಭಟನೆ ನಡೆಸಿದರು. ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ, ರಾಜು, ಮಹೇಶ್‌ಗೌಡ, ಪುರುಷೋತ್ತಮ್, ಸಿ.ಕೆ.ಮಂಜುನಾಥ್, ಸಿ.ಎಂ.ಕೃಷ್ಣಮೂರ್ತಿ, ರೈತ ಮುಖಂಡರಾದ ಹೊನ್ನೂರುಪ್ರಕಾಶ್, ಬಸವಣ್ಣ, ಚಿನ್ನಸ್ವಾಮಿಗೌಂಡರ್, ಕುಮಾರಸ್ವಾಮಿ, ಜಗದೀಶ್, ನಿಜಧ್ವನಿ ಗೋವಿಂದರಾಜು, ಸುರೇಶ್, ಚಾ.ರಾ.ಕುಮಾರ್, ಚಾ.ಹ.ರಾಮು ಇನ್ನಿತರರಿದ್ದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ 1 ಲಕ್ಷ ರೂ. ದೇಣಿಗೆ



ಚಾಮರಾಜನಗರ, ಡಿ.14– ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಉದ್ಯಮಿ ಜಿ.ಸಿ.ಕಿರಣ್ ಅವರು ತಮ್ಮ ತಂದೆ ದಿ.ಜಿ.ಎಸ್.ಚಂದ್ರಶೇಖರಯ್ಯ ಅವರ ಸ್ಮರಣಾರ್ಥ ಗೋಣಿ ಭೈರವೇಶ್ವರ ಸ್ಮಾರಕ ದತ್ತಿ ಪ್ರಶಸ್ತಿ ನೀಡಲು 1 ಲಕ್ಷ ರೂ. ದೇಣಿಗೆಯ ಚೆಕ್ ವಿತರಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸಂಘದ ಅಧ್ಯಕ್ಷ ದೇವರಾಜು ಕಪ್ಪಸೋಗೆ ಅವರಿಗೆ ಚೆಕ್ ನೀಡಿ ಮಾತನಾಡಿದ ಅವರು, ಪತ್ರಿಕಾ ರಂಗ ಸಮಾಜದ ಕಣ್ಣುಗಳಿದ್ದಂತೆ. ಇಲ್ಲಿನ ಆಗು–ಹೋಗುಗಳನ್ನು ತಿಳಿಸುತ್ತ ಎಲ್ಲಾ ರಂಗಗಳ ಲೋಪ ಎತ್ತಿ ಹಿಡಿಯುವಲ್ಲಿ ಶ್ರಮಿಸಿ, ದುಡಿಯುವ ಪತ್ರಕರ್ತರ ಸೇವೆ ಅಮೂಲ್ಯವಾದುದು ಎಂದರು.

ಜಿಲ್ಲಾದ್ಯಂತ ವೃತ್ತಿನಿರತ ಪತ್ರಕರ್ತರಾಗಿ ಸಲ್ಲಿಸಿರುವ ಸೇವೆ ಗುರುತಿಸಿ ಅವರನ್ನು ಗೌರವಿಸಲು ನನ್ನ ತಂದೆ ಹೆಸರಿನಲ್ಲಿ ತಮ್ಮ ಸಂಘದಲ್ಲಿ ಒಂದು ಲಕ್ಷ ರೂ. ಠೇವಣಿ ಇಡುತ್ತಿದ್ದೇನೆ. ಅದರಲ್ಲಿ ಬರುವ ವಾರ್ಷಿಕ ಬಡ್ಡಿ ಹಣದಲ್ಲಿ ಹಿರಿಯ ಪತ್ರಕರ್ತರೊಬ್ಬರಿಗೆ 5 ಸಾವಿರ ರೂ. ನಗದು, ದಿ.ಜಿ.ಎಸ್. ಚಂದ್ರಶೇಖರಯ್ಯ ಸ್ಮರಣಾರ್ಥ ಗೋಣಿ ಭೈರವೇಶ್ವರ ಸ್ಮಾರಕ ದತ್ತಿ ಪ್ರಶಸ್ತಿ ಫಲಕ ನೀಡಿ ಗೌರವಿಸಬೇಕು ಎಂದು ಹೇಳಿದರು.

ಸಂಘದ ಅಧ್ಯಕ್ಷ ದೇವರಾಜು ಕಪ್ಪಸೋಗೆ ಮಾತನಾಡಿದರು. ಸಂಘದ ರಾಜ್ಯ ಸಮಿತಿ ಸದಸ್ಯರಾದ ಎಂ.ಈ.ಮಂಜುನಾಥ್, ಗೂಳಿಪುರ ನಂದೀಶ್, ಪ್ರಧಾನ ಕಾರ್ಯದರ್ಶಿ ಪ್ರಸಾದ್ ಲಕ್ಕೂರು, ಖಜಾಂಚಿ ರೇಣುಕೇಶ್, ಪತ್ರಕರ್ತರಾದ ಎಸ್.ಎಂ.ನಂದೀಶ್, ಬನಶಂಕರ ಆರಾಧ್ಯ ಇದ್ದರು.

'ಜಸ್ಟ್ ಕನ್ನಡ' ಸುದ್ದಿ ತಾಣದ ನೂತನ ಕಚೇರಿ ಉದ್ಘಾಟನೆ



ಮೈಸೂರು, ಡಿ.14– ಕನ್ನಡ ಡಿಜಿಟಲ್ ಮಾಧ್ಯಮ ಕ್ಷೇತ್ರದಲ್ಲಿ ಹದಿಮೂರು ವಸಂತಗಳನ್ನು ಯಶಸ್ವಿಯಾಗಿ ಪೂರೈಸಿರುವ ಜಸ್ಟ್ ಕನ್ನಡ ಸುದ್ದಿ ತಾಣದ ನೂತನ ಕಚೇರಿ ಗುರುವಾರ ಉದ್ಘಾಟನೆಗೊಂಡಿತು.

ಮೈಸೂರು ಕುವೆಂಪುನಗರದ ಪಿ ಆಂಡ್ ಟಿ ಬ್ಲಾಕ್‌ನ ಮಹರ್ಷಿ ದಯಾನಂದ ಸರಸ್ವತಿ ರಸ್ತೆಯಲ್ಲಿರುವ ನೂತನ ಕಚೇರಿಯನ್ನು ವರುಣಾ ಕ್ಷೇತ್ರದ ಕೆಡಿಪಿ ಸದಸ್ಯ, ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಹಾಗೂ ಮೈಸೂರು ವಿವಿ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರೊ.ಎಂ.ಎಸ್.ಸಪ್ನ ಅವರು ಉದ್ಘಾಟಿಸಿ, ಶುಭ ಕೋರಿದರು.

ಈ ವೇಳೆ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಸೋಷಿಯಲ್ ಮೀಡಿಯಾ ಅಬ್ಬರದ ಕಾಲದಲ್ಲಿ ಯಾವುದೇ ಅತಿರೇಕಕ್ಕೆ ಅವಕಾಶ ನೀಡದೆ ವಸ್ತುನಿಷ್ಠವಾಗಿ ಕಾರ್ಯನಿರ್ವಹಿಸುತ್ತಿರುವ ಜಸ್ಟ್ ಕನ್ನಡ ಇತರರಿಗೆ ಮಾದರಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರೊ.ಕೆ.ಎಸ್.ರಂಗಪ್ಪ ಮಾತನಾಡಿ, ಹಲವಾರು ವರ್ಷಗಳಿಂದ ಜಸ್ಟ್ ಕನ್ನಡ ಸುದ್ದಿ ತಾಣವನ್ನು ನೋಡುತ್ತಾ ಬರುತ್ತಿದ್ದು, ಜನರಿಗೆ ಬೇಕಾದ ಉತ್ತಮ ಸುದ್ದಿಗಳನ್ನು ವಸ್ತುನಿಷ್ಠವಾಗಿ ನೀಡುವುದರಲ್ಲಿ ಜಸ್ಟ್ ಕನ್ನಡ ಸದಾ ಮುಂದಿದೆ ಎಂದು ಪ್ರಶಂಸಿಸಿದರು.

ಪ್ರೊ.ಎಂ.ಎಸ್.ಸಪ್ನ ಮಾತನಾಡಿ, 13 ವರ್ಷಗಳಿಂದ ಜಸ್ಟ್ ಕನ್ನಡ ಮಾದರಿ ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಂಡಿದ್ದು, ಬದಲಾದ ಕಾಲಮಾನಕ್ಕೆ ತಕ್ಕಂತೆ ಓದುಗರಿಗೆ ಅಗತ್ಯವಾದ ಸುದ್ದಿ–ಮಾಹಿತಿಯನ್ನು ಶೀಘ್ರವಾಗಿ ನೀಡುತ್ತಿದೆ ಎಂದರು.

ಸಮಾರಂಭದಲ್ಲಿ ಜಸ್ಟ್ ಕನ್ನಡ ಸುದ್ದಿ ತಾಣದ ಸಂಪಾದಕ ಕೊಳ್ಳೇಗಾಲ ಮಹೇಶ್, ಯೆಶ್‌ಟೆಲ್ ಸುದ್ದಿವಾಹಿನಿ ಸ್ಥಾಪಕ ಕೆ.ಮಂಜುನಾಥ್, ಕೆಪಿಸಿಸಿ ವಕ್ತಾರರಾದ ಎಂ.ಲಕ್ಷ್ಮಣ್, ಹೆಚ್.ಎ.ವೆಂಕಟೇಶ್, ಲಾಗೈಡ್ ಸಂಪಾದಕ, ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್, ಮೈಸೂರು ಜಿಲ್ಲಾ ವಕೀಲರ ಸಂಘದ ಕಾರ್ಯದರ್ಶಿ ಉಮೇಶ್, ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಶಿವರಾಂ, ನಗರ ಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ, ಹಿರಿಯ ವಕೀಲ ಆ.ಮಾ.ಭಾಸ್ಕರ್, ಹಿರಿಯ ಪತ್ರಕರ್ತ ಎಂ.ಬಿ.ಮರಮ್ಕಲ್ ಮತ್ತಿತರರು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ನಿಗ್ರಹ ಕಾಯ್ದೆಯಡಿ ಕೇಸ್ ದಾಖಲು

ಮತ್ತು ಹರಿಯಾಣದ ಹಿಸ್ಸಾರ್ ನಿವಾಸಿ ನೀಲಂ ಅವರುಗಳನ್ನು ಇಂದು ಪೊಲೀಸರು ದೆಹಲಿಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಹರ್ದೀಪ್ ಕೌರ್ ಅವರ ಮುಂದೆ ಹಾಜರುಪಡಿಸಿ, 15 ದಿನಗಳ ಕಾಲ ತಮ್ಮ ವಶಕ್ಕೆ ನೀಡಬೇಕೆಂದು ಮನವಿ ಸಲ್ಲಿಸಿದರಾದರೂ ನ್ಯಾಯಾಧೀಶರು 7 ದಿನಗಳ ಕಾಲ ನಾಲ್ವರೂ ಆರೋಪಿಗಳನ್ನು ಪೊಲೀಸ್ ವಶಕ್ಕೆ ನೀಡಿ ಆದೇಶ ಹೊರಡಿಸಿದ್ದಾರೆ.

ಆರೋಪಿಗಳು ಅಜ್ಞಾತ ಸ್ಥಳದಲ್ಲಿ ವಿಚಾರಣೆ: ಪ್ರಾರಂಭಿಕ ಹಂತದಲ್ಲಿ ಪಾರ್ಲಿಮೆಂಟ್ ಸ್ಟ್ರೀಟ್ ಠಾಣೆ ಪೊಲೀಸರು ತನಿಖೆ ಆರಂಭಿಸಿದ್ದರಾದರೂ, ಇದೀಗ ತನಿಖೆಯನ್ನು ವಿಶೇಷ ತನಿಖಾ ತಂಡಕ್ಕೆ ವಹಿಸಲಾಗಿದ್ದು, ಭದ್ರತಾ ದೃಷ್ಟಿಯಿಂದ ಆರೋಪಿಗಳನ್ನು ಅಜ್ಞಾತ ಸ್ಥಳದಲ್ಲಿರಿಸಿ ವಿಶೇಷ ತನಿಖಾ ತಂಡದ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ. ಈ ಪ್ರಕರಣದಲ್ಲಿ ಆರೋಪಿಗಳು ದೆಹಲಿಗೆ ಬರುವ ಮುನ್ನಾ ಗುರುಗಾಂವ್‌ನ ವಿಶಾಲ್ ಅಲಿಯಾಸ್ ವಿಕ್ಕಿ ಎಂಬಾತನ ಮನೆಯಲ್ಲಿ ಇದ್ದರು ಎಂಬುದು ಪೊಲೀಸರ ತನಿಖೆಯಿಂದ ತಿಳಿದು ಬಂದ ಹಿನ್ನಲೆಯಲ್ಲಿ ಈಗಾಗಲೇ ವಿಶಾಲ್ ಮತ್ತು ಆತನ ಪತ್ನಿಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ದುಷ್ಕೃತ್ಯದಲ್ಲಿ ವಿಶಾಲ್ ಮತ್ತು ಆತನ ಪತ್ನಿಯ ಪಾತ್ರವಿದೆಯೇ? ಅಥವಾ ಅವರಿಗೆ ಈ ಕೃತ್ಯದ ಬಗ್ಗೆ ಗೊತ್ತಿರಲಿಲ್ಲವೇ? ಒಂದು ವೇಳೆ ಕೃತ್ಯದಲ್ಲಿ ಅವರೂ ಭಾಗಿಯಾಗಿದ್ದರೆ, ಅವರು ನಿರ್ವಹಿಸಿದ ಪಾತ್ರವೇನು ಎಂಬುದರ ಬಗ್ಗೆ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ. ಆದರೆ ಈ ದಂಪತಿಯನ್ನು ಈವರೆಗೂ ಅಧಿಕೃತವಾಗಿ ಬಂಧಿಸಿಲ್ಲ.

ಗುರುಗಾಂವ್‌ನಿಂದ ಡಿ.10ರಂದು ಎಲ್ಲಾ ನಾಲ್ವರು ಆರೋಪಿಗಳು ಪ್ರತ್ಯೇಕವಾಗಿ ದೆಹಲಿಗೆ ಬಂದು ಸೇರಿದ್ದಾರೆ. ಸಂಸತ್‌ನ ಹೊರ ಭಾಗದಲ್ಲಿ ಕಲರ್ ಗ್ಯಾಸ್ ಸಿಡಿಸಿದ್ದ ಅಮೋಲ್ ಶಿಂಧೆ ಗ್ಯಾಸ್ ಟಿನ್‌ಗಳನ್ನು ಖರೀಸಿದ್ದ ಎಂದು ಹೇಳಲಾಗಿದ್ದು, ಡಿ.12ರಂದು ಇಂಡಿಯಾ ಗೇಟ್ ಬಳಿ ನಾಲ್ವರು ಆರೋಪಿಗಳೂ ಭೇಟಿಯಾದಾಗ ಅವರಿಗೆ ಶಿಂಧೆ ಗ್ಯಾಸ್ ಟಿನ್‌ಗಳನ್ನು ನೀಡಿದ್ದ ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದೆ.

ಇಬ್ಬರಿಗೆ ಮಾತ್ರ ಪ್ರವೇಶಾವಕಾಶ: ಸಂಸತ್‌ನೊಳಗೆ ನಾಲ್ವರೂ ಪ್ರವೇಶಿಸಬೇಕೆಂದು ಯೋಜನೆ ರೂಪಿಸಿದ್ದರಾದರೂ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರ ದೆಹಲಿ ಕಚೇರಿಯಲ್ಲಿ ಇಬ್ಬರಿಗೆ ಮಾತ್ರ ಪ್ರೇಕ್ಷಕರ ಗ್ಯಾಲರಿ ಪಾಸ್ ದೊರೆತ ಕಾರಣ ಮನೋರಂಜನ್ ಮತ್ತು ಸಾಗರ್ ಶರ್ಮಾ ಮಾತ್ರ ಸಂಸತ್ ಪ್ರವೇಶಿಸಿದ್ದು, ಕಲರ್ ಗ್ಯಾಸ್ ಸಿಡಿಸುವ ಸಮಯವನ್ನು ಮೊದಲೇ ನಿಗದಿಪಡಿಸಿಕೊಂಡಿದ್ದ ಇವರು ಬುಧವಾರ ಮಧ್ಯಾಹ್ನ 1.02 ವೇಳೆಯಲ್ಲಿ ಸಂಸತ್ ಒಳಗೆ ಮನೋರಂಜನ್ ಕಲರ್ ಗ್ಯಾಸ್ ಸಿಡಿಸಿದರೆ, ಅದೇ ವೇಳೆಗೆ ಹೊರಗೆ ಅಮೋಲ್ ಶಿಂಧೆ ಮತ್ತು ನೀಲಂ ಅವರುಗಳು ಕೆಲ ಮೀಟರ್‌ಗಳ ಅಂತರದಲ್ಲಿ ಕಲರ್ ಗ್ಯಾಸ್ ಸಿಡಿಸಿದ್ದಾರೆ. ಇವರಿಬ್ಬರೂ ಸಂಸತ್ ಹೊರಗೆ ಕಲರ್ ಗ್ಯಾಸ್ ಸಿಡಿಸಿದ ವೇಳೆ ಅಲ್ಲಿನ ಭದ್ರತಾ ಸಿಬ್ಬಂದಿಗೆ ಸಂಸತ್ ಒಳಗೂ ಕಲರ್ ಗ್ಯಾಸ್ ಸಿಡಿದಿದೆ ಎಂಬುದು ಗೊತ್ತಿರಲಿಲ್ಲ. ಸುಮಾರು 15 ನಿಮಿಷದ ನಂತರ ಪಾರ್ಲಿಮೆಂಟ್ ಸ್ಟ್ರೀಟ್ ಪೊಲೀಸರಿಗೆ ಸಂಸತ್ ಒಳಗೆ ಕಲರ್ ಗ್ಯಾಸ್ ಸಿಡಿದಿರುವುದು ಗೊತ್ತಾಯಿತು. ಆ ವೇಳೆಗಾಗಲೇ ಅಮೋಲ್ ಶಿಂಧೆ ಮತ್ತು ನೀಲಂ ಅವರುಗಳನ್ನು ಪೊಲೀಸರು ಠಾಣೆಗೆ ಕರೆದೊಯ್ದಿದ್ದರು ಎಂದು ಮೂಲಗಳು ತಿಳಿಸಿವೆ.

ಸಾಮಾಜಿಕ ಜಾಲತಾಣದ ನಂಟು: ಆರೋಪಿಗಳೆಲ್ಲರೂ ಬೇರೆ ಬೇರೆ ರಾಜ್ಯದವರಾಗಿದ್ದರೂ ಇವರ ನಡುವೆ ಸಂಪರ್ಕ ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆಗೆ ಉತ್ತರ ದೊರೆತಿದೆ. ಇವರೆಲ್ಲರೂ 'ಭಗತ್ ಸಿಂಗ್ ಫ್ಯಾನ್ ಕ್ಲಬ್' ಎಂಬ ಪೇಜ್ ಅನ್ನು ಸಾಮಾಜಿಕ ಜಾಲತಾಣದಲ್ಲಿ ಕ್ರಿಯೇಟ್ ಮಾಡಿಕೊಂಡು ಅದರ ಮೂಲಕ ಪರಸ್ಪರ ಸಂವಹನ ನಡೆಸುತ್ತಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಈ ಹಿಂದೆ ಕೆಲಕಾಲ ಬೆಂಗಳೂರಿನ ಕಂಪೆನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಸಾಗರ್ ಶರ್ಮಾ ಆ ಸಂದರ್ಭದಲ್ಲಿ ಮೈಸೂರಿನ ಮನೋರಂಜನ್ ಜೊತೆ ಸಂಪರ್ಕ ಹೊಂದಿದ್ದ ಎಂದು ಹೇಳಲಾಗಿದ್ದು, ಕಳೆದ ಒಂದೂವರೆ ವರ್ಷದಲ್ಲಿ 2 ಬಾರಿ ಈತ ಮೈಸೂರಿಗೆ ಆಗಮಿಸಿದ್ದಾನೆ. ಮನೋರಂಜನ್ ಮನೆಗೂ ಕೂಡ ತೆರಳಿದ್ದ ಈತ ಅವರ ಮನೆಯಲ್ಲೇ ಊಟ ಮಾಡಿದ್ದ. ಭಾಷಾ ಸಮಸ್ಯೆಯಿಂದಾಗಿ ಮನೋರಂಜನ್ ಕುಟುಂಬದವರೊಂದಿಗೆ ಸಾಗರ್ ಶರ್ಮಾ ಹೆಚ್ಚು ಮಾತನಾಡಿರಲಿಲ್ಲ ಎಂಬುದು ತಿಳಿದು ಬಂದಿದೆ.

ಮನೋರಂಜನ್ ಡ್ರಾಪ್‌ಔಟ್ ವಿದ್ಯಾರ್ಥಿ: ಮೈಸೂರಿನ ಮನೋರಂಜನ್ ಬೆಂಗಳೂರಿನ ಬಿಐಟಿ ಕಾಲೇಜಿನಲ್ಲಿ ಇಂಜಿನಿಯರಿಂಗ್ ಪೂರೈಸಿದ್ದಾನೆ ಎಂದು ಆತನ ತಂದೆ ದೇವರಾಜೇಗೌಡರು ಬುಧವಾರ ಮಾಧ್ಯಮಗಳೊಂದಿಗೆ ಹೇಳಿದ್ದರು. ಆದರೆ ಈತ ಡ್ರಾಪ್ ಔಟ್ ಇಂಜಿನಿಯರಿಂಗ್ ವಿದ್ಯಾರ್ಥಿ ಎಂದು ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ. ಈತ ಸರಿಯಾಗಿ ತರಗತಿಗೂ ಹಾಜರಾಗುತ್ತಿರಲಿಲ್ಲ. ಹೀಗಾಗಿ ಆತನ ಬಗ್ಗೆ ನಮಗೆ ಅಷ್ಟೇನೂ ತಿಳಿದಿಲ್ಲ. ಆದರೆ ನಮ್ಮ ಕಾಲೇಜಿನ ವಿದ್ಯಾರ್ಥಿ ಈ ಕೃತ್ಯದಲ್ಲಿ ಭಾಗಿಯಾಗಿದ್ದಾನೆ ಎಂಬುದು ಗೊತ್ತಾಗುತ್ತಿದ್ದಂತೆಯೇ ನಾವು ಆತನಿಗೆ ಸಂಬಂಧಿಸಿದ ಶೈಕ್ಷಣಿಕ ದಾಖಲೆಗಳನ್ನು ಪರಿಶೀಲಿಸಿದಾಗ ಈತ 2 ವರ್ಷ ಮಾತ್ರ ವ್ಯಾಸಂಗ ಮಾಡಿ ಕಾಲೇಜು ಬಿಟ್ಟಿದ್ದ ಎಂಬುದು ಗೊತ್ತಾಗಿದೆ ಎಂದು ಪ್ರಾಂಶುಪಾಲರು ತಿಳಿಸಿದ್ದಾರೆ.

ಒಟ್ಟು 15 ಸಂಸದರು ಅಮಾನತು

ಬೇನಿ ಬಹನ್, ಕೆ ಸುಬ್ರ ಮಣ್ಯಂ, ಎಸ್‌ಆರ್ ಪ್ರತಿಬನ್, ಎಸ್ ವೆಂಕಟೇಶನ್, ಮೊಹ ಮ್ಮದ್ ಜಾವೇದ್, ಟಿಎನ್ ಪ್ರತಾಪನ್, ಹೈಬಿ ಈಡನ್, ಜೋತಿಮಣಿ, ರಮ್ಯಾ ಹರಿದಾಸ್, ಡೀನ್ ಕುರಿಯಾ ಕೋಸ್ ಅಮಾನತುಗೊಂಡ ಸಂಸದರಾಗಿದ್ದಾರೆ.

ಡಿ.13ರಂದು ಲೋಕಸಭೆಯ ಸಭಾಂ ಗಣಕ್ಕೆ ಜಿಗಿದ ಸಾಗರ್ ಶರ್ಮಾ, ಮನೋರಂಜನ್ ಎಂಬವರಿಂದ ಉಂಟಾದ ಭದ್ರತಾ ಲೋಪವನ್ನು ವಿರೋಧಿಸಿ ಕಾಂಗ್ರೆಸ್ ನೇತೃತ್ವದ ಪ್ರತಿಪಕ್ಷಗಳು ಕೋಲಾಹಲ ಸೃಷ್ಟಿಸಿ ಪ್ರತಿಭಟಿಸಿದ್ದರಿಂದ ಕಲಾಪಕ್ಕೆ ಅಡ್ಡಿಯಾಗಿತ್ತು.

ಪಂಪ್‌ಸೆಟ್ ಸಕ್ರಮ

ಶೋಭಾ ಕರಂದ್ಲಾಜೆ ಸಚಿವರಿ ದ್ದಾಗ 1.50 ಲಕ್ಷ ಕೃಷಿ ಪಂಪ್‌ಸೆಟ್‌ಗಳನ್ನು ಅಕ್ರಮ–ಸಕ್ರಮದಡಿ ಕ್ರಮಬದ್ಧಗೊಳಿಸಲು ತೀರ್ಮಾನಿಸಲಾಗಿತ್ತು. ಅಂದಿನಿಂದಲೂ ಸರ್ಕಾರಗಳು ಅನಧಿಕೃತ ಕೃಷಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸುವುದನ್ನು ಮುಂದುವರಿಸಿಕೊಂಡು ಬಂದಿವೆ. ರಾಜ್ಯದಲ್ಲಿ ವಿದ್ಯುತ್ ಪರಿವರ್ತಕಗಳ ಕೊರತೆ ಇಲ್ಲ. ಹಾನಿಯಾದ ವಿದ್ಯುತ್ ಪರಿವರ್ತಕಗಳನ್ನು ನಿಗದಿತ ಸಮಯದಲ್ಲಿ ಬದಲಾವಣೆ ಮಾಡಿಕೊಡಲಾಗುತ್ತಿದೆ.

ಆದರೂ ಕೆಲವು ಕಡೆ ಸಾಮರ್ಥ್ಯಕ್ಕಿಂತ ಹೆಚ್ಚಿನ ಒತ್ತಡ ಬೀಳುವುದರಿಂದ ಪದೇ ಪದೆ ಪರಿವರ್ತಕಗಳು ಹಾನಿಗೆ ಒಳಗಾಗುತ್ತಿವೆ ಎಂದರು.

ಅತಿಯಾಗಿ ಸಾಮಾಜಿಕ ಜಾಲತಾಣ ಬಳಸದೇ

ಸಾಂಸ್ಕೃತಿಕ ಚಟುವಟಿಕೆಯಲ್ಲಿ ತೊಡಗಿಕೊಳ್ಳಿ

ವಿದ್ಯಾರ್ಥಿಗಳಿಗೆ ಎಸಿಪಿ ಶಾಂತಮಲ್ಲಪ್ಪ ಕಿವಿಮಾತು



ಮೈಸೂರಿನ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಗುರುವಾರ ಅದಮ್ಯ ರಂಗಶಾಲೆಯ ವತಿಯಿಂದ ಆಯೋಜಿಸಿದ್ದ 'ಪಿಯುಸಿ ಪಠ್ಯಾಧಾರಿತ ರಂಗ ಪ್ರದರ್ಶನ' ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಉದಯೋನ್ಮುಖ ರಂಗಕರ್ಮಿ ಜಯಶ್ರೀ ಇಡ್ಕಿದು ಅವರಿಗೆ ಅದಮ್ಯ ರಂಗಚೇತನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು, ಡಿ.14(ಎಂಟಿವೈ)– ವಿದ್ಯಾರ್ಥಿಗಳು ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳಿಗೆ ದಾಸರಾಗಿ ತಮ್ಮ ಜೀವನ ಹಾಳು ಮಾಡಿಕೊಳ್ಳದೇ, ನಾಟಕ ಸೇರಿದಂತೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ಜೀವನ ಉಜ್ವಲಗೊಳಿಸಿಕೊಳ್ಳಲು ಮುಂದಾಗಬೇಕು ಎಂದು ದೇವರಾಜ ಉಪವಿಭಾಗದ ಎಸಿಪಿ ಶಾಂತಮಲ್ಲಪ್ಪ ಸಲಹೆ ನೀಡಿದ್ದಾರೆ.

ಮೈಸೂರಿನ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಗುರುವಾರ ಅದಮ್ಯ ರಂಗಶಾಲೆಯ ವತಿಯಿಂದ ಆಯೋಜಿಸಿದ್ದ 'ಪಿಯುಸಿ ಪಠ್ಯಾಧಾರಿತ ರಂಗ ಪ್ರದರ್ಶನ' ಹಾಗೂ 'ಅದಮ್ಯ ರಂಗ ಚೇತನ ಪ್ರಶಸ್ತಿ ಪ್ರದಾನ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಯುವ ಜನತೆ ಹಾಗೂ ವಿದ್ಯಾರ್ಥಿ ಸಮೂಹ ಮೊಬೈಲ್ ಬಳಕೆಗೆ ದಾಸರಾಗಿದ್ದಾರೆ. ಅಲ್ಲದೆ, ಮಿತಿ ಮೀರಿದ ಪ್ರಮಾಣದಲ್ಲಿ ಸಾಮಾಜಿಕ ಜಾಲತಾಣಗಳನ್ನು ಬಳಸುತ್ತಿದ್ದಾರೆ. ಇದರಿಂದ ವಿದ್ಯಾರ್ಥಿ ಹಾಗೂ ಯುವ ಜನತೆ ತಮ್ಮ ಅಮೂಲ್ಯ ಸಮಯವನ್ನು ವ್ಯಯ ಮಾಡುವುದರೊಂದಿಗೆ ತಮ್ಮ ಭವಿಷ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ ಎಂದು ವಿಷಾದಿಸಿದರು.

ವಿದ್ಯಾರ್ಥಿಗಳು ಪಠ್ಯಕ್ರಮದೊಂದಿಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಆಗ ಮಾತ್ರ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಸಾಧ್ಯ. ಸಾಮಾಜಿಕ, ಪೌರಾಣಿಕ ನಾಟಕಗಳಲ್ಲಿ ಅಭಿನಯಿಸಿದ ಬಳಿಕ ಪರಿಪಕ್ವತೆ ಪಡೆದುಕೊಂಡು ರಂಗಭೂಮಿ ಹಾಗೂ ಕನ್ನಡ ಚಲನಚಿತ್ರ ರಂಗದಲ್ಲಿ ಡಾ. ರಾಜ್‌ಕುಮಾರ್ ಸೇರಿದಂತೆ ಅನೇಕ ಮಂದಿ ಹಿರಿಯ ಕಲಾವಿದರು ಸಾಧನೆ ಮಾಡಿದ್ದಾರೆ. ಅದನ್ನು ಮಾದರಿಯಾಗಿಟ್ಟುಕೊಂಡು ರಂಗಚಟುವಟಿಕೆಯಲ್ಲಿ ಪಾಲ್ಗೊಳ್ಳಬೇಕು. ಮೊಬೈಲ್, ಸಾಮಾಜಿಕ ಜಾಲತಾಣಗಳ ಬಳಕೆ ತ್ಯಜಿಸಿ, ಗ್ರಂಥಾಲಯ ಹಾಗೂ ರಂಗ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು ಎಂದು ಸಲಹೆ ನೀಡಿದರು.

ಈ ಹಿಂದೆ ತೆರೆ ಕಾಣುತ್ತಿದ್ದ ಕನ್ನಡ ಚಲನಚಿತ್ರಗಳಲ್ಲಿ ಉತ್ತಮ ಸಂದೇಶ ನೀಡುವ ಕಥೆ ಇರುತ್ತಿತ್ತು. ಆದರೆ, ಈಗಿನ ಚಲನಚಿತ್ರಗಳು ಸಮಾಜಕ್ಕೆ ಯಾವುದೇ ಸಂದೇಶವನ್ನು ನೀಡುತ್ತಿಲ್ಲ. ಅಲ್ಲದೆ, ಯುವ ಜನರನ್ನು ಉದ್ರೇಕಿಸುವ ಸಂಗೀತ ಮತ್ತು ಸಾಹಿತ್ಯ ಹೊಂದಿವೆ. ಇದರಿಂದ ಯುವಜನರನ್ನು ಸರಿ ದಿಕ್ಕಿನಲ್ಲಿ ಕೊಂಡೊಯ್ಯಲು ಮಾರ್ಗದರ್ಶನ ನೀಡುವ ಚಲನಚಿತ್ರಗಳ ಅವಶ್ಯಕತೆ ಇದೆ ಎಂದರು.

ಇದೇ ವೇಳೆ ದಕ್ಷಿಣ ಕನ್ನಡ ಜಿಲ್ಲೆಯ ಉದಯೋನ್ಮುಖ ರಂಗಕರ್ಮಿ ಜಯಶ್ರೀ ಇಡ್ಕಿದು ಅವರಿಗೆ 'ಅದಮ್ಯ ರಂಗಚೇತನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎನ್.ಉದಯಶಂಕರ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಗೌರವಾಧ್ಯಕ್ಷ ಎ.ಎಲ್.ಉಮೇಶ್, ಪಾಲಿಕೆ ಮಾಜಿ ಸದಸ್ಯ ಪಿ.ಪ್ರಶಾಂತ್‌ಗೌಡ, ಅದಮ್ಯ ಶಾಲೆಯ ಗೌರವ ಕಾರ್ಯದರ್ಶಿ ಟಿ.ಸತೀಶ್ ಜವರೇಗೌಡ, ಅದಮ್ಯ ಶಾಲೆ ಸಂಸ್ಥಾಪಕ ಕಾರ್ಯದರ್ಶಿ ಚಂದ್ರು ಮಂಡ್ಯ, ಉಪನ್ಯಾಸಕಿ ಶಶಿಕಲಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಗೀತ್ ಸಂಗಮ್ ತಂಡದಿಂದ 'ಸ್ವರಧಾರಾ' ಸಂಗೀತ ರಸಸಂಜೆ



ಕವಿತಾ ಕಾಮತ್ | ನಿತ್ಯಾನಂದ ಕಾಮತ್ | ಕುಮಾರಸ್ವಾಮಿ | ಸುರೇಂದ್ರನ್ | ಹೆಡತಲೆ ನಾರಾಯಣ್ | ರವೀಂದ್ರ ಕುಮಾರ್

ಭರತ್‌ರಾಜ್ | ಗೀತಾರಾವ್ | ಜಯಲಕ್ಷ್ಮಿ ನಾಯ್ಡು | ಅನ್ನು ಮೂರ್ನಾಡ್ | ಚಂದ್ರು

ಮೈಸೂರು, ಡಿ. 14– ಮೈಸೂರಿನ ಜಗನ್ಮೋಹನ ಅರಮನೆಯ ಸಭಾಂಗಣದಲ್ಲಿ ಡಿ. 16 ರಂದು ಶನಿವಾರ ಸಂಜೆ 5.30ಕ್ಕೆ ಕವಿತಾ ಕಾಮತ್ ನೇತೃತ್ವದಲ್ಲಿ ಗೀತ್ ಸಂಗಮ್ ತಂಡದವರಿಂದ 'ಸ್ವರಧಾರಾ' ಸುಮಧುರ ಕನ್ನಡ ಹಾಗೂ ಹಿಂದಿ ಚಲನಚಿತ್ರ ಗೀತೆಗಳ ಸಂಗೀತ ರಸ ಸಂಜೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಈ ಸಂಗೀತ ಸಂಜೆಯಲ್ಲಿ ವೃತ್ತಿಪರ ಗಾಯಕರು ಅಲ್ಲದೆ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಉದಯೋನ್ಮುಖ ಗಾಯಕರು ಹಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಕವಿತಾ ಕಾಮತ್, ನಿತ್ಯಾನಂದ ಕಾಮತ್, ಹೆಡತಲೆ ನಾರಾಯಣ್, ಡಾ. ಸುರೇಂದ್ರನ್ ಕೆ.ಎ.ಕೆ., ಡಾ. ರವೀಂದ್ರ ಕುಮಾರ್, ಬಿ.ಎಸ್. ಕುಮಾರಸ್ವಾಮಿ, ಡಾ. ಭರತ್‌ರಾಜ್, ಜಯಲಕ್ಷ್ಮಿ ನಾಯ್ಡು, ಗೀತಾರಾವ್, ಚಂದ್ರು ಹಾಗೂ ಅನ್ನು ಮೂರ್ನಾಡ್ ಹಾಡಲಿದ್ದಾರೆ. ನಿರೂಪಣೆಯನ್ನು ಡಾ. ಆರ್.ಎಲ್. ಜಗದೀಶ್ ಮತ್ತು ಎಂ.ಆರ್. ಅನಿತಾ ನಿರ್ವಹಿಸಲಿದ್ದಾರೆ. ಸಾರ್ವಜನಿಕರಿಗೆ ಪ್ರವೇಶ ಉಚಿತವಾಗಿರುತ್ತದೆ.

ಅಭಿಮಾನ್ ಸ್ಟುಡಿಯೋದಲ್ಲಿ ವಿಷ್ಣು ಸ್ಮಾರಕಕ್ಕೆ ಆಗ್ರಹಿಸಿ ಡಿ.17ರಂದು ಪ್ರತಿಭಟನೆ



ಮೈಸೂರು, ಡಿ.14(ಜಿಎ)–ಬೆಂಗಳೂರಿನ ಅಭಿಮಾನ್ ಸ್ಟುಡಿಯೋದಲ್ಲಿ ನಟ ವಿಷ್ಣುವರ್ಧನ್ ಸ್ಮಾರಕ ನಿರ್ಮಾಣ ಮಾಡಬೇಕೆಂದು ಆಗ್ರಹಿಸಿ ವಿಷ್ಣುವರ್ಧನ್ ಅಭಿಮಾನಿಗಳ ಸಂಘಗಳ ಒಕ್ಕೂಟದಿಂದ ಡಿ.17ರಂದು ಬೆಂಗಳೂರಿನ ಸ್ವತಂತ್ರ ಉದ್ಯಾನದಲ್ಲಿ ಬೃಹತ್ ಪ್ರತಿಭಟನೆ ಆಯೋಜಿಸಲಾಗಿದೆ ಎಂದು ವಿಷ್ಣುಸೇನಾ ಸಮಿತಿ ಜಿಲ್ಲಾ ಘಟಕದ ಅಧ್ಯಕ್ಷ ಎಂ.ಡಿ. ಪಾರ್ಥಸಾರಥಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಷ್ಣುವರ್ಧನ್ ಅವರ ಸ್ಮಾರಕದ ವಿಚಾರವಾಗಿ ಕಳೆದ 14 ವರ್ಷಗಳಿಂದ ಸಾಕಷ್ಟು ಹೋರಾಟಗಳು ನಡೆದಿದ್ದು, ಈ ಕುರಿತು ನಟ ಬಾಲಕೃಷ್ಣ ಅವರ ಕುಟುಂಬಸ್ಥರ ಬಳಿಯೂ ಎರಡು ಎಕರೆ ಸ್ಥಳವನ್ನು ಸ್ಮಾರಕ ನಿರ್ಮಾಣಕ್ಕೆ ಬಿಟ್ಟು ಕೊಡುವಂತೆ ಮನವಿ ಮಾಡಿದ್ದು ಯಾವುದೇ ಪ್ರಯೋಜನವಾಗಿಲ್ಲ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸ್ಮಾರಕ ನಿರ್ಮಾಣಕ್ಕೆ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಏರ್ಪಡಿಸಿರುವ ಪ್ರತಿಭಟನೆಯಲ್ಲಿ ಮೈಸೂರಿನಿಂದ 30 ಸಾವಿರಕ್ಕೂ ಅಧಿಕ ಅಭಿಮಾನಿಗಳು ಭಾಗವಹಿಸಲಿದ್ದಾರೆ. ಈ ಕುರಿತು ಡಿ.15ರಂದು ಸಂಜೆ 5:30ಕ್ಕೆ ಚಾಮುಂಡಿಪುರಂನ ಅಪೂರ್ವ ಹೋಟೆಲ್ ನಲ್ಲಿ ಪೂರ್ವಭಾವಿ ಸಭೆ ಆಯೋಜಿಸ ಲಾಗಿದೆ ವಿಷ್ಣು ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಗೌರವಾಧ್ಯಕ್ಷ ಮದನ್ ಕುಮಾರ್, ಸದಸ್ಯರಾದ ಲಯನ್ ಸುರೇಶ್, ಮಹೇಂದರ್, ಸಿದ್ದಪ್ಪ ಸಂತೋಷ್, ಪರಮೇಶ್, ಬಾಬು ಉಪಸ್ಥಿತರಿದ್ದರು.

ಡಿ.16ರಿಂದ ಶ್ರೀ ಅಯ್ಯಪ್ಪ ಸ್ವಾಮಿ ದೇವಾಲಯದ ವಾರ್ಷಿಕೋತ್ಸವ



ಮೈಸೂರು, ಡಿ.14(ಜಿಎ)–ನಗರದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿಯ ಶ್ರೀ ಅಯ್ಯಪ್ಪ ಸ್ವಾಮಿ ಮತ್ತು ಶ್ರೀ ಗುರುವಾಯೂರಪ್ಪನ್ ದೇವಾಲಯದ 63ನೇ ವಾರ್ಷಿಕ ಪೂಜಾ ಮಹೋತ್ಸವ ಡಿ.16ರಿಂದ ನಾಲ್ಕು ದಿನ ನಡೆಯಲಿದೆ ಎಂದು ಸಮಿತಿಯ ಕಾರ್ಯ ದರ್ಶಿ ಆರ್.ಹರಿದಾಸ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 63ನೇ ವಾರ್ಷಿಕ ಪೂಜಾ ಮಹೋತ್ಸವದಂದು ಪಳ್ಳಿಯುಣರ್ತಲ್, ಗಣಪತಿ ಹೋಮ, ತುಪ್ಪದ ಅಭಿಷೇಕ ವಾದ್ಯದೊಂದಿಗೆ ಶ್ರೀ ಅಯ್ಯಪ್ಪ ಸ್ವಾಮಿಗೆ ಅಲಂಕಾರ ಪೂಜಾ, ಎಡಕ್ಕದೊಂದಿಗೆ ಅಷ್ಟಪತಿ ಗಾನಂ, ವಾದ್ಯಕಲಾರತ್ನ ಪಯ್ಯಾವೂರು ಗೋಪಾಲನ್ ಕುಟ್ಟಿ ಮಾರಾರ್ ಮತ್ತು ವೃಂದದವರಿಂದ ಪಾಂಡಿಮೇಳದೊಂದಿಗೆ ದೇವಸ್ಥಾನದಲ್ಲಿ ದೇವರ ಉತ್ಸವ ಹಾಗೂ ಅಯ್ಯಪ್ಪನ್ ಕುಡಿಯಿರುತ್ತಲ್ ವಿವಿಧ ಪೂಜಾ ಕೈಂಕರ್ಯಗಳು ಗುರುವಾಯೂರು ತಂತ್ರಿಗಳಾದ ಡಾ.ಚೆನ್ನಾಸ್ ದಿನೇಶನ್ ನಂಬೂದಿರಿ ಪಾಡ್ ನೇತೃತ್ವದಲ್ಲಿ ನಡೆಯಲಿದೆ ಎಂದರು.

ಮಧ್ಯಾಹ್ನ 3.30ಕ್ಕೆ ವಿದ್ಯಾರಣ್ಯಪುರಂನಲ್ಲಿರುವ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಿಂದ ಪಾಲಕ್ಕೊಂಬು ಮೆರವಣಿಗೆ ಜೊತೆಗೆ ನಂದಿಕಂಬ, ಮೈಸೂರು ಯದುಕುಮಾರ್ ಮತ್ತು ತಂಡದವರಿಂದ ನಾದಸ್ವರ ಮಂಗಳ ವಾದ್ಯದೊಂದಿಗೆ ಪಂಚವಾದ್ಯ, ಕೀಲುಕುರೆ, ವೆಲಿಚಪ್ಪಾಡ್ ನೃತ್ಯದೊಂದಿಗೆ ಚಾಮುಂಡಿಪುರಂ, ನಂಜುಮಳಿಗೆ ವೃತ್ತ, ತ್ಯಾಗರಾಜ ವೃತ್ತ, ಬಸವೇಶ್ವರ ಸರ್ಕಲ್, ನಂಜನಗೂಡು ರಸ್ತೆಗೆ ಬಂದು ದೇವಾಲಯ ತಲುಪಲಿದ್ದು, ಡಿ.17ರಂದು ಧ್ವಜಾರೋಹಣ, ವಾಸ್ತುಹೋಮ, ವಾಸ್ತಕಳಶ ಪೂಜಾ, ವಾಸ್ತು ಬಲಿ, ರಕ್ಷೋಘ್ನ ಹೋಮ ಇತ್ಯಾದಿ ಕಾರ್ಯಕ್ರಮ ಜರುಗಲಿವೆ. ಡಿ.18, 19 ರಂದು ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿಯ ಉಪಾಧ್ಯಕ್ಷ ಕೃಷ್ಣೋಜಿರಾವ್, ಖಜಾಂಚಿ ಎನ್. ಸುರೇಶನ್, ಉಸ್ತುವಾರಿ ಸುನೀಲ್ ಕುಮಾರ್, ಎ.ಎಸ್.ಅಪ್ಪು, ಕೆ.ಎನ್.ಬಸವರಾಜು ಉಪಸ್ಥಿತರಿದ್ದರು.

ಉಪ್ಪಾರ ನೌಕರರ ಸಂಘದಿಂದ ಪ್ರತಿಭಾ ಪುರಸ್ಕಾರ



ಮೈಸೂರು, ಡಿ.14(ಜಿಎ)–ಮೈಸೂರು ಜಿಲ್ಲಾ ಉಪ್ಪಾರ ನೌಕರರ ಮತ್ತು ವೃತ್ತಿಪರರ ಸಂಘದಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಮುದಾಯದ ನಾನಾ ಸಾಧಕರಿಗೂ ಪ್ರಶಸ್ತಿ ಪ್ರದಾನವನ್ನು ಡಿ.17 ರಂದು ಆಯೋಜಿಸಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಲಿಂಗಣ್ಣ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕಲಾಮಂದಿರದಲ್ಲಿ ಬೆಳಗ್ಗೆ 10.30ಕ್ಕೆ ಕಾರ್ಯಕ್ರಮವನ್ನು ಶಾಸಕ ಪುಟ್ಟರಂಗಶೆಟ್ಟಿ ಉದ್ಘಾಟಿಸಲಿದ್ದು, ಚಿತ್ರದುರ್ಗದ ಭಗೀರಥ ಪೀಠದ ಶ್ರೀ ಡಾ.ಪುರುಷೋತ್ತಮಾನಂದಪುರಿ ಸ್ವಾಮೀಜಿ, ಮಂಡ್ಯ ಜಿಲ್ಲೆಯ ಸರಗೂರು ಮಠದ ಶ್ರೀ ಮಹದೇವಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಉಪ್ಪಾರ ನಿಗಮದ ಮಾಜಿ ಅಧ್ಯಕ್ಷ ಗಿರೀಶ್ ಭಗೀರಥ ಮಹರ್ಷಿ ಅವರ ಭಾವಚಿತ್ರ ಅನಾವರಣ ಮಾಡಲಿದ್ದು ಅನೇಕ ಗಣ್ಯರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಇದೇ ವೇಳೆ ಕಲೆ, ಕೃಷಿ, ಸಮಾಜ ಸೇವೆ, ಯೋಗ, ಕ್ರೀಡೆಯಲ್ಲಿ ಸಾಧನೆ ಮಾಡಿದ ಅನೇಕರಿಗೆ ಭಗೀರಥ ಸೇವಾ ಪ್ರಶಸ್ತಿ ಪ್ರದಾನ ಮತ್ತು 310 ಮಂದಿ ವಿದ್ಯಾರ್ಥಿಗಳಿಗೆ ಸಾವಿರ ರೂ. ನಗದು ಪುರಸ್ಕಾರ ಹಾಗೂ ವಿವಿಧ ಕ್ಷೇತ್ರದ ಸಾಧಕರನ್ನು ಅಭಿನಂದಿಸಲಾಗುತ್ತದೆ. ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಭಾಗದ ಜಿಲ್ಲೆಗಳಿಂದ ಸಮುದಾಯದ ಜನರು ಭಾಗವಹಿಸುವಂತೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಟಿ.ಆರ್. ಶಿವರಾಜು, ಖಜಾಂಚಿ ಗೋವಿಂದರಾಜು, ಗೌ.ಅಧ್ಯಕ್ಷ ಜವರಶೆಟ್ಟಿ, ಗೌ.ಸಲಹೆಗಾರ ಮಹದೇವ ಶೆಟ್ಟಿ ಉಪಸ್ಥಿತರಿದ್ದರು.

ಜಲ ಮರುಪೂರಣ ಕಾರ್ಯಕ್ರಮ

ಮೈಸೂರು, ಡಿ. 14– ಕಾರ್ಲ್ಸ್ ಬರ್ಗ್ ಇಂಡಿಯಾ ಮತ್ತು ವಾಟರ್ ಏಡ್ ಇಂಡಿಯಾ ಮೈಸೂರಿನ ನಂಜನಗೂಡು ತಾಲೂಕಿನ ನೀರಿನ ಕೊರತೆ ಇರುವ ಪ್ರದೇಶದಲ್ಲಿ ಮೂರು ವರ್ಷಗಳ ಜಲ ಮರುಪೂರಣ ಕಾರ್ಯಕ್ರಮವನ್ನು ಪ್ರಾರಂಭಿಸಿವೆ. ಕಾರ್ಲ್ಸ್ ಬರ್ಗ್ ಮತ್ತು ವಾಟರ್ ಏಡ್‌ಗಳ ಸಹಯೋಗದ ಪ್ರಯತ್ನಗಳು ತಗಡೂರು, ಕಾರ್ಯ, ದೇವನೂರು, ಬದನವಾಳು ಮತ್ತು ನೇರಳೆ ಐದು ಗ್ರಾಮ ಪಂಚಾಯಿತಿಗಳ 34,000ಕ್ಕೂ ಹೆಚ್ಚು ಜನರಿಗೆ ಸಕಾರಾತ್ಮಕವಾಗಿ ಪರಿಣಾಮ ಬೀರುವ ನಿರೀಕ್ಷೆ ಇದೆ ಎಂದು ಕಾರ್ಲ್ಸ್ ಬರ್ಗ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ನೀಲೇಶ್ ಪಟೇಲ್ ತಿಳಿಸಿದ್ದಾರೆ. ಈ ಕಾರ್ಯಕ್ರಮವು ಜೌಗು ಪ್ರದೇಶದ ಸಂರಕ್ಷಣೆ, ಮೂಲ ಸುಸ್ಥಿರತೆಯ ಕ್ರಮಗಳು, ತ್ಯಾಜ್ಯ ನೀರಿನ ನಿರ್ವಹಣೆ ಮತ್ತು ಸುಸ್ಥಿರ ಕೃಷಿ ಮಧ್ಯಪ್ರವೇಶಗಳಂತಹ ಪ್ರಮುಖ ಆಯಾಮಗಳಿಗೆ ಆದ್ಯತೆ ನೀಡುತ್ತದೆ. ಸ್ಪಷ್ಟವಾದ ನೀರು ಸಂರಕ್ಷಣೆಯ ಉಪಕ್ರಮಗಳ ಆಚೆಗೂ ಈ ಸಹಯೋಗವು ಅರಿವಿನ ಅಭಿಯಾನಗಳು, ತರಬೇತಿ ಕಾರ್ಯಕ್ರಮಗಳು ಮತ್ತು ಒಮ್ಮುಖ ಸಭೆಗಳ ಮೂಲಕ ಸಮುದಾಯದ ಒಳಗಡೆ ಪ್ರಮುಖ ಪಾಲುದಾರರನ್ನು ಸಕ್ರಿಯವಾಗಿ ತೊಡಗಿಸುತ್ತದೆ ಎಂದರು.

ಹೆರಿಟೇಜ್ ಗಾಲ್ಫ್ ಪ್ರೈ. ಲಿಮಿಟೆಡ್‌ಗೆ ಭೂಮಿ ನೀಡಿದ ರೈತರಿಗೆ ಪರಿಹಾರ, ಬೇನಾಮಿಯಾಗಿ ಭೂಮಿ ಖರೀದಿಸಿದವರ ವಿರುದ್ಧ ಕ್ರಮಕ್ಕಾಗಿ ರೈತರ ಪಾದಯಾತ್ರೆ



ಮೈಸೂರು,ಡಿ.14(ಎಂಟಿವೈ)– ಹೆರಿಟೇಜ್ ಗಾಲ್ಫ್ ಪ್ರೈ ಲಿಮಿಟೆಡ್ ಕಂಪನಿ ನಿರ್ಮಾಣಕ್ಕಾಗಿ ಭೂಮಿ ನೀಡಿದ ರೈತರಿಗೆ ಪರಿಹಾರ ನೀಡುವಂತೆ ಹಾಗೂ ಬೇನಾಮಿ ಹೆಸರಲ್ಲಿ ಭೂಮಿ ಖರೀದಿಸಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ, ಭೂಮಿ ಕಳೆದುಕೊಂಡ ರೈತರು ಕೋಚನಹಳ್ಳಿಯಿಂದ ಮೈಸೂರಿಗೆ ಹಮ್ಮಿಕೊಂಡಿದ್ದ ಪಾದಯಾತ್ರೆ ಮಾರ್ಗಮಧ್ಯೆ ಪೊಲೀಸರು ನೀಡಿದ ಭರವಸೆಯಿಂದ ಮೊಟಕುಗೊಂಡಿತು.

ಮೈಸೂರು ತಾಲೂಕಿನ ಕೋಚನಹಳ್ಳಿಯಿಂದ ಮೈಸೂರಿನ ಪೊಲೀಸ್ ವರಿಷ್ಠಾಧಿಕಾರಿ ಕಚೇರಿವರೆಗೆ ರೈತ ಸಂಘ, ದಲಿತ ಸಂಘರ್ಷ ಸಮಿತಿ, ಸ್ವರಾಜ್ ಇಂಡಿಯಾ ಹಾಗೂ ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ ಪಾದಯಾತ್ರೆ ನಡೆಸಲು ಕಂಪನಿಗಾಗಿ ಭೂಮಿ ನೀಡಿದ್ದ ರೈತರು ಉದ್ದೇಶಿಸಿದ್ದರು. ಕೋಚನಹಳ್ಳಿಯಿಂದ ಪಾದಯಾತ್ರೆಯಲ್ಲಿ ಬರುತ್ತಿದ್ದ ರೈತರೊಂದಿಗೆ ಡಿವೈಎಸ್ಪಿ ಕರೀಂ ರಾವುತರ್ ಹಾಗೂ ದಕ್ಷಿಣ ಗ್ರಾಮಾಂತರ ಠಾಣೆಯ ಇನ್ಸ್‌ಪೆಕ್ಟರ್ ಜಿ.ಶೇಖರ್ ಕಡಕೊಳದಲ್ಲಿರುವ ಉಪ ಪೊಲೀಸ್ ಠಾಣೆ ಆವರಣದಲ್ಲಿ ಚರ್ಚಿಸಿದರು.

ಈ ವೇಳೆ ರೈತ ಸಂಘ ಮುಖಂಡ ಹೊಸಕೋಟೆ ಬಸವರಾಜು ಮಾತನಾಡಿ, 2003–04ನೇ ಸಾಲಿನಲ್ಲಿ ಕೋಚನಹಳ್ಳಿ ಗ್ರಾಮದ 125 ರೈತ ಕುಟುಂಬದಿಂದ 400 ಎಕರೆ ಭೂಮಿಯನ್ನು ಹೆರಿಟೇಜ್ ಗಾಲ್ಫ್ ಪ್ರೈ ಲಿಮಿಟೆಡ್ ಕಂಪನಿಯ ನಿರ್ಮಾಣಕ್ಕೆ ಕಡಿಮೆ ಬೆಲೆಗೆ ಖರೀದಿಸಿದ್ದರು. ಭೂಮಿ ನೀಡಿದ ರೈತರಿಗೆ ಉದ್ಯೋಗ ನೀಡುವುದಾಗಿ ಒಪ್ಪಿಗೆ ಸೂಚಿಸಲಾಗಿತ್ತು. ಆದರೆ, ಖರೀದಿಸಿದ ಭೂಮಿಯಲ್ಲಿ ಯಾವುದೇ ಕಂಪನಿ ಸ್ಥಾಪಿಸಿಲ್ಲ. ಈ ಭೂಮಿ ಪೈಕಿ 189 ಎಕರೆಯನ್ನು ಕಂಪನಿಯ ನಿರ್ದೇಶಕರು ಬೇನಾಮಿ ಹೆಸರಿನಲ್ಲಿ ಖರೀದಿಸಿದ್ದಾರೆ. ಇದರಿಂದ ರೈತರಿಗೆ ಅನ್ಯಾಯವಾಗಿದೆ. ಸರಿಯಾದ ಬೆಲೆಯೂ ನೀಡದೆ, ಕಂಪನಿ ಸ್ಥಾಪಿಸಿ ಉದ್ಯೋಗ ನೀಡಿಲ್ಲ. ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ನ್ಯಾಯಕ್ಕಾಗಿ ಆಗ್ರಹಿಸಿ 965 ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಕಿಡಿಕಾರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮೈಸೂರು ಗ್ರಾಮಾಂತರ ಡಿವೈಎಸ್‌ಪಿ ಕರೀಂ ರಾವುತರ್ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ಶೇಖರ್ ಅವರು, ಬೇನಾಮಿ ಹೆಸರಲ್ಲಿ ಆಸ್ತಿ ಖರೀದಿಸಿರುವವರ ವಿರುದ್ಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸುತ್ತೇವೆ ಎಂದು ಭರವಸೆ ನೀಡಿದರು. ಇದಕ್ಕೆ ರೈತರು ಸಮ್ಮತಿಸಿ ಪಾದಯಾತ್ರೆ ಮೊಟಕುಗೊಳಿಸಿದರಲ್ಲದೆ, ಆದಷ್ಟು ಶೀಘ್ರವಾಗಿ ಪ್ರಕರಣ ದಾಖಲಿಸದಿದ್ದರೆ ಹೋರಾಟ ಮುಂದುವರೆಸುವುದಾಗಿ ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಚಂದ್ರಶೇಖರ್ ಮೇಟಿ, ಉಗ್ರ ನರಸಿಂಹಗೌಡ, ಬೊಕ್ಕಳ್ಳಿ ನಂಜುಂಡಸ್ವಾಮಿ, ಪಿ.ಮರಂಕಯ್ಯ, ಮಂಡಕಳ್ಳಿ ಮಹೇಶ್, ನೇತ್ರಾವತಿ, ರಾಘವೇಂದ್ರ, ಚಂದ್ರಶೇಖರ್, ಮಹೇಶ್, ಮುದ್ದು ರಾಜು, ಜೆ.ಸ್ವಾಮಿ, ಚಲುವ ರಾಜು ಇನ್ನಿತರರು ಪಾಲ್ಗೊಂಡಿದ್ದರು.



ಗೋವಾ ಚಿತ್ರೋತ್ಸವದಲ್ಲಿ 'ಗ್ರೇ ಗೇಮ್ಸ್'

ವಿಜಯ್ ರಾಘವೇಂದ್ರ ಅಭಿನಯದ 'ಗ್ರೇ ಗೇಮ್ಸ್' ಚಿತ್ರವು ಇತ್ತೀಚೆಗೆ ಗೋವಾದಲ್ಲಿ ನಡೆದ 54ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ರೆಡ್ ಕಾರ್ಪೆಟ್ ಗಾಲಾ ಪ್ರೀಮಿಯರ್ ವಿಭಾಗದಲ್ಲಿ ಪ್ರದರ್ಶನಗೊಂಡು ವಿಮರ್ಶಕರ ಮೆಚ್ಚುಗೆಗೆ ಪಾತ್ರವಾಗಿದೆ, ರಾಜ್ಯ ಪ್ರಶಸ್ತಿ ವಿಜೇತ ನಿರ್ದೇಶಕ ಗಂಗಾಧರ್ ಸಾಲಿಮಠ್ ನಿರ್ದೇಶನ ಈ ಚಿತ್ರಕ್ಕಿದೆ.

ಮೆಟಾವರ್ಸ್ ಮತ್ತು ಆನ್‌ಲೈನ್ ಗೇಮಿಂಗ್ ವೈಷಮ್ಯದ ಹಿನ್ನೆಲೆಯಲ್ಲಿ ನಿರ್ಮಾಣವಾಗಿರುವ 'ಗ್ರೇ ಗೇಮ್ಸ್' ಚಿತ್ರದಲ್ಲಿ ವಿಜಯ್ ರಾಘವೇಂದ್ರ ಒಬ್ಬ ಸೈಕಾಲಜಿಸ್ಟ್ ಪಾತ್ರದಲ್ಲಿ ಕಾಣಿಸಿಕೊಂಡರೆ, ಭಾವನಾರಾವ್ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದಾರೆ. ಶ್ರುತಿಪ್ರಕಾಶ್ ಚಿತ್ರದಲ್ಲಿ ಒಬ್ಬ ನಟಿಯಾಗಿ ಅಭಿನಯಿಸಿದ್ದು, ವಿಜಯ್ ರಾಘವೇಂದ್ರ ಅವರ ಅಕ್ಕನ ಮಗ ಜೈ ಒಬ್ಬ ಗೇಮರ್ ಆಗಿ ಕಾಣಿಸಿಕೊಂಡಿದ್ದಾರೆ.

ಚಿತ್ರೋತ್ಸವದಲ್ಲಿ ನಮ್ಮ ಚಿತ್ರಕ್ಕೆ ಸಿಕ್ಕ ಪ್ರೋತ್ಸಾಹ ಮತ್ತು ವಿಮರ್ಶೆಗಳಿಂದ ನಿಜಕ್ಕೂ ಖುಷಿಯಾಗಿದೆ. ಇದೊಂದು ಫ್ಯಾಮಿಲಿ ಸಸ್ಪೆನ್ಸ್ ಡ್ರಾಮಾ ಚಿತ್ರವಾಗಿದ್ದು, ವರ್ಚ್ಯುಯಲ್ ಮತ್ತು ನೈಜತೆಯ ನಡುವೆ ಯಾವುದು ಸರಿ, ಯಾವುದು ತಪ್ಪು ಎಂಬ ನಮ್ಮ ದೃಷ್ಟಿಕೋನದ ಕುರಿತು ಸವಾಲು ಎಸೆಯುವಂತಿದೆ ಎಂದು ನಿರ್ದೇಶಕ ಗಂಗಾಧರ್ ಸಾಲಿಮಠ್ ಹೇಳಿದ್ದಾರೆ, 'ಗ್ರೇ ಗೇಮ್ಸ್' ಚಿತ್ರಕ್ಕೆ ಸರೀಶ್ ಗ್ರಾಮಪುರೋಹಿತ್, ಅರವಿಂದ್ ಜೋಷಿ ಮತ್ತು ಡೋಲೇಶ್ವರ್‌ರಾಜ್ ಸುಂಕು ಸಹ ನಿರ್ಮಾಪಕರಾಗಿದ್ದು, ಈ ಚಿತ್ರವು ಫೆಬ್ರವರಿ 2024ಕ್ಕೆ ಬಿಡುಗಡೆಯಾಗಲಿದೆ.



ಬಂಡೆ ಮಹಾಂಕಾಳಿ ಸನ್ನಿಧಿಯಲ್ಲಿ 'ಕದನ ವಿರಾಮ'

ವಿಭಿನ್ನ ಶೀರ್ಷಿಕೆಯ ಮೂಲಕ ಚಿತ್ರರಸಿಕರ ಗಮನ ಸೆಳೆಯುತ್ತಿರುವ ಸಿನಿಮಾಗಳ ಸಾಲಿಗೆ ಈಗ 'ಕದನ ವಿರಾಮ' ಸೇರ್ಪಡೆಯಾಗಿದೆ. ಶ್ರೀ ಬ್ರಹ್ಮಲಿಂಗೇಶ್ವರ ಫಿಲಂಸ್ ಲಾಂಛನದಲ್ಲಿ ಕೆ.ಭಾಸ್ಕರ್ ನಾಯ್ಕ್ (ಮಾರಣಕಟ್ಟೆ) ಹಾಗೂ ಸಾಮ್ರಾಟ್ ಮಂಜುನಾಥ್.ವಿ (ಗರುಡಾಚಾರ್‌ಪಾಳ್ಯ) ಸೇರಿ ನಿರ್ಮಿಸುತ್ತಿರುವ ಹಾಗೂ ಮುರಳಿ ಎಸ್.ವೈ. ಅವರ ನಿರ್ದೇಶನವಿರುವ 'ಕದನ ವಿರಾಮ' ಚಿತ್ರದ ಮುಹೂರ್ತ ಸಮಾರಂಭ ಇತ್ತೀಚೆಗೆ ಬೆಂಗಳೂರಿನ ಬಂಡೆ ಮಹಾಂಕಾಳಿ ದೇವಸ್ಥಾನದಲ್ಲಿ ನೆರವೇರಿತು. ಚಿತ್ರದ ಮೊದಲ ಸನ್ನಿವೇಶಕ್ಕೆ ಬಿಲ್ಡರ್ ಸುರೇಶ್ ಅವರು ಆರಂಭ ಫಲಕ ತೋರಿಸಿದರೆ, ಉದ್ಯಮಿ ಚಿಕ್ಕಣ್ಣ ಕ್ಯಾಮೆರಾ ಚಾಲನೆ ಮಾಡಿದರು.

ಮುಹೂರ್ತದ ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಿರ್ದೇಶಕ ಮುರಳಿ ಎಸ್.ವೈ ಇದು ರಿವೀಲ್ ಚಿತ್ರದ ನಂತರ ನಾನು ನಿರ್ದೇಶಿಸುತ್ತಿರುವ ಎರಡನೇ ಚಿತ್ರ. 'ಕದನ ವಿರಾಮ' ಎಂದರೆ ಭೂಮಿ ಹಾಗೂ ಮನುಷ್ಯನ ನಡುವೆ ನಡೆಯುವ ಕಥೆ (ಲ್ಯಾಂಡ್ ವಿಚಾರವಾಗಿ). ನಿರ್ಮಾಪಕ ಭಾಸ್ಕರ್‌ನಾಯ್ಕ್ ಅವರೇ ಚಿತ್ರದ ಕಥೆಯನ್ನು ಬರೆದಿದ್ದಾರೆ. ನಾನು ಚಿತ್ರಕಥೆ ಹಾಗೂ ಸಂಭಾಷಣೆಗಳನ್ನು ಬರೆದಿದ್ದೇನೆ. ವಿಭಿನ್ನವಾದ ಐದು ಹಾಡುಗಳು ಹಾಗೂ ನಾಲ್ಕು ಸಾಹಸ ಸನ್ನಿವೇಶಗಳು ಈ ಚಿತ್ರದಲ್ಲಿದೆ. ವಿ.ಮನೋಹರ್ ಅವರ ಸಂಗೀತ ನಿರ್ದೇಶನ ಹಾಗೂ ರಿಜೊ ಪಿ.ಜಾನ್ ಅವರ ಛಾಯಾಗ್ರಹಣ ಕದನವಿರಾಮ ಚಿತ್ರಕ್ಕಿದೆ. ಈ ತಿಂಗಳ ಕೊನೆಯಲ್ಲಿ ಚಿತ್ರದ ಚಿತ್ರೀಕರಣವನ್ನು ಆರಂಭಿಸುತ್ತಿದ್ದು, ಬಹುತೇಕ ಚಿತ್ರೀಕರಣವನ್ನು ಕುಂದಾಪುರದ ಸುತ್ತಮುತ್ತಲ ಪ್ರದೇಶಗಳಲ್ಲಿ ನಡೆಸಲಿದ್ದೇವೆ ಎಂದು ಹೇಳಿದರು.

ಯುವನಟ ಆಕಾಶ್ ಶೆಟ್ಟಿ ಈ ಚಿತ್ರದಲ್ಲಿ ನಾಯಕನಾಗಿ ನಟಿಸುತ್ತಿದ್ದಾರೆ. ಈ ಹಿಂದೆ ನವರಂಗಿ ಸೇರಿದಂತೆ ಎರಡು ಚಿತ್ರಗಳಲ್ಲಿ ನಟಿಸಿದ್ದ ಇವರಿಗಿದು ಮೂರನೇ ಚಿತ್ರ. ಏಳು ವರ್ಷಗಳ ನಂತರ ಆಕಾಶ್‌ಶೆಟ್ಟಿ ಚಿತ್ರರಂಗಕ್ಕೆ ವಾಪಸ್ಸಾಗಿದ್ದಾರೆ. ನಟಿ ಛಾಯಾಶ್ರೀ ಅವರು 'ಕದನ ವಿರಾಮ' ಚಿತ್ರದಲ್ಲಿ ನಾಯಕಿಯಾಗಿ ಕಾಣಿಸಿಕೊಳ್ಳಲಿದ್ದಾರೆ, ಅಲ್ಲದೆ ಕನ್ನಡ ಚಿತ್ರರಂಗದ ಹೆಸರಾಂತ ಕಲಾವಿದರು ಈ ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ.



ಕೌತುಕದ ಕಿಡಿ ಹೊತ್ತಿಸಿದ 'ಕೆಂಡ' ಟೀಸರ್

ಕನ್ನಡದಲ್ಲಿ ಮಹಿಳಾ ನಿರ್ದೇಶಕಿಯರ ಸಂಖ್ಯೆ ಕಡಿಮೆಯೇ. ರೂಪಾ ಅಯ್ಯರ್, ಕವಿತಾ ಲಂಕೇಶ್, ರೂಪಾರಾವ್ ಹೀಗೆ ಕೆಲವರಷ್ಟೇ ಕಂಡುಬರುತ್ತಾರೆ. ಹೀಗೆ ನಿರ್ದೇಶಕಿಯಾಗಿ ಚಿತ್ರರಂಗಕ್ಕೆ ಬಂದ ರೂಪಾರಾವ್ ಈಗ 'ಕೆಂಡ' ಚಿತ್ರದ ಮೂಲಕ ನಿರ್ಮಾಪಕಿಯೂ ಆಗಿದ್ದಾರೆ. ವಿಭಿನ್ನ ಕಥಾಹಂದರ ಹೊಂದಿರುವ ಈ ಚಿತ್ರದ ಟೀಸರ್ ಇತೀಚೆಗಷ್ಟೇ ಬಿಡುಗಡೆಯಾಗಿದೆ. ಮಾಸ್ ಕ್ಲಾಸ್ ಸೇರಿ ಎಲ್ಲ ಎಂಟರ್‌ಟೈನಿಂಗ್ ಅಂಶಗಳನ್ನೂ ಒಳಗೊಂಡಿರುವ, ಗಹನವಾದ ಕಥೆಯ ಸುಳಿವಿನೊಂದಿಗೆ ಹೊರಬಂದಿರುವ 'ಕೆಂಡ' ಟೀಸರ್ ಪ್ರೇಕ್ಷಕರ ಗಮನ ಸೆಳೆಯುತ್ತಿದೆ.

ಸಾಮಾನ್ಯ ಹುಡುಗನೊಬ್ಬ ವ್ಯವಸ್ಥೆಯ ಅಡಕತ್ತರಿಗೆ ಸಿಕ್ಕು ಅಸಾಮಾನ್ಯವಾಗಿ ಝೇಂಕರಿಸುವ ಕಥಾಹಂದರ 'ಕೆಂಡ' ಚಿತ್ರದ ಜೀವಾಳ. ಈ ಬಗ್ಗೆ ಹಿಂದೆಯೇ ಚಿತ್ರತಂಡ ಒಂದಷ್ಟು ಮಾಹಿತಿ ಬಿಟ್ಟು ಕೊಟ್ಟಿತ್ತು. ಇದೀಗ ಕಥೆಯ ಒಟ್ಟಾರೆ ಸುಳಿವನ್ನು ಬಚ್ಚಿಟ್ಟುಕೊಂಡು ಇಡೀ ಸಿನಿಮಾದ ಆಂತರ್ಯವನ್ನು ಟೀಸರ್ ಮೂಲಕ ತೆರೆದಿಟ್ಟಿದೆ. ಈ ಹಿಂದೆ ಕ್ಯಾರೆಕ್ಟರ್ ವೀಡಿಯೋ ಬಿಡುಗಡೆಯಾದಾಗಲೇ ಇದೊಂದು ವಿಶಿಷ್ಟವಾದ ಚಿತ್ರ ಎನ್ನುವ ಸ್ಪಷ್ಟ ಸುಳಿವು ಸಿಕ್ಕಿತ್ತು. ಈಗ ಟೀಸರ್ ಅದನ್ನು ಮತ್ತಷ್ಟು ನಿಚ್ಚಳವಾಗಿಸಿದೆ. ಅಷ್ಟಕ್ಕೂ 'ಕೆಂಡ' ಸಿನಿಮಾ ಪ್ರೇಕ್ಷಕರ ಪಾಲಿಗೆ ಇಷ್ಟು ಮುಖ್ಯವಾಗಲು ಕಾರಣವಿದೆ. ಈ ಹಿಂದೆ 'ಗಂಟುಮೂಟೆ'ಯೆಂಬ ಹಿಟ್ ಚಿತ್ರವನ್ನು ರೂಪಿಸಿದ್ದ ತಂಡವೇ 'ಕೆಂಡ' ಚಿತ್ರವನ್ನು ಕಟ್ಟಿಕೊಡುತ್ತಿದೆ. ಆ ಚಿತ್ರವನ್ನು ನಿರ್ದೇಶಿಸಿ ಸೈ ಎನಿಸಿಕೊಂಡಿದ್ದ ರೂಪಾರಾವ್ ಅವರೇ 'ಕೆಂಡ' ಚಿತ್ರವನ್ನು ನಿರ್ಮಿಸಿದ್ದಾರೆ. ಅಮೇಯುಕ್ತಿ ಸ್ಟುಡಿಯೋಸ್ ಮೂಲಕ 'ಗಂಟುಮೂಟೆ' ಚಿತ್ರದ ನಿರ್ಮಾಪಕರಲ್ಲೊಬ್ಬರು ಹಾಗೂ ಅದರ ಛಾಯಾಗ್ರಾಹಕರಾಗಿಯೂ ಕೆಲಸ ಮಾಡಿದ್ದ ಸಹದೇವ್ ಕೆಲವಡಿ 'ಕೆಂಡ'ದ ಮೂಲಕ ಸ್ವತಂತ್ರ ನಿರ್ದೇಶಕರಾಗಿದ್ದಾರೆ. ಮೊದಲ ಹೆಜ್ಜೆಯಲ್ಲಿಯೇ ವಿಭಿನ್ನ ಕಥಾನಕ ಕೈಗೆತ್ತಿಕೊಂಡಿದ್ದಾರೆ. ಬಿ.ವಿ.ಭರತ್, ಪ್ರಣವ್ ಶ್ರೀಧರ್, ವಿನೋದ್ ರವೀಂದ್ರನ್, ಗೋಪಾಲಕೃಷ್ಣ ದೇಶಪಾಂಡೆ ಚಿತ್ರದ ಪ್ರಮುಖ ತಾರಾಗಣದಲ್ಲಿದ್ದಾರೆ, ಜಯಂತ್ ಕಾಯ್ಕಿಣಿ ಅವರ ಪುತ್ರ ರಿತ್ವಿಕ್ ಕಾಯ್ಕಿಣಿ ಈ ಚಿತ್ರದ ಮೂಲಕ ಸಂಗೀತ ನಿರ್ದೇಶಕರಾಗುತ್ತಿದ್ದಾರೆ. ಕಥೆಯೊಂದಿಗೇ ಸಾಗುವ ಎರಡು ಹಾಡುಗಳಿಗೆ ಜಯಂತ್ ಕಾಯ್ಕಿಣಿ ಸಾಹಿತ್ಯ ಬರೆದಿದ್ದಾರೆ. ಶ್ರೇಯಾಂಕ್ ನಂಜಪ್ಪ ಈ ಚಿತ್ರಕ್ಕೆ ಶಬ್ದಸಂಯೋಜನೆ ಮಾಡಿದ್ದಾರೆ. ಟೀಸರ್ ಮೂಲಕ ಕೆಂಡದ ಬಗ್ಗೆ ಕುತೂಹಲದ ಪರ್ವವೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಬೆಂಗಳೂರಿನಲ್ಲಿ 'ಜೋರಾಮ್'




ಬಾಲಿವುಡ್ ನಟ ಪದ್ಮಶ್ರೀ ಮನೋಜ್ ಬಾಜ್ಪೇ ಅಭಿನಯದ ಬಹುನಿರೀಕ್ಷಿತ 'ಜೋರಾಮ್' ಚಿತ್ರವು ಬಿಡುಗಡೆಗೆ ಸಿದ್ಧವಾಗಿದ್ದು, ದೇವಶಿಷ್ ಮಖೀಜಾ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಜೀ ಸ್ಟುಡಿಯೋಸ್ ಈ ಚಿತ್ರವನ್ನು ನಿರ್ಮಿಸಿದೆ. ನಿನ್ನೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಾಯಕ ಮನೋಜ್ ಬಾಜ್ಪೇ, ಕನ್ನಡ ಚಿತ್ರರಂಗವೀಗ ಪ್ರಪಂಚದ ಎಲ್ಲಾ ಕಡೆ ಸದ್ದು ಮಾಡುತ್ತಿದೆ. ನಾನು ನೋಡಿದ 'ಗರುಡ ಗಮನ', 'ಕಾಂತಾರ' ನನ್ನನ್ನು ತುಂಬ ಕಾಡಿದ್ದವು. ಆದಿವಾಸಿ ಜನಾಂಗದ ಕಥೆಯನ್ನು ಹೇಳುವ ಜೋರಾಮ್ ಚಿತ್ರದ ಶೂಟಿಂಗ್ ಮಾಡುವಾಗ ಸಾಕಷ್ಟು ಸಮಸ್ಯೆಗಳನ್ನು ಎದುರಿಸಬೇಕಾಯಿತು. ದೃಶ್ಯವೊಂದರಲ್ಲಿ ಮೂರು ತಿಂಗಳ ಮಗುವಿನೊಂದಿಗೆ ಓಡುವುದು, ಫೈಟ್ ಮಾಡುವುದು ತುಂಬಾ ಕಷ್ಟವಾಗಿತ್ತು. ಮುಂಬೈನಿಂದ ಜಾರ್ಖಂಡ್ ಕಾಡಿಗೆ ಪಯಣ ಬೆಳೆಸುವುದು. ಅಲ್ಲದೆ ಶಾಸಕನ ದಬ್ಬಾಳಿಕೆಯಿಂದ ಬೇಸತ್ತವರು ವ್ಯವಸ್ಥೆಯ ವಿರುದ್ಧ ಹೋರಾಡುವ ಸನ್ನಿವೇಶಗಳು ಚಿತ್ರದಲ್ಲಿ ಪ್ರೇಕ್ಷಕರಿಗೆ ಇಷ್ಟವಾಗುತ್ತವೆ ಎಂಬ ನಂಬಿಕೆಯಿದೆ ಎಂದರು. ಮನೋಜ್ ಬಾಜ್ಪೇ ಅವರ ಪತ್ನಿಯಾಗಿ ತನ್ನಿಷ್ಟ ಚಟ್ಟರ್ಜಿವಾನೋ ನಟಿಸಿದ್ದು, ರಾಜಶ್ರೀ ದೇಶಪಾಂಡೆ, ಮೊಹಮ್ಮದ್ ಜಿಶಾನ್ ರತ್ನಾಕರ್ ಉಳಿದ ಪಾತ್ರಗಳಲ್ಲಿದ್ದಾರೆ. ಮಂಗೇಶ್‌ದಾಕ್ಡೆ ಅವರ ಸಂಗೀತ ಸಂಯೋಜನೆ, ಪಿಯೂಷ್ಪುಟಿ ಛಾಂಯಾಗ್ರಹಣ ಈ ಚಿತ್ರಕ್ಕಿದೆ. ಈಗಾಗಲೇ 'ಜೋರಾಮ್' ಚಿತ್ರವು ಸೌತ್‌ಕೊರಿಯಾ, ಸಿಡ್ನಿ, ನೆದರ್‌ಲ್ಯಾಂಡ್, ಚಿಕಾಗೋ, ಸೌತ್‌ಆಫ್ರಿಕಾ ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡು, ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದೆ.

'ರೋಜಿ' ಚಿತ್ರದಲ್ಲಿ ಲಿಯೋ ಖ್ಯಾತಿಯ ಸ್ಯಾಂಡಿ

ಹೆಡ್‌ಬುಷ್ ಖ್ಯಾತಿಯ ಶೂನ್ಯ ನಿರ್ದೇಶನದ, ಲೂಸ್‌ಮಾದ ಯೋಗಿ ಅಭಿನಯದ 50ನೇ ಚಿತ್ರ 'ರೋಜಿ'. ತಮಿಳಿನ ಹೆಸರಾಂತ ನೃತ್ಯನಿರ್ದೇಶಕ ಸ್ಯಾಂಡಿ ಮಾಸ್ಟರ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ವಿಜಯ್ ಅಭಿನಯದ ಲಿಯೋ ಚಿತ್ರದಲ್ಲಿ ಚಾಕೊಲೇಟ್ ಕಾಫಿ ಪಾತ್ರದಿಂದ ಗಮನ ಸೆಳೆದಿದ್ದ ಸ್ಯಾಂಡಿ ಮಾಸ್ಟರ್ ಇದೀಗ 'ರೋಜಿ' ಚಿತ್ರದಲ್ಲಿ ಅಂಡಾಳ್ ಎಂಬ ಮಂಗಳಮುಖಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಸ್ಯಾಂಡಿ ಮಾಸ್ಟರ್ ಸೇರಿದಂತೆ ಚಿತ್ರದ ನಾಯಕ ಯೋಗಿ, ನಿರ್ಮಾಪಕ ಡಿ.ವೈ.ರಾಜೇಶ್, ನಿರ್ದೇಶಕ ಶೂನ್ಯ ಉಪಸ್ಥಿತರಿದ್ದು, ಮಾತನಾಡಿದರು. ಸ್ಯಾಂಡಿ ಮಾಸ್ಟರ್ ಅವರ ಕ್ಯಾರೆಕ್ಟರ್ ಪೋಸ್ಟರನ್ನು ಈ ಸಂದರ್ಭದಲ್ಲಿ ಬಿಡುಗಡೆಗೊಳಿಸಲಾಯಿತು. ನೃತ್ಯ ನಿರ್ದೇಶಕನಾಗಿ ಹಲವು ಚಿತ್ರಗಳಿಗೆ ಕೆಲಸ ಮಾಡಿದ್ದೇನೆ. 'ಲಿಯೋ' ಚಿತ್ರದಲ್ಲಿ ನಾನು ಮಾಡಿದ ಪಾತ್ರಕ್ಕೆ ಎಲ್ಲರಿಂದಲೂ ಮೆಚ್ಚುಗೆ ವ್ಯಕ್ತವಾಗಿದೆ. ಶೂನ್ಯ ಅವರು ಈ ಚಿತ್ರದ ಕಥೆ ರಚಿಸಿದ್ದಾರೆ. ಅವರು ನನ್ನ ಪಾತ್ರದ ಬಗ್ಗೆ ಹೇಳಿದರು. ಪಾತ್ರ ತುಂಬಾ ಇಷ್ಟವಾಯಿತು ಎಂದರು. ನಂತರ ಲೂಸ್‌ಮಾದ ಯೋಗಿ ಮಾತನಾಡುತ್ತ ಚಿತ್ರದಲ್ಲಿ ನನ್ನ ಪಾತ್ರದ ಹೆಸರೇ ರೋಜಿ. ಈವರೆಗೂ ನಾನು ಮಾಡಿರದ ಪಾತ್ರವಿದು. ಸದ್ಯದಲ್ಲೇ 'ರೋಜಿ' ಚಿತ್ರದ ವಿಭಿನ್ನ ಟೀಸರ್ ಹೊರಬರಲಿದೆ ಎಂದರು.

ಸಿನಿಪದಬಂಧ-504




ಹೆಸರು ____________

ವಿಳಾಸ ____________

____

ದೂರವಾಣಿ ಸಂಖ್ಯೆ ____________



ವಿಜೇತರು: ಆರ್.ಸ್ವಪ್ನ, ನಂ.193/3, ಚಾಮಲಾಪುರ ಮೊಹಲ್ಲಾ, ಮೇದರಬೀದಿ, ನಂಜನಗೂಡು-571301



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 503ರ ಉತ್ತರ

ಕ	ಳ್ಳ	ರ	ಸಂ	ತೆ				ನ		
ಲ್ಲಿ		ಮ್ಯ			ಭ	ವ್ಯ	ಭಾ	ರ	ತ	
ವೀ	ರ	ಬಾ	ಹು		ವ್ಯ			ಹಂ		
ಣೆ		ರ್ನಾ		ಶು		ಅ	ನಂ	ತ	ಸ್ವಾ	ಮಿ
ನು				ಭ		ಮ್ಮ		ಕ		ಡಿ
ಡಿ	ಕ್ಕಿ		ಶ್ರೀ	ಮಂ	ಜು	ನಾ	ಥ		ವೇ	ದ
ಯಿ		ಕಾ		ಗ		ಗ				ಹೃ
ತು	ಳ	ಸಿ	ದ	ಳ		ವೃ		ಹ		ದ
		ನ			ಮಂ		ಪ	ರಿ	ಣ	ಯ
	ಹೊ	ಸ	ಬೆ	ಳ	ಕು			ನಾ		ಗ
		ರ				ಸಾ	ಕು	ಮ	ಗ	ಳು

ಎಡದಿಂದ ಬಲಕ್ಕೆ

1. ವಿಷ್ಣು ಅಭಿನಯದ ಗ್ರಹವೊಂದು ಬೀರಿದ ವಕ್ರ ದೃಷ್ಟಿ 5
3. ಶಶಿಕುಮಾರ್ ದೇವಲೋಕದ ಗಾಯಕ 3
4. ಕಚ್ಚುವ ಹುಳುಗಳು ನಿರ್ಮಿಸಿದ ಪಂಜರ 4
5. ಮಾನಸಿಯ ಜೊತೆ ಬಂದಾತ 2
7. ರಾಜೇಶ್ - ಆರತಿಯ ಪ್ರಸ್ತುತ ಕಾಲಕ್ಕೆ ರಾಜಾಚಂದ್ರ ನಿರ್ದೇಶಕ 4
8. _ _ ಯಜ್ಞ 2
10. " _ _ _ _ _ _ _ ದೇವರು ಗುರುವೇ ಕ್ಷಾರುಣ್ಯಕೆ ದಯ ಮಾಡೋವ್ರೆ.... ",7
12. ಜಗ್ಗೇಶ್ ಪುತ್ರನ ಚಿತ್ರಕ್ಕೆ ರಾಘವ ಲೋಕಿ ನಿರ್ದೇಶಕ 2
13. ಒಲವು ಮೂಡಿದಾಗ ಚಿತ್ರದ ಅಷ್ಟಲಕ್ಷ್ಮಿ ಗೀತೆಯಲ್ಲಿ ಈಕೆ ಇಲ್ಲಿ ಆರುಭದಿ ಅಲ್ಪವಾಗಿದ್ದಾಳೆ 4
15. ಜಿಮ್ಮಿಗಾದ ಶಿಕ್ಷೆ 2
16. ಡೈನಾಮಿಕ್ ಹೀರೋ ದೇವರಾಜ್ ಮಾಡಿದ ಕಗ್ಗೊಲೆ 4
17. ಆಂಗ್ಲದ ಖಳನಾಯಕ 3
18. ಕಲಿಸುವವರ ಜೊತೆ ಕಲಿಯುವವರು ಇದ್ದಾರೆ 5

ಮೇಲಿನಿಂದ ಕೆಳಕ್ಕೆ

1. ಮಾಜಿ ಮುಖ್ಯಮಂತ್ರಿಯೊಬ್ಬರ ಪುತ್ರ ಬಾಣದ ರಭಸದಿ ಮಾಲೆ ಧರಿಸಿ ಕೊನೆಲಿ ನೂಲು ಹಿಡಿದ 9
2. ರಾಜಕುಮಾರ್ ತೆರೆದ ಅದೃಷ್ಟದ ಕದ 6
3. ವಿಷ್ಣು - ಮಾಧವಿ ಅಭಿನಯಕ್ಕೆ ಭಾರ್ಗವ ನಿರ್ದೇಶಕ 6
4. ಬಲೆ ನೇಯ್ದ ಹುಳು 2
6. ಶಹರಿನಲ್ಲಿ ಕಾಣಿಸಿಕೊಂಡು ಮುಂದಾಳತ್ವ ವಹಿಸಿದ್ದವರು 9
9. ದರ್ಶನ್ 'ಧಣಿ' 3
10. ಮುನಿಯನ ಮಾದರಿ ಚಿತ್ರದ ಮಾರ 6
11. ಸುದರ್ಶನ್ ಮಹಾ ಸ್ವಾಮೀಜಿಯಾಗಲು ಅಂಬಿ ಅಭಿನಯವಿದೆ 6
14. ಸಾಯಿಕುಮಾರ್ ಪುಂಡನು ಅಲ್ಲ ಚಂಡನೂ ಅಲ್ಲ... 2

ಮೂರು ದಿನಗಳ ಹನುಮಂತೋತ್ಸವಕ್ಕೆ ಡಿ.24ರಂದು ಚಾಲನೆ

ಶಾಂತಿ, ಸೌಹಾರ್ದತೆಯಿಂದ ಆಚರಿಸಲು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಮನವಿ

ಹುಣಸೂರು, ಡಿ.14– ಪಟ್ಟಣದಲ್ಲಿ ಡಿ.24ರಿಂದ 3 ದಿನಗಳ ಕಾಲ ನಡೆಯುವ ಹನುಮಂತೋತ್ಸವವನ್ನು ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡದೆ ಎಲ್ಲರ ಸಹಕಾರದೊಂದಿಗೆ ಶಾಂತಿ, ಸೌಹಾರ್ದತೆಯಿಂದ ಆಚರಿಸುವಂತೆ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಮನವಿ ಮಾಡಿದ್ದಾರೆ.



ನಗರದ ಪೊಲೀಸ್ ಠಾಣೆಯಲ್ಲಿ ಇಂದು ಮಧ್ಯಾಹ್ನ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಬಾವಿ ಸಭೆಯಲ್ಲಿ ಎಲ್ಲರ ಅಭಿಪ್ರಾಯಗಳನ್ನು ಆಲಿಸಿ ನಂತರ ಮಾತನಾಡಿದ ಅವರು ಹನುಮಂತೋತ್ಸವ ಆಚರಣೆ ಭಕ್ತಿ ಪೂರ್ವಕವಾಗಿರಬೇಕು. ಆಚರಣೆಯ ಜವಾಬ್ದಾರಿಯನ್ನು ಎಲ್ಲರೂ ತೆಗೆದುಕೊಂಡು ಇನ್ನೊಬ್ಬರಿಗೆ ತೊಂದರೆಯಾಗದಂತೆ ಆಚರಿಸಬೇಕು ಎಂದರು. ಮೆರವಣಿಗೆಯಲ್ಲಿ ಡಿ.ಜೆ ಧ್ವನಿವರ್ಧಕಗಳ ಶಬ್ದ 75 ಡೆಸಿಬಲ್‌ಗಿಂತ ಕಡಿಮೆ ಇರಬೇಕು. ಮೆರವಣಿಗೆಯ ಉದ್ದಕ್ಕೂ ಒಂದೆ ತೆರನಾದ ಜೈಕಾರ ಇರಬೇಕು. ಕೆಲವು ಕಡೆ ಪ್ರಚೋದನಾಕಾರಿಯಾಗಿ ವರ್ತಿಸಬಾರದು. ಭಾವುಕತೆಗೆ ಅವಕಾಶ ನೀಡದೆ ಶಾಂತಿ ಸೌಹಾರ್ದತೆಯಿಂದ ಆಚರಿಸಿ ನಾವು ನಿಮ್ಮೊಂದಿಗೆ ಇರುತ್ತೇವೆ ಎಂದರು.

ಮೊದಲಿಗೆ ಆಚರಣ ಸಮಿತಿಯ ವೆಂಕಟನಾರಾಯಣ ದಾಸ್ ಮಾತನಾಡಿ, ನಾವು ಸೌಹಾರ್ದತೆಯಿಂದ ಎಲ್ಲರೊಡಗೂಡಿ ಹನುಮಂತೋತ್ಸವ ಆಚರಿಸುತ್ತೇವೆ. ಡಿ.24 ರಂದು ಅಂಜನೇಯಸ್ವಾಮಿ ದೇವಸ್ಥಾನದಿಂದ ಉತ್ಸವ ಮೂರ್ತಿಯನ್ನು ಮೆರವಣಿಗೆಯಲ್ಲಿ ತಂದು ಮುನೇಶ್ವರ ಕಾವಲ್ ಮೈದಾನದಲ್ಲಿ ಪ್ರತಿಷ್ಠಾಪನೆ ಮಾಡಲಾಗುವುದು. ಮಾರನೆ ದಿನ ವಿಶೇಷ ಪೂಜೆ ಮತ್ತು ವಿವಿಧ ಕ್ರೀಡೆಗಳನ್ನು ನಡೆಸಲಾಗುವುದು. ಡಿ.26 ರಂದು ನಗರದ ರಂಗನಾಥ ಬಡಾವಣೆಯಿಂದ ಮೆರವಣಿಗೆ ಹೊರಟು ಪ್ರಮುಖ ರಸ್ತೆಗಳಲ್ಲಿ ಹನುಮಂತೋತ್ಸವ ಮೆರವಣಿಗೆ ಸಾಗಿ ಕೊನೆಗೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಅಂತ್ಯಗೊಳ್ಳಲಿದೆ ಎಂದು ವಿವರಿಸಿದರು.

ನಗರಸಭಾ ಮಾಜಿ ಅಧ್ಯಕ್ಷರು ಹಾಗೂ ಮುತ್ತು ಮಾರಮ್ಮ ದೇವಸ್ಥಾನದ ಅಧ್ಯಕ್ಷ ಹೆಚ್.ವೈ.ಮಹದೇವ್ರ ಮಾತನಾಡಿ, ಎಲ್ಲಾ ಧರ್ಮಗಳ ಸಹಕಾರ, ಬೆಂಬಲದೊಂದಿಗೆ ಅದ್ದೂರಿಯಾಗಿ ಹನುಮಂತೋತ್ಸವ ಆಚರಣೆ ಮಾಡಲಾಗುವುದು. ಈ ಬಾರಿ 10 ರಿಂದ 15 ಸಾವಿರ ಹನುಮ ಭಕ್ತರು ಸೇರುವ ನಿರೀಕ್ಷೆ ಇದ್ದು ಎಲ್ಲರೂ ಸಾಮರಸ್ಯದಿಂದ ಭಕ್ತಿಪೂರ್ವಕವಾಗಿ ಆಚರಿಸುತ್ತೇವೆ. ಇದಕ್ಕೆ ಪೊಲೀಸ್ ಇಲಾಖೆಯ ಸಹಕಾರವು ಸಹ ಅತಿ ಮುಖ್ಯವಾಗಿದೆ ಎಂದರು. ಆಚರಣಾ ಸಮಿತಿಯ ಗೌರವ ಅಧ್ಯಕ್ಷ ಯೋಗಾ ನಂದಕುಮಾರ್, ಸತ್ಯ ಫೌಂಡೇಷನ್ ಅಧ್ಯಕ್ಷ ಸತ್ಯಪ್ಪ ಮಾತನಾಡಿ ಹುಣಸೂರು ಶಾಂತಿ ಸೌಹಾರ್ದತೆಗೆ ಹೆಸರಾಗಿದ್ದು, ಶಾಂತಿ, ಸುವ್ಯವಸ್ಥೆಗೆ ಕಿಂಚಿತ್ ಧಕ್ಕೆ ಬಾರದ ಹಾಗೆ ಇಲ್ಲಿನ ಜನರು ನಡೆದುಕೊಳ್ಳುತಾರೆ. ಕಳೆದ ಬಾರಿ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಹನುಮ ಭಕ್ತರಿಗೆ ಮುಸ್ಲಿಂ ಬಾಂಧವರು ರಸ್ತೆ ಬದಿ ಮಜ್ಜಿಗೆ, ಪಾನಕ, ಕೊಸಂಬರಿ,ಬಿಸ್ಕೆಟ್ ಹಾಗೂ ತಂಪು ಪಾನೀಯಗಳನ್ನು ನೀಡಿ ಸೌಹಾರ್ದತೆಯಿಂದ ಆಚರಿಸಲು ಸಹಕರಿಸಿ ಮಾನವೀಯತೆ ಮೆರೆದಿದ್ದರು. ಅದೇ ರೀತಿ ಈ ಬಾರಿಯೂ ಎಲ್ಲ ಧರ್ಮದವರ ಸಹಕಾರದಿಂದ ಅದ್ದೂರಿಯಾಗಿ ಆಚರಿಸಲಾಗುವುದು ಎಂದರು.

ಜಿಪಂ ಮಾಜಿ ಸದಸ್ಯ ರಮೇಶ್ ಕುಮಾರ್, ಇಂಟಕ್ ರಾಜು, ಮುಸ್ಲಿಂ ಸಮುದಾಯದ ಸಾಲಿಸಿಟರ್ ಯುವ ವೇದಿಕೆಯ ಮುಖಂಡ ಮುದಾಸಿರ್‌ಖಾನ್ ಮಾತನಾಡಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು.

ಅಡಿಶನಲ್ ಎಸ್ಪಿ ಡಾ.ಬಿ.ಎನ್.ನಂದಿನಿ, ಉಪವಿಭಾಗಧಿಕಾರಿ ರುಚಿಬಿಂದಾಲ್, ಡಿವೈಎಸ್‌ಪಿ ಗೋಪಾಲ ಕೃಷ್ಣ, ಇನ್ಸ್‌ಪೆಕ್ಟರ್ ದೇವೇಂದ್ರ, ನಗರಸಭಾ ಪ್ರಭಾರ ಪೌರಾಯುಕ್ತೆ ಶರ್ಮಿಳಾ, ಮುಖಂಡರಾದ ಎ.ಪಿ. ಸ್ವಾಮಿ, ಗಿರೀಶ್, ಶಿರೆನಹಳ್ಳಿ ಬಸವರಾಜು, ಯೋಗೇಶ್, ಕೃಷ್ಣೇಗೌಡ, ಶಂಕರ್, ವಿ.ಪಿ.ಸಾಯಿನಾಥ್, ಚಂದ್ರಶೇಖರ್, ಮಂಜುನಾಥ್, ಆಶೋಕ್, ಸಯ್ಯದ್ ಅಜೀದ್, ಸೂರೇಗೌಡ, ಮೂರ್ತಿ, ರವಿಶಂಕರ್, ಗೋಪಾಲ್, ರಾಮಣ್ಣ, ಯಶೋದಮ್ಮ, ಸವಿತಾಚವ್ಹಾಣ್. ಸಯ್ಯಾದ್ ರಿಜ್ವಾನ್, ಇಮ್ತಿಯಾಜ್ ನಜಿರ್ ಅಹಮದ್ ಸೇರಿದಂತೆ ಇನ್ನೂ ಅನೇಕರು ಸಭೆಯಲ್ಲಿ ಭಾಗವಹಿಸಿದರು.

ಖಾಸಗಿ ಬಸ್ ಏಜೆಂಟರ ಸಂಘಟನೆ ಮತ್ತಷ್ಟು ಬಲಗೊಳಿಸಲು ಕೈ ಜೋಡಿಸಿ



ತಿ.ನರಸೀಪುರ, ಡಿ.14– ಖಾಸಗಿ ಬಸ್ ಏಜೆಂಟರ ಸಂಘಟನೆಯನ್ನು ಮತ್ತಷ್ಟು ಬಲಗೊಳಿಸಲು ಎಲ್ಲರೂ ಕೈಜೋಡಿಸುವಂತೆ ಖಾಸಗಿ ಬಸ್ ಏಜೆಂಟರ ಸಂಘದ ಗೌರವಾಧ್ಯಕ್ಷ ಹೋಟೆಲ್ (ಲಿಂಗರಾಜು) ರಾಜಣ್ಣ ಮನವಿ ಮಾಡಿದ್ದಾರೆ.

ಪಟ್ಟಣದ ಮಹದೇಶ್ವರ ಕಾಂಪ್ಲೆಕ್ಸ್‌ನಲ್ಲಿ ನಡೆದ ನೂತನ ಪದಾಧಿಕಾರಿಗಳ ಆಯ್ಕೆ ಸಭೆಯಲ್ಲಿ ಅವರು ಮಾತನಾಡಿದರು.

ಏಜೆಂಟರ ಸಂಘ ಇದುವರೆಗೂ ಉತ್ತಮವಾಗಿ ನಡೆಯುತ್ತಿದ್ದು, ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ ಇದೇ ಮಾದರಿಯಲ್ಲಿ ಮುಂದೆಯೂ ಕೂಡ ಸಂಘದ ಸದಸ್ಯರ ಪರಸ್ಪರ ಹೆಚ್ಚಿನ ಸಹಕಾರದಿಂದ ಮುಂದುವರಿಯಬೇಕಿದೆ. ಈ ನಿಟ್ಟಿನಲ್ಲಿ ಎಲ್ಲರೂ ಅಗತ್ಯ ಸಹಕಾರದೊಂದಿಗೆ ಮುಂದುವರಿಯೋಣ ಎಂದು ಹೇಳಿದರು.

ನೂತನ ಅಧ್ಯಕ್ಷ ಶ್ರೀನಿವಾಸ್ ಮಾತನಾಡಿ, ನಮ್ಮ ಸಂಘದ ಅಧ್ಯಕ್ಷರಾಗಿದ್ದ ಪಿ.ಪುಟ್ಟರಾಜು ಸಂಘದ ಕಾರ್ಯ ಚಟುವಟಿಕೆಗಳನ್ನು ನಡೆಸಲು ಮಾರ್ಗದರ್ಶನ ಮಾಡುತ್ತಿದ್ದರು. ಅವರ ನಿಧನದಿಂದ ಸಂಘಕ್ಕೆ ಭಾರಿ ನಷ್ಟವಾಗಿದೆ. ಅವರು ನೀಡಿದ ಮಾರ್ಗದರ್ಶನದಂತೆ ಎಲ್ಲರೂ ಒಮ್ಮತದಿಂದ ಸಂಘವನ್ನು ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗೋಣ ಎಂದರು. ಸಭೆಯಲ್ಲಿ ಕಾರ್ಯದರ್ಶಿ ರಾಜಣ್ಣ, ಉಪಾಧ್ಯಕ್ಷ ಕೆ.ಕುಮಾರ್, ಖಜಾಂಚಿ ನಾಗಲಿಂಗು, ನಿರ್ದೇಶಕರಾದ ಮಾದು, ಶಂಕರ, ಸಿದ್ದಪ್ಪ, ಗಿರೀಶ್, ಮಹೇಶ್, ಸೇರಿದಂತೆ ಇತರರು ಹಾಜರಿದ್ದರು.

ಜಮೀನಿನ ಬೇಲಿಗೆ ಅಕ್ರಮ ವಿದ್ಯುತ್ ಸಂಪರ್ಕ

ವಿದ್ಯುತ್ ಸ್ಪರ್ಶದಿಂದ ಗಂಡಾನೆ ಸಾವು

ಹುಣಸೂರು, ಡಿ.14– ಜಮೀನಿನ ತಂತಿ ಬೇಲಿಗೆ ಅಕ್ರಮವಾಗಿ ಅಳವಡಿಸಲಾಗಿದ್ದ ವಿದ್ಯುತ್ ಸಂಪರ್ಕದಿಂದ ವಿದ್ಯುತ್ ಸ್ಪರ್ಶಿಸಿ ಕಾಡಾನೆಯೊಂದು ಮೃತಪಟ್ಟಿರುವ ಘಟನೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಆನೆ ಚೌಕೂರು ಮೀಸಲು ಅರಣ್ಯ ಪ್ರದೇಶದ ಮರಳು ಕಟ್ಟೆಯ 'ಎ' ಹಾಡಿ ಬಳಿ ಸಂಭವಿಸಿದೆ.




ಸುಮಾರು 30 ವರ್ಷದ ಗಂಡಾನೆ ಸಾವನ್ನಪ್ಪಿದ್ದು, ಜಮೀನಿಗೆ ತಂತಿ ಅಕ್ರಮವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿದ್ದ ಜಮೀನಿನ ಮಾಲೀಕ ಮಣಿ ವಿರುದ್ಧ ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹರ್ಷಕುಮಾರ್ ತಿಳಿಸಿದ್ದಾರೆ.

ಮರಳುಕಟ್ಟೆ 'ಎ' ಹಾಡಿಯ ನಿವಾಸಿ ದಿವಂಗತ ಗೆಜ್ಜೆಮೇಸ್ತ್ರಿ ಅವರ ಪುತ್ರ ಮಣಿ ಬೆಳೆ ರಕ್ಷಿಸಿಕೊಳ್ಳಲು ತಮ್ಮ ಜಮೀನಿನ ಬೇಲಿಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿದ್ದರು. ಇದನ್ನು ಅರಿಯದ 30 ವರ್ಷ ಪ್ರಾಯದ ಗಂಡಾನೆ ಜಮೀನಿಗೆ ನುಗ್ಗಲು ಬೇಲಿ ದಾಟಲೆತ್ನಿಸಿದಾಗ ವಿದ್ಯುತ್ ಸ್ಪರ್ಶಗೊಂಡು ಸಾವನ್ನಪ್ಪಿದೆ ಎಂದು ಅವರು ತಿಳಿಸಿದ್ದಾರೆ.

ಸ್ಥಳಕ್ಕೆ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಭೇಟಿ ನೀಡಿದ್ದರು. ಮುಖ್ಯ ಪಶು ವೈದ್ಯಾಧಿಕಾರಿ ಚೆಟ್ಟಿಯಪ್ಪ ಸಲಗದ ಮರಣೋತ್ತರ ಪರೀಕ್ಷೆ ನಡೆಸಿ, ಆನೆ ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪಿರುವುದಾಗಿ ವರದಿ ನೀಡಿರುವುದರಿಂದ ಪ್ರಕರಣ ದಾಖಲು ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಕಸುವಿನಹಳ್ಳಿ ವೈನ್ ಶಾಪ್‌ಗೆ ಬೀಗ ಜಡಿದ ಗ್ರಾಮಸ್ಥರು

ನಂಜನಗೂಡು, ಡಿ.14– ಸ್ಥಳೀಯರ ವಿರೋಧವನ್ನೂ ಲೆಕ್ಕಿಸದೆ ತೆರೆಯಲಾಗಿದ್ದ ಮದ್ಯದಂಗಡಿಯನ್ನು ಮುಚ್ಚುವಂತೆ ಪ್ರತಿಭಟನೆ ನಡೆಸುತ್ತಿದ್ದ ಗ್ರಾಮಸ್ಥರು ಇಂದು ರೈತ ಸಂಘದ ಕಾರ್ಯಕರ್ತರೊಡಗೂಡಿ ವೈನ್ ಶಾಪ್‌ಗೆ ಬೀಗ ಜಡಿದಿದ್ದಾರೆ.



ಕಸುವಿನಹಳ್ಳಿ ಗ್ರಾಮದ ಸಿದ್ಧಯ್ಯನಹುಂಡಿ ವೃತ್ತದಲ್ಲಿ ನೂತನವಾಗಿ ಆರಂಭಗೊಂಡಿದ್ದ ವೈನ್ ಶಾಪ್ ಮುಂಭಾಗ ಮಂಗಳವಾರ ಧರಣಿ ಪ್ರಾರಂಭಿಸಿದ್ದ ಸ್ಥಳೀಯರು ಅಬಕಾರಿ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ರಾಜ್ಯ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು ಹಾಗೂ ತಾಲೂಕು ರೈತ ಸಂಘದ ಅಧ್ಯಕ್ಷ ಶಿರಮಳ್ಳಿ ಸಿದ್ದಪ್ಪ ಮತ್ತಿತರರು ಮಾತನಾಡಿ ಗ್ರಾಮಸ್ಥರ ವಿರೋಧದ ನಡುವೆಯೂ ವೈನ್ ಶಾಪ್ ತೆರೆಯಲಾಗಿದ್ದು ಸ್ಥಳೀಯ ಗ್ರಾಮ ಪಂಚಾಯತಿಯಿಂದ ಯಾವುದೇ ಅನುಮತಿಯನ್ನೂ ಪಡೆದಿಲ್ಲ. ಈಗಾಗಲೇ ಸ್ಥಳೀಯ ಗ್ರಾಮ ಪಂಚಾಯತಿಯವರು ಮದ್ಯದಂಗಡಿಯನ್ನು ತೆರವುಗೊಳಿಸುವಂತೆ ಸರ್ವಾನುಮತದ ನಿರ್ಣಯವನ್ನು ಅಂಗೀಕರಿಸಿ ಅಧಿಕಾರಿಗಳಿಗೆ ನೀಡಿದ್ದಾರೆ. ಆದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದರು. ಗ್ರಾಮದಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳು ಸಂಚರಿಸುವ ಪ್ರದೇಶದಲ್ಲಿ ವೈನ್ ಶಾಪ್ ತೆರೆದಿರುವುದರಿಂದ ದುಷ್ಪರಿಣಾಮ ಬೀರಲಿದೆ. ಜೊತೆಗೆ ರೈತ, ಕೃಷಿಕ ಹಾಗೂ ಕಾರ್ಮಿಕರು ಮದ್ಯಪಾನದ ಚಟಕ್ಕೆ ಬೀಳುವ ಆತಂಕವಿರುವುದರಿಂದ ತಕ್ಷಣ ವೈನ್ ಶಾಪ್ ಬಂದ್ ಮಾಡಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸ್ಥಳಕ್ಕಾಗಮಿಸಿದ ತಹಶೀಲ್ದಾರ್ ಶಿವಕುಮಾರ್ ಕಾಸ್ನೂರು ಕಸುವಿನಹಳ್ಳಿ ಗ್ರಾಮದ ಮದ್ಯದಂಗಡಿಯನ್ನು ಬಂದ್ ಮಾಡಿಸುವಂತೆ ಗ್ರಾಮಸ್ಥರು ನೀಡಿರುವ ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ತಲುಪಿಸಲಾಗಿದೆ ಎಂದು ಹೇಳಿದರು. ಇನ್ನು ಸ್ಥಳಕ್ಕೆ ಜಿಲ್ಲಾಧಿಕಾರಿ ಆಗಮಿಸಿ ಮದ್ಯದಂಗಡಿಯನ್ನು ತೆರವುಗೊಳಿಸುವ ಆದೇಶ ನೀಡುವವರೆಗೂ ವೈನ್ ಶಾಪ್ ಬಾಗಿಲು ತೆರೆಯಲು ಅವಕಾಶ ನೀಡುವುದಿಲ್ಲ ಎಂದು ಪ್ರತಿಭಟನಾಕಾರರು ನಿರ್ಣಯ ಕೈಗೊಂಡರಲ್ಲದೆ ವೈನ್ ಶಾಪ್‌ಗೆ ಬೀಗ ಜಡಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಕಾರ್ಯದರ್ಶಿ ಹೆಜ್ಜಿಗೆ ಪ್ರಕಾಶ್, ಸಿದ್ದರಾಜು, ಪ್ರೇಮರಾಜ್, ಮರಂಕಯ್ಯ, ಮಹೇಂದ್ರ, ಅಂಕಪ್ಪ ಮತ್ತಿತರರು ಭಾಗವಹಿಸಿದ್ದರು.

ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಕಾಮಗಾರಿ ವೀಕ್ಷಿಸಿದ ಜಿಪಂ ಸಿಇಓ ಗಾಯತ್ರಿ



ಬೆಟ್ಟದಪುರ, ಡಿ.14– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದೇವಿ ಉದ್ಯಾನವನ ಸಮೀಪ ತಾಲೂಕಿನ ಸುಮಾರು 302 ಹಳ್ಳಿಗಳಿಗೆ 248 ಕೋಟಿ ರೂ ವೆಚ್ಚದಲ್ಲಿ ನಡೆಯುತ್ತಿರುವ ಬಹುಗ್ರಾಮ ಕುಡಿಯುವ ನೀರಿನ ಯೋಜನಾ ಕಾಮಗಾರಿ ಸ್ಥಳಕ್ಕೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಸಾರ್ವಜನಿಕರಿಗೆ ಕಾವೇರಿ ನದಿಯಿಂದ ಶುದ್ಧ ಕುಡಿಯುವ ನೀರು ಒದಗಿಸುವ ದೃಷ್ಟಿಯಿಂದ ತ್ವರಿತವಾಗಿ ಗುಣಮಟ್ಟದ ಕಾಮಗಾರಿಯನ್ನು ಮಾಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರ ರಂಜಿತ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರ ಕೃಷ್ಣಮೂರ್ತಿ, ಸಹಾಯಕ ಅಭಿಯಂತರರಾದ ಹಿತೇಶ್, ಸಿದ್ದರಾಜು, ತಾಪಂ ಇಓ ಸುನಿಲ್ ಕುಮಾರ್, ಗ್ರಾ.ಪಂ. ಅಧ್ಯಕ್ಷ ಅಯ್ಯರ್ ಗಿರೀಶ್, ಪಿಡಿಓ ಮಂಜುನಾಥ್, ಜಿಪಂ ಸಹಾಯಕ ಕಾರ್ಯಪಾಲಕ ಅಭಿಯಂತರ ಮಲ್ಲಿಕಾರ್ಜುನ್, ಸಹಾಯಕ ಅಭಿಯಂತರ ಸುಭಾಷ್ ಇದ್ದರು.

ನಗರ್ಲೆಯಲ್ಲಿ ಅಂಗನವಾಡಿ ಕೇಂದ್ರಗಳ ಉದ್ಘಾಟನೆ

ನಗರ್ಲೆ, ಡಿ.14– ನಂಜನಗೂಡು ತಾಲೂಕು ನಗರ್ಲೆ ಗ್ರಾಮದಲ್ಲಿ 2ನೇ ಮತ್ತು 5ನೇ ಅಂಗನವಾಡಿ ಕೇಂದ್ರವನ್ನು ಗ್ರಾಪಂ ಅಧ್ಯಕ್ಷೆ ಶ್ರೀಮತಿ ಮಹದೇವಮ್ಮರವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪರುಶು ರಾವ್, ಗ್ರಾಪಂ ಸದಸ್ಯರುಗಳಾದ ಪ್ರಮೋದ್ ಕುಮಾರ್, ಧರ್ಮೇಂದ್ರ ಮೇಲ್ವಿಚಾರಕಿ ಎಸ್.ಸುಧಾ, ಸುಮನ್ ರಾಜ್, ಮಹದೇವಮ್ಮ, ಸಂಧ್ಯಾ, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಈಶಕುಮಾರ್, ಗ್ರಂಥಪಾಲಕ ನಿಂಗರಾಜು, ಅಂಗನವಾಡಿ ಕಾರ್ಯಕರ್ತೆ ರಾಜಮ್ಮಣ್ಣಿ, ಸವಿತ, ನಂದಿನಿ, ನಾಗಮ್ಮ, ಮಂಗಳಮ್ಮ, ಸಾಧಿಯಾ ಸುಲ್ತಾನ ಹಾಗೂ ಅಂಗನವಾಡಿ ಕೇಂದ್ರದ ಸಹಾಯಕಿಯರು ಗ್ರಾಮದ ಮುಖಂಡರುಗಳು ಹಾಗೂ ಅಂಗನವಾಡಿ ಮಕ್ಕಳು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಫೈಟ್ ಕ್ಲಬ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಅನಿಮಲ್ (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಮಾಯಾ ನಗರಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಸ್‌ಟ್ರಾ (ತೆ)	4 ಪ್ರದರ್ಶನಗಳು
ರಾಜಕಮಲ್	
ಜರುಗಾ ಹುಷಾರುಗಾ(ತೆ)	4 ಪ್ರದರ್ಶನಗಳು
ಸಂಗಂ	
ಸ್ನೇಹರ್ಷಿ (ಕ)	4 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಪ್ತಸಾಗರದಾಚೆ ಎಲ್ಲೋ–ಸೈಡ್ ಬಿ(ಕ)	4 ಪ್ರದರ್ಶನಗಳು
ಪ್ರಭಾ	
ಬಾ ನಲ್ಲೆ ಮದುವೆಗೆ (ಕ) 2 ಪ್ರದರ್ಶನಗಳು, ಹಳ್ಳಿ ಮುಕ್ಕ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10.25ಕ್ಕೆ, ಮ.2.20ಕ್ಕೆ, ಸಂ.6.15ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ವೊಂಕ (ಇಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.1.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಸಂ.4.15ಕ್ಕೆ, ರಾ.7.10ಕ್ಕೆ, ಹಾಯ್ ನಾನ (ತೆ): ರಾ.10.05ಕ್ಕೆ,
ಸ್ಕ್ರೀನ್ 3	ಕೈವ (ಕ): ಬೆ.10.20ಕ್ಕೆ, ಸ್ನೇಹರ್ಷಿ (ಕ): ಮ.1.30ಕ್ಕೆ, ಅನಿಮಲ್ (ಹಿಂ): ಮ.3.55ಕ್ಕೆ, ರಾ.7.40ಕ್ಕೆ.
ಸ್ಕ್ರೀನ್ 4	ಹಾಯ್ ನಾನ (ತೆ): ಬೆ.10.15ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ಕೈವ (ಕ): ಮ.1.20ಕ್ಕೆ, ರಾ.10ಕ್ಕೆ

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಕೈವ (ಕ): ಬೆ.10.20ಕ್ಕೆ, ಅನಿಮಲ್ (ಹಿಂ): ಮ.1.20ಕ್ಕೆ, ಸಂ.5.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಹಾಯ್ ನಾನ (ತೆ): ಮ.12.40ಕ್ಕೆ, ಸಂ.6.55ಕ್ಕೆ, ಕೈವ (ಕ): ಮ.3.55ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಹಾಯ್ ನಾನ (ತೆ): ಬೆ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.15ಕ್ಕೆ, ಅನಿಮಲ್ (ಹಿಂ): ಸಂ.4.25ಕ್ಕೆ, ರಾ.8.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, 12th ಫೇಲ್ (ಹಿಂ): ಮ.3.50ಕ್ಕೆ, ಭಗವಂತ್ ಕೇಸರಿ (ತೆ): ರಾ.7.05ಕ್ಕೆ, ಗಣಪತ್: ಎ ಹೀರೋ (ಹಿಂ): ಸಂ.4.10ಕ್ಕೆ, ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, ಲಿಯೋ (ಕ): ಮ.12.45ಕ್ಕೆ, ಲಿಯೋ (ತ): ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ): ರಾ.10ಕ್ಕೆ, ಟಗರುಪಲ್ಯ (ಕ): ಮ.1ಕ್ಕೆ, ರಾ.7ಕ್ಕೆ, ತೇಜಸ್ (ಹಿಂ): ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸರ್ಕಾರಿ ಪ್ರೌಢಶಾಲೆಗೆ ಕಂಪ್ಯೂಟರ್‌ಗಳ ಕೊಡುಗೆ

ಪಿರಿಯಾಪಟ್ಟಣ: ತಾಲೂಕಿನ ಬೆಟ್ಟದಪುರ ಸಮೀಪದ ದೊಡ್ಡಕಮರಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಗೆ ನಿವೃತ್ತ ಕೃಷಿ ಅಧಿಕಾರಿ ಸಿದ್ದಲಿಂಗಪ್ಪ ಅವರ ಪುತ್ರ ಸಾಫ್ಟ್‌ವೇರ್ ಇಂಜಿನಿಯರ್ ಅರವಿಂದ್ ಅವರು ನಾಲ್ಕು ಕಂಪ್ಯೂಟರ್‌ಗಳನ್ನು ಶಾಲೆಗೆ ನೀಡಿದರು.

ದಾನಿಗಳಾದ ಅರವಿಂದ್ ಅವರು ಮಾತನಾಡಿ ಗ್ರಾಮಾಂತರ ಪ್ರದೇಶದ ಸರ್ಕಾರಿ ಶಾಲೆಗಳನ್ನು ಗ್ರಾಮಸ್ಥರು ಗ್ರಾಮದ ದೇವಾಲಯಗಳಂತೆ ಶಾಲೆಗಳಿಗೂ ಹೆಚ್ಚಿನ ಗಮನ ಹರಿಸಿ ಶಾಲೆಯ ದೇಗುಲ ಎಂಬುದನ್ನು ಸಾರ್ವಜನಿಕರು ಯಶಸ್ವಿಗೊಳಿಸಬೇಕೆಂದರು. ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಅರುಣ್ ಕುಮಾರ್ ಶಿಕ್ಷಕರಾದ ಪಿ.ವಿ. ದೇವರಾಜ್ ಬಿ.ಆರ್.ಮೂರ್ತಿ, ಪಎಂಜೆ ನಂದಿನಿ, ಅನಿತಾ, ನರ್ಗೀಸಾ ಶಾಲಾ ಮಕ್ಕಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಲಿಂಗ ತಾರತಮ್ಯದಿಂದ ಸಾಮಾಜಿಕ ಅಸಮಾನತೆ

ತಿ.ನರಸೀಪುರ, ಡಿ.14– ಸರ್ಕಾರವೇ ಮಹಿಳೆಯರ ಸಬಲೀಕರಣಕ್ಕೆ ಶ್ರಮಿಸುತ್ತಿರುವ ವೇಳೆ ಗಂಡು ಹೆಣ್ಣು ಎಂಬ ತಾರತಮ್ಯ ಸಲ್ಲದು. ಇದರಿಂದ ಸಾಮಾಜಿಕ ಅಸಮಾನತೆ ಉಂಟಾಗುತ್ತದೆ ಎಂದು ಪುರಸಭಾ ಸದಸ್ಯ ತುಂಬಲ ಪ್ರಕಾಶ್ ಹೇಳಿದರು.



ಪಟ್ಟಣದ ಸಿಡಿಎಸ್ ಭವನದಲ್ಲಿ ಪುರಸಭೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಲಿಂಗ ತಾರತಮ್ಯಗಳ ಬಗ್ಗೆ ಅರಿವು ಕಾರ್ಯಕ್ರಮ ಹಾಗೂ ಬೀದಿಬದಿ ವ್ಯಾಪಾರಿಗಳಿಗೆ ಡಿಜಿಟಲ್ ಮೇಳದಡಿ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹೆಣ್ಣು ಮಗಳು ಕಲಿತರೆ ಮನೆಯಲ್ಲಿ ಶಾಲೆ ತೆರೆದಂತೆ ಎಂಬುದು ಇಂದಿಗೂ ನಿಜವಾಗಿದೆ. ಹೆಣ್ಣು ಮಕ್ಕಳು ಗಂಡು ಮಕ್ಕಳಷ್ಟೆ ಸರಿ ಸಮಾನರು. ಯಾರು ಕೀಳು ಯಾರು ಮೇಲು ಎಂಬುದಿಲ್ಲ. ಹೆಣ್ಣು ಮಕ್ಕಳು ಶಿಕ್ಷಣ ಪಡೆಯುವುದನ್ನು ಪ್ರೋತ್ಸಾಹಿಸಲು ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪ್ರೋತ್ಸಾಹಧನ, ಸಹಾಯಧನ ನೀಡುವ ಮೂಲಕ ಸ್ವಾವಲಂಬಿಗಳಾಗಿ ಬದುಕಲು ಅವಕಾಶ ಕಲ್ಪಿಸುತ್ತಿದೆ. ಇಂತಹ ವೇಳೆ ಗಂಡು ಹೆಣ್ಣು ಎಂದು ಲಿಂಗ ತಾರತಮ್ಯ ಮಾಡಿ ಸಾಮಾಜಿಕ ಅಸಮಾನತೆ ತೋರಿಸುವುದು ಹಾಗೂ ಹೆಣ್ಣು ಭ್ರೂಣ ಹತ್ಯೆ ಮಾಡುವುದು ವಿಪರ್ಯಾಸ ಎಂದು ಅವರು ವಿಷಾದ ವ್ಯಕ್ತಪಡಿಸಿದರು.

ಪುರಸಭಾ ಸದಸ್ಯ ಬೈರಾಪುರ ಮಂಜುನಾಥ್ ಮಾತನಾಡಿ, ಗಂಡು ದುಡಿದರೂ ಹೆಣ್ಣು ಮಕ್ಕಳು ಕುಟುಂಬದ ಜವಾಬ್ದಾರಿ ಹೊತ್ತು ನಿರ್ವಹಿಸುತ್ತಾರೆ. ಮಹಿಳೆಯರು ಶಿಕ್ಷಣ ಪಡೆದರೆ ಸ್ವಾವಲಂಬಿ ಜೀವನದ ಜೊತೆಗೆ ಸಾಮಾಜಿಕ,ಆರ್ಥಿಕ ಮುನ್ನಡೆ ಸಾಧಿಸಲು ಸಾಧ್ಯವಾಗುತ್ತದೆ ಎಂದರು.

ಸಮುದಾಯ ಸಂಘಟಕ ಮಹದೇವ್ ಮಾತನಾಡಿ, ಪ್ರಧಾನ ಮಂತ್ರಿ ಆತ್ಮನಿರ್ಭರ್ ಯೋಜನೆಯಡಿ ಬೀದಿಬದಿ ವ್ಯಾಪಾರಿಗಳಿಗೆ ಸ್ವನಿಧಿ, ಡಿಜಿಟಲ್ ಮೇಳದಡಿ ವ್ಯಾಪಾರಿಗಳಿಗೆ ಸ್ಕ್ಯಾನರ್ ಬಳಕೆಯ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದರು

ಕಾರ್ಯಕ್ರಮದಲ್ಲಿ ನಿವೃತ್ತ ಯೋಜನಾಧಿಕಾರಿ ಕೆಂಪರಾಜು. ಹಾಗೂ ಬೀದಿ ಬದಿ ವ್ಯಾಪಾರಿಗಳು ಹಾಜರಿದ್ದರು.

ಒಂಟಿ ಮಹಿಳೆಯರನ್ನು ದೋಚುತ್ತಿದ್ದವನ ಸೆರೆ

ಚಿನ್ನಾಭರಣ, ಬೈಕುಗಳ ವಶ, ಐವರು ಮಹಿಳೆಯರ ಕಿವಿ ಕಟ್

ಹುಣಸೂರು, ಡಿ.14– ವಿಳಾಸ ಕೇಳುವ ನೆಪದಲ್ಲಿ ಕಣ್ಣಿಗೆ ಕಾರದಪುಡಿ ಎರಚಿ ಒಂಟಿ ಮಹಿಳೆಯರನ್ನು ದೋಚುತ್ತಿದ್ದ ಖದೀಮನನ್ನು ಪೊಲೀಸರು ಬಂಧಿಸಿ, ಎರಡು ಬೈಕ್ ಹಾಗೂ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

ತಾಲೂಕಿನ ಕೆಬ್ಬೆಕೊಪ್ಪಲು ಗ್ರಾಮದ ಮಂಜ(22)ಬಂಧಿತ ಆರೋಪಿ.

ಬಿಳಿಕೆರೆ ಠಾಣಾ ವ್ಯಾಪ್ತಿಯಲ್ಲಿ ಕಳೆದ ಎರಡು ತಿಂಗಳ ಹಿಂದೆ ಒಡೆಯರ ಹೊಸಹಳ್ಳಿ, ಉದ್ದೂರು, ಹುಲ್ಲೇನಹಳ್ಳಿ, ಚಿಕ್ಕಾಡಿಗನಹಳ್ಳಿ, ಗುಡ್ಡೆ ಬಸವೇಶ್ವರ ದೇವಾಲಯದ ಬಳಿ ಹಾಗೂ ಗ್ರಾಮಾಂತರ ಠಾಣಾ ವ್ಯಾಪ್ತಿಯ ಸಣ್ಣೇನಹಳ್ಳಿ, ಕೊತ್ತೆಗಾಲ ಗೇಟ್ ಹಾಗೂ ನಾಗನಹಳ್ಳಿ ರಸ್ತೆಯ ರಂಗನಾಥ ಬಡಾವಣೆ ರಸ್ತೆಗಳಲ್ಲಿ ಒಂಟಿ ಮಹಿಳೆಯರ ಬಳಿ ವಿಳಾಸ ಕೇಳುವ ನೆಪದಲ್ಲಿ ಕಣ್ಣಿಗೆ ಕಾರದಪುಡಿ ಎರಚಿ ಚಿನ್ನದ ಸರ ಸೇರಿದಂತೆ ತಾಳಿ, ಗುಂಡು, ಓಲೆಗಳನ್ನು ಕಿತ್ತುಕೊಂಡು ಪರಾರಿಯಾಗುತ್ತಿದ್ದ, ಕೃತ್ಯ ಸಿ.ಸಿ.ಕ್ಯಾಮರಾದಲ್ಲಿ ಪತ್ತೆಯಾಗಿತ್ತು.

ಆರೋಪಿ ಬೆನ್ನತ್ತಿದ ಬಿಳಿ ಕೆರೆ ಪೊಲೀಸರು ಮತ್ತೆ ಕೃತ್ಯಕ್ಕೆ ಹೊಂಚು ಹಾಕುತ್ತಿದ್ದ ವೇಳೆ ಆತನನ್ನು ಬಂಧಿಸಿ, ಹುಣಸೂರಿನ ವಿವಿಧ ಗಿರವಿ ಅಂಗಡಿಗಳಲ್ಲಿ ಗಿರವಿ ಇಟ್ಟಿದ್ದ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ. ಅಲ್ಲದೆ ಮೈಸೂರಿನ ದೇವರಾಜ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿದ್ದ ಬೈಕ್ ಸೇರಿದಂತೆ ಕೃತ್ಯಕ್ಕೆ ಬಳಸಿದ್ದ ಎರಡು ಬೈಕ್‌ಗಳನ್ನು ವಶಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ. ಈ ಹಿಂದೆಯೂ ಸಹ ಬೈಕ್ ಕಳ್ಳತನ ಪ್ರಕರಣದಲ್ಲಿ ಸಿಕ್ಕಿಬಿದ್ದು ಬಂಧನಕ್ಕೊಳಗಾಗಿದ್ದ.

ಯಾವಾಗಲೂ ಒಂಟಿ ಮಹಿಳೆಯರನ್ನೇ ಟಾರ್ಗೆಟ್ ಮಾಡುತ್ತಿದ್ದ ಈತ ಮಹಿಳೆಯರನ್ನು ವಿಳಾಸ ಕೇಳುವ, ಜಾನುವಾರು ಖರೀದಿಸುವ ನೆಪದಲ್ಲಿ ಕಣ್ಣಿಗೆ ಕಾರದಪುಡಿ ಎರಚಿ ಚಿನ್ನಾಭರಣ ಕಿತ್ತು ಪರಾರಿಯಾಗುತ್ತಿದ್ದ ವೇಳೆ ಐದಕ್ಕೂ ಹೆಚ್ಚು ಮಹಿಳೆಯರ ಕಿವಿಯೇ ಹರಿದು ಹೋಗಿತ್ತು.

ಹೆಚ್.ಡಿ.ಕೋಟೆಯಲ್ಲಿ ಮುಂದುವರೆದ ವಕೀಲರ ಪ್ರತಿಭಟನೆ

ಹೆಚ್.ಡಿ.ಕೋಟೆ, ಡಿ.14– ಇತ್ತೀಚಿನ ದಿನಗಳಲ್ಲಿ ನ್ಯಾಯವಾದಿಗಳ ಮೇಲೆ ಹಲ್ಲೆ, ಕೊಲೆ, ಬೆದರಿಕೆಯಂತಹ ಘಟನೆಗಳು ಸಾಮಾನ್ಯವಾಗಿ ನಡೆಯುತ್ತಿವೆ ಎಂದು ವಕೀಲ ಡಿ.ಆರ್.ಮಹೇಶ್ ವಿಷಾದ ವ್ಯಕ್ತಪಡಿಸಿದ್ದಾರೆ.



ಪಟ್ಟಣದ ನ್ಯಾಯಾಲಯದ ಮುಂಭಾಗ ಕಲ್ಬುರ್ಗಿಯ ವಕೀಲ ಈರಣ್ಣಗೌಡ ಪಾಟೀಲ್ ಹತ್ಯೆಯನ್ನು ಖಂಡಿಸಿ ಹಾಗೂ ವಕೀಲರ ಸಂರಕ್ಷಣಾ ಕಾಯಿದೆ ಅನುಷ್ಠಾನಕ್ಕಾಗಿ ಒತ್ತಾಯಿಸಿ ವಕೀಲರು ನಡೆಸುತ್ತಿರುವ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದರು.

ಹಲವಾರು ವರ್ಷಗಳಿಂದ ವಕೀಲರ ಸಂರಕ್ಷಣಾ ಕಾಯಿದೆಯ ಅನುಷ್ಠಾನಕ್ಕಾಗಿ ಹೋರಾಟ ಮಾಡುತ್ತಾ ಬರುತ್ತಿದ್ದಾರೆ. ಈಗ ಬೆಳಗಾವಿಯಲ್ಲಿ ನಡೆಯುತ್ತಿರುವ ಅಧಿವೇಶನದಲ್ಲಿ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ ಕಾಯಿದೆಯನ್ನು ಮಂಡಿಸಿರುವುದು ಸರಿಯಷ್ಟೆ, ಆದರೆ ಸದರಿ ಮಸೂದೆಯು ಹಲ್ಲು ಇಲ್ಲದ ಹಾವಿನಂತೆ ನಿರುಪಯುಕ್ತವಾಗಿದ್ದು, ಆ ಮಸೂದೆಯನ್ನು ಇನ್ನಷ್ಟು ಶಕ್ತಿಯುತವಾಗಿ ಹಾಗೂ ಪರಿಣಾಮಕಾರಿಯಾಗಿ ಜಾರಿಗೆ ತರುವುದು ಅತ್ಯಗತ್ಯವಾಗಿದೆ ಎಂದರು.

ಈ ಮಸೂದೆಯನ್ನು ಇನ್ನಷ್ಟು ಶಕ್ತಿಯುತವಾಗಿ ಹಾಗೂ ಪರಿಣಾಮಕಾರಿಯಾಗಿ ಜಾರಿಗೆ ತರುವಂತೆ ಒತ್ತಾಯಿಸಿ ಹಾಗೂ ಇತ್ತೀಚೆಗೆ ಕಲ್ಬುರ್ಗಿಯ ವಕೀಲ ಈರಣ್ಣಗೌಡ ಪಾಟೀಲರವರ ಘೋರ ಹತ್ಯೆಯನ್ನು ಉಗ್ರವಾಗಿ ನಮ್ಮ ಹೆಗ್ಗಡದೇವನಕೋಟೆ ವಕೀಲರ ಸಂಘವು ಅನಿರ್ದಿಷ್ಟಾವಧಿಯವರೆಗೆ ನ್ಯಾಯಾಲಯದ ಕಲಾಪಗಳಿಂದ ಹೊರಗುಳಿದು ಧರಣಿ ಸತ್ಯಾಗ್ರಹವನ್ನು ನಡೆಸುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ವಕೀಲರ ಸಂಘದ ಅಧ್ಯಕ್ಷ ಎ.ಸಿ.ರವಿಕುಮಾರ್, ಕಾರ್ಯದರ್ಶಿ ಎಚ್.ಎಸ್. ದಿನೇಶ್, ಉಪಾಧ್ಯಕ್ಷ ನಾಗೇಶ್ ಖಜಾಂಚಿ ಚೆಲುವಪ್ಪ, ಸಂಗಮೇಶ್ವರ, ನಾಗೇಶ್, ಸಿ.ಟಿ.ಲೋಕೇಶ್, ಚಂದ್ರಶೇಖರ್, ನಾರಾಯಣಗೌಡ, ಸಿದ್ದಪ್ಪಾಜಿ, ರಾಮನಾಯಕ, ಜವರಯ್ಯ, ಕರೀಗೌಡ, ಡಿ.ಆರ್. ಮಹೇಶ್, ಉಮಾಶಂಕರ್, ಮಣಿರಾಜ್, ಗಂಗರಾಜು ಪುಟ್ಟಸ್ವಾಮಿ ಎ.ಟಿ. ಕೃಷ್ಣ, ರಾಮ ನಾಯ್ಕ, ಜೆ.ಸಿ. ಕುಮಾರ್ ಇದ್ದರು.



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ಹಾಗೂ ಪವಾಡ ಬಸವೇಶ್ವರ ದೇವಾಲಯಗಳಲ್ಲಿ ಕಾರ್ತಿಕ ಮಾಸದ ಕೊನೆಯ ಅಮಾವಾಸ್ಯೆ ಪ್ರಯುಕ್ತ ಉತ್ಸವವನ್ನು ಗ್ರಾಮದ ಉಪ್ಪಾರ ಸಮಾಜದವರು ವಿಜೃಂಭಣೆಯಿಂದ ನೆರವೇರಿಸಿದರು. ಈ ವೇಳೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಲೋಕಸಭೆಯಲ್ಲಿ ಭದ್ರತಾ ಲೋಪ: ಬೆಳಗಾವಿ ಸುವರ್ಣಸೌಧದಲ್ಲಿ ಕಟ್ಟೆಚ್ಚರ



ಬೆಳಗಾವಿ: ಲೋಕಸಭೆಯಲ್ಲಿ 'ಭದ್ರತಾ ಲೋಪ' ನಡೆದು ಆಗಂತುಕರು ಸದನದೊಳಗೆ ನುಗ್ಗಿ ಅವಾಂತರ ಸೃಷ್ಟಿಸಿದ ಬೆನ್ನಲ್ಲೇ ಬೆಳಗಾವಿಯ ಸುವರ್ಣಸೌಧದಲ್ಲಿ ಭದ್ರತೆ ಹೆಚ್ಚಿಸಿ, ಎಲ್ಲೆಡೆ ಕಟ್ಟೆಚ್ಚರ ವಹಿಸಲಾಗಿದೆ. ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ಸುವರ್ಣ ವಿಧಾನಸೌಧದ ಭದ್ರತಾ ವ್ಯವಸ್ಥೆಗಳನ್ನು ಪರಿಶೀಲಿಸಿದ್ದು, ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ತಮ್ಮ ಚೇಂಬರ್‌ನಲ್ಲಿ ಉನ್ನತ ಮಟ್ಟದ ಸಭೆ ನಡೆಸಿದರು. ಸಭೆಯಲ್ಲಿ ಭದ್ರತಾ ಸಿಬ್ಬಂದಿಗೆ ಎಲ್ಲೆಡೆ ಕಟ್ಟೆಚ್ಚರ ವಹಿಸುವಂತೆ ನಿರ್ದೇಶನಗಳನ್ನು ನೀಡಿದರು, ಶಾಸಕರು ಮತ್ತು ಮಂತ್ರಿಗಳೊಂದಿಗೆ ಸಂಬಂಧ ಹೊಂದಿರುವ ವ್ಯಕ್ತಿಗಳ ಮೇಲೆ ಮೇಲ್ವಿಚಾರಣೆಯ ಮಹತ್ವವನ್ನು ಒತ್ತಿ ಹೇಳಿದರು. ಅಲ್ಲದೆ, ಅಧಿಕೃತ ಸಿಬ್ಬಂದಿಗೆ ಮಾತ್ರ ಅವಕಾಶ ನೀಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಏತನ್ಮಧ್ಯೆ, ಭದ್ರತಾ ಸಿಬ್ಬಂದಿ ಸುವರ್ಣಸೌಧ ಪ್ರವೇಶಿಸುವ ಪ್ರತೀ ವ್ಯಕ್ತಿಯನ್ನು ಪರಿಶೀಲನೆ ನಡೆಸುತ್ತಿದ್ದಾರೆ. ಮಾನ್ಯ ಪಾಸ್‌ಗಳನ್ನು ಹೊಂದಿರುವವರಿಗೆ ಮಾತ್ರ ಪ್ರವೇಶವನ್ನು ಅನುಮತಿಸಲಾಗುತ್ತಿದೆ. ಇಬ್ಬರು ಆಗಂತುಕರು ಸಂಸತ್ತಿನ ಸಂದರ್ಶಕರ ಗ್ಯಾಲರಿಯಿಂದ ಲೋಕಸಭೆಯ ಸದಸ್ಯರ ಪೀಠಕ್ಕೆ ಜಿಗಿದು ಹಳದಿ ಬಣ್ಣದ ಅಶ್ರುವಾಯು ಸಿಡಿಸುತ್ತಾ ಓಡಾಡಿದ ಘಟನೆ ಬುಧವಾರ ಲೋಕಸಭೆಯಲ್ಲಿ ನಡೆದಿತ್ತು.ಪರಿಣಾಮ ಸದನವನ್ನುಮಧ್ಯಾಹ್ನ 2 ಗಂಟೆಯವರೆಗೆ ಮುಂದೂಡಲಾಗಿತ್ತು.


ರಿಟರ್ನಿಂಗ್ ಅಧಿಕಾರಿ, ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಜಯನಗರ, ಮೈಸೂರುರವರ ಕಾರ್ಯಾಲಯ


" ಪತ್ರಿಕಾ ಪ್ರಕಟಣೆ "

ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಜಯನಗರ, ಮೈಸೂರು ಈ ಸಹಕಾರಿ ಸಂಘದ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ ಮುಂದಿನ **05** ವರ್ಷಗಳ ಅವಧಿಗೆ ಚುನಾವಣೆಯನ್ನು ದಿನಾಂಕ :**31-12-2023** ರಂದು ಭಾನುವಾರ ಬೆಳ್ಳಿಗೆ **09-00** ಗಂಟೆಯಿಂದ ಸಂಜೆ **04-00** ಗಂಟೆಯವರೆಗೆ ಶ್ರೀ ಕಾವೇರಿ ವಿದ್ಯಾಸಂಸ್ಥೆ, ಕುವೆಂಪುನಗರ, ಮೈಸೂರು ಇಲ್ಲಿ ನಡೆಸಲು ನಿಗಧಿಪಡಿಸಲಾಗಿರುತ್ತದೆ. ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಛಿಸುವವರು ನಾಮಪತ್ರಗಳನ್ನು ದಿನಾಂಕ: **17.12.2023** ರಿಂದ **23.12.2023** ರವರೆಗೆ ಬೆಳಿಗ್ಗೆ **11-00** ಗಂಟೆಯಿಂದ ಮಧ್ಯಾಹ್ನ **03-00** ಗಂಟೆಯವರೆಗೆ ಸಂಘದ ಕಛೇರಿಯಲ್ಲಿ ಸ್ವೀಕರಿಸಲಾಗುವುದು ಹಾಗೂ ನಾಮಪತ್ರಗಳ ಪರಿಶೀಲನೆ–ಯನ್ನು ದಿನಾಂಕ: **24.12.2023** ರಂದು ನಡೆಸಲಾಗುವುದು. ಚುನಾವಣಾ ವೇಳಾ ಪಟ್ಟಿಯನ್ನು ಎಲ್ಲಾ ಅರ್ಹ ಸದಸ್ಯರುಗಳಿಗೆ ಅಂಚೆ ಮೂಲಕ ಈಗಾಗಲೇ ರವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಸಂಘದ ಮುಖ್ಯಕಾರ್ಯನಿರ್ವಹಕರು ಹಾಗೂ ರಿಟರ್ನಿಂಗ್ ಅಧಿಕಾರಿಯನ್ನು ಸಂಪರ್ಕಿಸಲು ಕೋರಲಾಗಿದೆ.

ಸಂಘದ ಸದಸ್ಯರಲ್ಲಿ ವಿಶೇಷ ಸೂಚನೆ : ಸದಸ್ಯರು ಮತ ಚಲಾಯಿಸಲು ಸಂಘದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸಬೇಕಾಗಿರುವುದರಿಂದ ಮಾನ್ಯ ಸದಸ್ಯರುಗಳು ಸಂಘದಿಂದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪಡೆಯಲು ಸೂಚಿಸಿದೆ.

ಸಹಿ/– (ರಾಜು. ಬಿ)
ರಿಟರ್ನಿಂಗ್ ಅಧಿಕಾರಿ,
ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ.,
ಜಯನಗರ, ಮೈಸೂರು.





ಮೈಸೂರು ಮಿತ್ರ

ಬೇಕಾಗಿದ್ದಾರೆ

ಡಿಟಿಪಿ ಆಪರೇಟರ್

ಪೇಜ್‌ಮೇಕರ್ 7, ಫೋಟೋಶಾಪ್, ಕೋರಲ್‌ಡ್ರಾ,
ನುಡಿ ಮತ್ತು ಬರಹ ಲಿಪಿ ಗೊತ್ತಿರಬೇಕು.
ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವುಳ್ಳ ಸ್ವವಿವರದೊಂದಿಗೆ
ಕೂಡಲೇ ಸಂಪರ್ಕಿಸಿ. ಸಮಯ: ಮಧ್ಯಾಹ್ನ 3 ರಿಂದ 5

ವ್ಯವಸ್ಥಾಪಕ ಸಂಪಾದಕರು 'ಮೈಸೂರು ಮಿತ್ರ'
ಪ್ರಾದೇಶಿಕ ಬೆಳಗಿನ ಪತ್ರಿಕೆ, ಬನ್ನಿಮಂಟಪ, ಮೈಸೂರು-570015

PUBLIC NOTICE

Notice is hereby given that SRI.S.BASAVARAJU, son of Late L.Shivalingappa, is agreed to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE - 570 002, within 7 (Seven) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY: Residential Site No. 2418, situated at Vijayanagar II Stage, Devaraja Mohalla, Mysore City, measuring East to West 24 Meters and North to South 15 Meters, totally measuring 360 Square Meters, bounded on East: Road, West: Site No. 2409, North: Site No.2417, South: Site No.2419.

Sd/- Dhirendra Kumar R. Mehta
Advocate KEY-ANS LAW SOLUTIONS
Date: 14.12.2023 Place: Mysore

ಸಾರ್ವಜನಿಕರ ತಿಳುವಳಿಕೆಗೆ

ನಮ್ಮ ಕಕ್ಷಿದಾರರು ತನಿಷ್ಕ್ ಗೌರವ್ ಬಿನ್ ಟಿ.ಎನ್.ಮಂಜುನಾಥ್, ವಯಸ್ಸು 08 ವರ್ಷ, ಹಾಲಿ ವಾಸ ನಂ. 176/1, 14ನೇ 'ಎ'ಮೇನ್, 8ನೇ 'ಬಿ' ಕ್ರಾಸ್, ವಿವರ್ಸ್ ಲೇಔಟ್, ವಿಜಯನಗರ 2ನೇ ಹಂತ, ಬೆಂಗಳೂರು – 560 040, ಇವರು ಅಪ್ರಾಪ್ತ ವಯಸ್ಕರಾಗಿರುವ ಪ್ರಯುಕ್ತ ಅವರ ತಂದೆ ಹಾಗೂ ಮೈನರ್ ಗಾರ್ಡಿಯನ್ ಶ್ರೀ ಟಿ.ಎನ್. ಮಂಜುನಾಥ್ ಇವರ ಇರಾದೆ ಮೇರೆ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿ ವಿವರಿಸಿರುವ ಸ್ವತ್ತುಗಳು ನಮ್ಮ ಕಕ್ಷಿದಾರರಾದ ತನಿಷ್ಕ್ ಗೌರವ್ ಬಿನ್ ಟಿ.ಎನ್. ಮಂಜುನಾಥ್. ಇವರ ಸಂಪೂರ್ಣ ಮಾಲೀಕತ್ವಕ್ಕೆ ಒಳಪಟ್ಟಿದ್ದು, ಸದರಿ ಸ್ವತ್ತುಗಳು ಹಾಗೂ ಇತರೆ ಸ್ವತ್ತುಗಳು ನಮ್ಮ ಮೇಲ್ಕಂಡ ಕಕ್ಷಿದಾರರಿಗೆ ಅವರ ತಾತ ಟಿ.ಎನ್. ನಾಗರಾಜು ಬಿನ್ ಲೇಟ್ ಟಿ.ಎಸ್. ನಾಗಪ್ಪ ಇವರು ಬರೆದು ನೋಂದಾಯಿಸಿದ ವಿಲ್ ಯಾ ಮರಣಶಾಸನ ಪತ್ರದ ಮುಖೇನ ಬಂದಿದ್ದು, ಸದರಿ ಟಿ.ಎನ್.ನಾಗರಾಜುರವರು ದಿನಾಂಕ: 06.10.2022ರಂದು ಮೃತಪಟ್ಟಿರುತ್ತಾರೆ. ನಮ್ಮ ಕಕ್ಷಿದಾರರ ತಾತಾ ಟಿ.ಎನ್. ನಾಗರಾಜುರವರು ಅವರ ಜೀವಿತ ಕಾಲದಲ್ಲಿ ಷೆಡ್ಯೂಲ್ ಸ್ವತ್ತುಗಳ ಬಗ್ಗೆ ವಿಲ್ಲಿನ ಹೊರತಾಗಿ ಯಾವುದೇ ಕ್ರಯ. ವಿಲೇ, ವಗೈರೆ ಮಾಡಿರುವುದಿಲ್ಲ. ನಮ್ಮ ಕಕ್ಷಿದಾರರ ತಾತ ಟಿ.ಎನ್. ನಾಗರಾಜುರವರ ತಮ್ಮನ ಹೆಂಡತಿ ಹೆಚ್.ಎಸ್.ಉಮಾ ಮಹೇಶ್ವರಿ, ಅವರ ಮಕ್ಕಳಾದ ಶ್ರೀಕಾಂತ್.ಎಸ್ ಹಾಗೂ ಶೃತಿ ಎಸ್, ಇವರುಗಳು ಷೆಡ್ಯೂಲ್ ಸ್ವತ್ತುಗಳನ್ನು ಅಕ್ರಮ ಹಾಗೂ ಕಾನೂನು ಬಾಹಿರವಾಗಿ ಪರಬಾರೆ ಮಾಡಲು ಪ್ರಯತ್ನಿಸುತ್ತಿದ್ದು, ಸದರಿ ಹೆಚ್.ಎಸ್. ಉಮಾ ಮಹೇಶ್ವರಿ, ಅವರ ಮಕ್ಕಳಾದ ಶ್ರೀಕಾಂತ್. ಎಸ್. ಹಾಗೂ ಶೃತಿ ಎಸ್, ಇವರುಗಳಿಗೆ ಷೆಡ್ಯೂಲ್ ಸ್ವತ್ತುಗಳ ಮೇಲೆ ಯಾವುದೇ ಹಕ್ಕು, ಹಿತಾಸಕ್ತಿ ಯಾ ಸ್ವಾಧೀನತೆ ಇರುವುದಿಲ್ಲವೆಂದು ಸಾರ್ವಜನಿಕರ ಗಮನಕ್ಕೆ ಈ ಮೂಲಕ ತರುತ್ತಿದ್ದು, ಸದರಿ ಉದ್ದೇಶಿತ ಕ್ರಯ, ಇತರೆ ಪರಬಾರೆ ವಗೈರೆಗಳು ಕಾನೂನು ಬದ್ಧವಲ್ಲವೆಂದು ತಿಳಿಯುವುದು ಹಾಗೂ ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯುವುದು.

ಷೆಡ್ಯೂಲ್

ಐಟಂ ನಂ. 1: ಮೈಸೂರು ಜಿಲ್ಲೆ, ಟಿ.ನರಸೀಪುರ ಟೌನ್, ಪುರಸಭೆ ವ್ಯಾಪ್ತಿ, ನಂಜನಗೂಡು ರಸ್ತೆಯಲ್ಲಿರುವ ಖಾತೆ ನಂ. 990, 993, ಅಸೆಸ್‌ಮೆಂಟ್ ನಂಬರ್ 990/993/910, ಆಸ್ತಿ ಸಂಖ್ಯೆ: 12–4–130, ಪೂರ್ವ–ಪಶ್ಚಿಮ: 50 ಅಡಿ, ದಕ್ಷಿಣೋತ್ತರ: 80 ಅಡಿ ಅಳತೆಯುಳ್ಳ ಖಾಲಿ ನಿವೇಶನಕ್ಕೆ ಚೆಕ್ಕುಬಂದಿ: ಪೂರ್ವಕ್ಕೆ: ಜಿ.ವಿ.ದ್ವಾರಕರವರ ಮನೆ ; ಪಶ್ಚಿಮಕ್ಕೆ: ಟಿ.ಎನ್. ನಾಗರಾಜುರವರ ಖಾಲಿ ಜಾಗ ; ಉತ್ತರಕ್ಕೆ: ಸಿಲ್ವರ್ ಜ್ಯುಬಿಲಿ ಅಸೋಸಿಯೇಷನ್‌ರವರ ಖಾಲಿ ಜಾಗ ; ದಕ್ಷಿಣಕ್ಕೆ: ಸ್ವತ್ತಿನ ಸಂಖ್ಯೆ 02.

ಐಟಂ ನಂ. 2: ಮೈಸೂರು ಜಿಲ್ಲೆ, ಟಿ.ನರಸೀಪುರ ಟೌನ್, ಪುರಸಭೆ ವ್ಯಾಪ್ತಿ, ನಂಜನಗೂಡು ರಸ್ತೆಯಲ್ಲಿರುವ ಖಾತೆ ಅಸೆಸ್‌ಮೆಂಟ್ ನಂಬರ್ ನಂ. 991/994/911, ಆಸ್ತಿ ಸಂಖ್ಯೆ: 5–4–58, ಪೂರ್ವ–ಪಶ್ಚಿಮ: 50 ಅಡಿಗಳು ; ದಕ್ಷಿಣೋತ್ತರ: 60 ಅಡಿಗಳು ಅಳತೆಯುಳ್ಳ ಖಾಲಿ ನಿವೇಶನ ಹಾಗೂ ಇದಕ್ಕೆ ಲಗತ್ತಾಗಿರುವ ಪುರಸಭೆಯಿಂದ ಖರೀದಿಸಿರುವ ಪೂರ್ವ–ಪಶ್ಚಿಮ: 50 ಅಡಿಗಳು, ದಕ್ಷಿಣೋತ್ತರ: 60 ಅಡಿಗಳು ಅಳತೆಯುಳ್ಳ ನಿವೇಶನ ಸೇರಿದಂತೆ ಒಟ್ಟು ಅಳತೆ **50x80** ಅಡಿಗಳುಳ್ಳ ಖಾಲಿ ನಿವೇಶನಕ್ಕೆ ಚೆಕ್ಕುಬಂದಿ: ಪೂರ್ವಕ್ಕೆ: ಟಿ.ಎನ್. ನಾಗರಾಜು ರವರ ಖಾಲಿ ಜಾಗ ; ಪಶ್ಚಿಮಕ್ಕೆ : ನಂಜನಗೂಡು ರಸ್ತೆಯಿಂದ ಲಿಂಕ್ ರಸ್ತೆಗೆ ಹೋಗುವ ರಸ್ತೆ ; ಉತ್ತರಕ್ಕೆ ಸಿಲ್ವರ್ ಜ್ಯುಬಿಲಿ ಅಸೋಸಿಯೇಷನ್ ರವರ ಖಾಲಿ ನಿವೇಶನ ; ದಕ್ಷಿಣಕ್ಕೆ : ನಂಜನಗೂಡು ರಸ್ತೆ.

ಐಟಂ ನಂ. 3: ಮೈಸೂರು ಜಿಲ್ಲೆ, ಟಿ.ನರಸೀಪುರ ಟೌನ್, ಪುರಸಭೆ ವ್ಯಾಪ್ತಿ, ಮಾರ್ಕೆಟ್ ರಸ್ತೆ, (ಮುರುಗನ್ ಟಾಕೀಸ್ ಎದುರು)ಯಲ್ಲಿರುವ ಖಾತೆ ಜಂಜರ್ ನಂ. 35. ಸರ್ವೆ ನಂ. 12/24, ನಿವೇಶನ ಸಂಖ್ಯೆ: 1462, ಮುನಿಸಿಪಲ್ ಅಸೆಸ್‌ಮೆಂಟ್ ನಂಬರ್ 1535/1462, ಆಸ್ತಿ ಸಂಖ್ಯೆ: 6–1–47, ಒಟ್ಟು ಅಳತೆ ಪೂರ್ವ–ಪಶ್ಚಿಮ: 50 ಅಡಿಗಳು, ದಕ್ಷಿಣೋತ್ತರ: 30ಅಡಿ ಅಳತೆಯುಳ್ಳ ಖಾಲಿ ನಿವೇಶನಕ್ಕೆ ಚೆಕ್ಕುಬಂದಿ: ಪೂರ್ವಕ್ಕೆ: ಮಾರ್ಕೆಟ್ ರಸ್ತೆ ; ಪಶ್ಚಿಮಕ್ಕೆ: ಟಿ.ಎನ್.ನಾಗರಾಜುರವರ ಖಾಲಿ ಜಾಗ ; ಉತ್ತರಕ್ಕೆ ಮಹದೇವಸ್ವಾಮಿರವರ ಅಂಗಡಿ ; ದಕ್ಷಿಣಕ್ಕೆ : ಗೌರಮ್ಮ ಕೋಂ ಸಿದ್ದಯ್ಯನರವರ ಮಳಿಗೆಗಳು ಮತ್ತು ಖಾಲಿ ನಿವೇಶನ. ಐಟಂ ನಂ. 4: ಮೈಸೂರು ಜಿಲ್ಲೆ, ಟಿ.ನರಸೀಪುರ ಟೌನ್, ಪುರಸಭೆ ವ್ಯಾಪ್ತಿ, ಮಾರ್ಕೆಟ್ ರಸ್ತೆ, (ಮುರುಗನ್ ಟಾಕೀಸ್ ಎದುರು)ಯಲ್ಲಿರುವ ಖಾತೆ ಜಂಜರ್ ನಂ. 1597, ನಿವೇಶನ ಸಂಖ್ಯೆ: 7, ಮುನಿಸಿಪಲ್ ಅಸೆಸ್‌ಮೆಂಟ್ ನಂಬರ್ 1676ಬಿ 1597/ಬಿ, ಸ್ವತ್ತಿನ ಸಂಖ್ಯೆ: 6–501–4, ಒಟ್ಟು ಅಳತೆ ಪೂರ್ವ–ಪಶ್ಚಿಮ: 20 ಅಡಿಗಳು, ದಕ್ಷಿಣೋತ್ತರ: 30 ಅಡಿ ಅಳತೆಯುಳ್ಳ ಖಾಲಿ ನಿವೇಶನಕ್ಕೆ ಚೆಕ್ಕುಬಂದಿ: ಪೂರ್ವಕ್ಕೆ : ಟಿ.ಎನ್.ನಾಗರಾಜುರವರ ಖಾಲಿ ನಿವೇಶನ ; ಪಶ್ಚಿಮಕ್ಕೆ : ರಸ್ತೆ ; ಉತ್ತರಕ್ಕೆ : ಸೈಟ್ ನಂ. 8ರಲ್ಲಿರುವ ಮಹದೇವಸ್ವಾಮಿರವರ ಅಂಗಡಿ ಮಳಿಗೆ ಹಾಗೂ ಮನೆ ; ದಕ್ಷಿಣಕ್ಕೆ: ಗೌರಮ್ಮ ಕೋಂ ಸಿದ್ದಯ್ಯನರವರ ನಿವೇಶನ.

ಸಹಿ/– ಶ್ರೀ ರಾಮರವೀಂದ್ರ ಎನ್., ಶ್ರೀಮತಿ ಎಂ.ಎನ್. ಸುಮನ, ವಕೀಲರು,
"ಅಮರ", ನಂ. 1226/1, 3ನೇ ಮುಖ್ಯ ರಸ್ತೆ,
ಕೃಷ್ಣಮೂರ್ತಿಪುರಂ, ಮೈಸೂರು–570 004.
Mob: 9449264556, 9448177117, 0821-2333998.
ಸ್ಥಳ: ಮೈಸೂರು, ದಿನಾಂಕ: 13–12–2023



ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು



ಸಾರ್ವಜನಿಕ ತಿಳುವಳಿಕೆ ಪತ್ರ

ನಮ್ಮ ಕಕ್ಷಿದಾರರು ಹೆಚ್.ಕೆ.ರಾಜಶೇಖರ್ ಬಿನ್ ಹೆಚ್.ಎಸ್.ಕೃಷ್ಣಪ್ಪಗೌಡ ನಂಬರ್ 09, ಕೆ.ಆರ್.ಮಿಲ್ ಎದುರು, ಕೆ.ಆರ್.ಮಿಲ್ ಕಾಲೋನಿ, ಆರ್.ಬಿ.ಐ ಪೋಸ್ಟ್, ಬೆಂಗಳೂರು ಮೇನ್ ರೋಡ್ ಮೈಸೂರು ತಾಲ್ಲೂಕು ರವರಿಂದ ಷೆಡ್ಯೂಲ್ ಆಸ್ತಿಗಳನ್ನು ಖರೀದಿ ಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡಿದ್ದು ಈ ಕ್ರಯದ ವ್ಯವಹಾರಕ್ಕೆ ಯಾರದಾದರೂ ಯಾವುದಾದರೂ ತಕರಾರು ಅಥವಾ ಈ ಆಸ್ತಿಗಳ ಬಗ್ಗೆ ಹಕ್ಕು ಭಾದ್ಯತೆಗಳಿದ್ದಲ್ಲಿ ಈ ತಿಳುವಳಿಕೆ ಪತ್ರ ಪ್ರಕಟವಾದ ಹತ್ತು ದಿನಗಳೊಳಗಾಗಿ ಲಿಖಿತವಾಗಿ ಅದಕ್ಕೆ ಸಂಬಂಧಿಸಿದ ದಾಖಲಾತಿಗಳೊಡನೆ ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಕಾನೂನುಬದ್ಧ ತಕರಾರು ಬರದಿದ್ದಲ್ಲಿ ಈ ವ್ಯವಹಾರಕ್ಕೆ ಯಾರದೂ ಯಾವ ಆಕ್ಷೇಪಣೆಯೂ ಇಲ್ಲ ಎಂದು ತಿಳಿದು ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸಲಾಗುವುದು ಮತ್ತು ನಂತರ ಬರುವ ಯಾವ ತಕರಾರಿಗೂ ನಮ್ಮ ಕಕ್ಷಿದಾರರು ಭಾದ್ಯರಾಗುವುದಿಲ್ಲ ಎಂದು ತಿಳಿಯುವುದು.

ಷೆಡ್ಯೂಲ್ ವಿವರ : ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಕೊತ್ತೇಗಾಲ ಗ್ರಾಮದ ಸರ್ವೆ ನಂ. 26/3, 26/5, 27/1, 27/4 ಗಳಿಗೆ ಚಕ್ಕುಬಂದಿ:–

ಸರ್ವೆ ನಂಬರ್	ಹಿಂದಿನ ಸರ್ವೆ ನಂಬರ್	ವಿಸ್ತೀರ್ಣ ಎ–ಗುಂ	ಚಕ್ಕುಬಂದಿ			
			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
26/3	26	1–00	ರಸ್ತೆ	ಸರ್ವೆ ನಂ. 27/1 ರ ಜಮೀನು	ರಾಮೇಗೌಡ ರವರ ಜಮೀನು	ಶಿವಣ್ಣ ರವರ ಜಮೀನು
26/5	26	0–20	ತಿಮ್ಮೇಗೌಡ ರವರ ಜಮೀನು	ರಸ್ತೆ	ಶಿವಣ್ಣ ರವರ ಜಮೀನು	ತಿಮ್ಮೇಗೌಡ ರವರ ಜಮೀನು
27/1	27	2–30	ಸಿ.ಎ. ರಾಮಚಂದ್ರ ರವರ ಜಮೀನು	ಬಸವೇಗೌಡ ರವರ ಜಮೀನು	ಸರ್ವೆ ನಂ. 26 ರ ಜಮೀನು	ಜಯರಾಮೇಗೌಡ ರವರ ಜಮೀನು
27/4	27	1–00	ಸರ್ವೆ ನಂ. 27/2 ರ ಜಮೀನು	ಸರ್ವೆ ನಂ. 30 ರ ಜಮೀನು	ಸರ್ವೆ ನಂ. 27/1 ರ ಜಮೀನು	ಜಯರಾಮೇಗೌಡ ರವರ ಜಮೀನು
	ಒಟ್ಟು	5–10				

Sd/- O. Shama Bhat, B.A., LL.B, Reg. No. KAR 417/77
O. Sathisha, B.Sc., LL.B, Reg. No. KAR 721/89, Advocates, #20/C, 2nd Floor,
Near Airlines Hotel, Jayalakshmi Vilas Road, Chamarajapuram,
Date: 12-12-2023 Mysuru-570 005. Ph: 0821-4262475. Email: shamsathisha@gmail.com